ಪಟ್ಟಣ ಸಹಕಾರ

ಬ್ಯಾಂಕಿಂಗ್ ಪ್ರಪಂಚ

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ

ಸಂಪುಟ : 12
ಸಂಚಿಕೆ : 04
ಅಕ್ಟೋಬರ್/ನವೆಂಬರ್/ಡಿಸೆಂಬರ್ : 2024
ಪುಟಗಳು : 44

ಬ್ಯಾಂಕಿಂಗ್ ಕಾನೂನಿಗೆ ತಿದ್ದುಪಡಿ, ಬ್ಯಾಂಕಿಂಗ್ ವಲಯ ಇನ್ನಷ್ಟು ಪ್ರಬಲ ಹಾಗೂ ಹೂಡಿಕೆದಾರರ ಹಿತಾಸಕ್ತಿಯೂ ರಕ್ಷಣೆ: ನಿರ್ಮಲಾ ಸೀತಾರಾಮನ್

110 ವರ್ಷಗಳನ್ನು ದಾಟಿ ಪ್ರಗತಿ ಪಥದಲ್ಲಿ ಸಾಗಿರುವ ಧಾರವಾಡದ ರಡ್ಡಿ ಸಹಕಾರ ಬ್ಯಾಂಕ್ ನಿ.,

ಸುವರ್ಣ ಮಹೋತ್ಸವ ಸಂಭ್ರಮದಲ್ಲಿ ದಿ ಗಾಂಧಿ ಗಂಜ ಕೋ-ಆಪರೇಟಿವ್ ಬ್ಯಾಂಕ್ ಲಿ, ಬೀದರ

ಸಾರ್ಥಕ 100 ವಸಂತಗಳನ್ನು ಪೂರೈಸಿ ಪ್ರಗತಿ ಪಥದಲ್ಲಿ ಸಾಗಿರುವ ವೈಶ್ಯ ಕೋ-ಆಪರೇಟಿವ್ ಬ್ಯಾಂಕ್, ತುಮಕೂರು

ರಡ್ಡಿ ಸಹಕಾರ ಬ್ಯಾಂಕಿನ ಶತಮಾನೋತ್ಸವ ಸಮಾರಂಭವನ್ನು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ವೇಮನಾನಂದ ಮಹಾಸ್ವಾಮಿಗಳು, ಶ್ರೀ ಮಹಾಯೋಗಿ ವೇಮನ ಸಂಸ್ಥಾನಮಠ, ಎರೆಹೊಸಳ್ಳಿ, ಡಾ. ಮ.ನಿ.ಪ್ರ. ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿಗಳು, ಮುರುಘಾಮಠ, ಧಾರವಾಡ, ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಎಚ್.ಕೆ. ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.

ವೈಶ್ಯ ಕೋ–ಆಪರೇಟಿವ್ ಬ್ಯಾಂಕಿನ ಶತಮಾನೋತ್ಸವ ಸಮಾರಂಭವನ್ನು ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್. ಗೋವಿಂದರಾಜು, ಉಪಾಧ್ಯಕ್ಷರಾದ ರಾಮಮೂರ್ತಿ, ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ದಿ ದಾವಣಗೆರೆ–ಹರಿಹರ ಅರ್ಬನ್ ಬ್ಯಾಂಕಿನ ಸುವರ್ಣ ಮಹೋತ್ಸವ ಸಮಾರಂಭವನ್ನು ಕೇಂದ್ರ ಸಚಿವರಾದ ಶ್ರೀ ಎಚ್.ಡಿ. ಕುಮಾರಸ್ವಾಮಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿಗಳು, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕರಾದ ಎಚ್.ಎಸ್. ಶಿವಶಂಕರ್, ಎಂ.ಪಿ. ರೇಣುಕಾಚಾರ್ಯ, ಬ್ಯಾಂಕಿನ ಅಧ್ಯಕ್ಷ ಎನ್.ಎ. ಮುರುಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಬೀದರ ದಿ ಗಾಂಧಿ ಗಂಜ ಕೋ–ಆಪರೇಟಿವ್ ಬ್ಯಾಂಕಿನ ಸುವರ್ಣ ಮಹೋತ್ಸವ ಸಮಾರಂಭವನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಎಚ್.ಕೆ. ಪಾಟೀಲರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪರಮಪೂಜ್ಯ ಡಾ. ಬಸವಲಿಂಗ ಪಟ್ಟದ್ದೇವರು, ಅಧ್ಯಕ್ಷರು, ಅನುಭವ ಮಂಟಪ ಬಸವಕಲ್ಯಾಣ, ಅರಣ್ಯ, ಜೈವಿಕ ಮತ್ತು ಪರಿಸರ ಸಚಿವರಾದ ಶ್ರೀ ಈಶ್ವರ ಬಿ. ಖಂಡ್ರೆ, ಪೌರಾಡಳಿತ ಸಚಿವರಾದ ಶ್ರೀ ರಹೀಂ ಖಾನ್, ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ, ಡಾ. ಸಿದ್ದಲಿಂಗಪ್ಪ ಪಾಟೀಲ, ಎಂ.ಜಿ. ಮುಳೆ, ಡಾ. ಚಂದ್ರಶೇಖರ ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.

ಬಾಗಲಕೋಟೆಯಲ್ಲಿ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಆಯೋಜಿಸಿದ್ದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರಂಭವನ್ನು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ನವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅಬಕಾರಿ ಸಚಿವರಾದ ಶ್ರೀ ಆರ್.ಬಿ. ತಿಮ್ಮಾಪುರ, ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ, ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶ್ರೀ ಶಿವಾನಂದ ಎಸ್. ಪಾಟೀಲ, ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೇಗೌಡ, ಶಾಸಕರುಗಳಾದ ಶ್ರೀ ಜೆ.ಟಿ. ಪಾಟೀಲ, ಶ್ರೀ ವಿಜಯಾನಂದ ಎಸ್. ಕಾಶಪ್ಪನವರ, ಮಾಜಿ ಸಚಿವರಾದ ಶ್ರೀ ಎಸ್.ಆರ್. ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

ಬೀದರದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಆಯೋಜಿಸಿದ್ದ 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಅರಣ್ಯ, ಜೈವಿಕ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ ಬಿ. ಖಂಡ್ರೆ ಯವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪೌರಾಡಳಿತ ಹಾಗೂ ಹಜ್ ಸಚಿವರಾದ ಶ್ರೀ ರಹೀಂ ಖಾನ್, ಶಾಸಕರುಗಳಾದ ಡಾ. ಸಿದ್ದಲಿಂಗಪ್ಪಾ ಎಸ್. ಪಾಟೀಲ, ಡಾ. ಶೈಲೇಂದ್ರ ಬೆಲ್ದಾಳೆ, ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅಮರಕುಮಾರ ಖಂಡ್ರೆ ಮತ್ತಿತರರು ಉಪಸ್ಥಿತರಿದ್ದರು.

ಒಳಪುಟಗಳಲ್ಲಿ...

ಪಟ್ಟಣ ಸಹಕಾರ
ಬ್ಯಾಂಕಿಂಗ್ ಪ್ರಪಂಚ

ಸಂಪುಟ : 12 ಸಂಚಿಕೆ : 4

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ ಪತ್ರಿಕೆ

ಅಕ್ಟೋಬರ್/ನವೆಂಬರ್/ಡಿಸೆಂಬರ್ - 2024

ಶ್ರೀ ಎಚ್.ಕೆ. ಪಾಟೀಲ
ಗೌರವಾಧ್ಯಕ್ಷರು

ಶ್ರೀ ಬಿ.ಎಸ್. ಪರಮಶಿವಯ್ಯ
ಉಪಾಧ್ಯಕ್ಷರು

ಶ್ರೀ ಪುಂಡಲೀಕ ಎನ್. ಕೇರೂರೆ
ಮುಖ್ಯ ಕಾರ್ಯನಿರ್ವಹಣಾಧಿಕಾರಿ/
ಸಂಪಾದಕರು

ಸಂಚಿಕೆ ನಿರ್ವಹಣೆ / ವಿನ್ಯಾಸ :
ವರ್ಣ ಕಮ್ಯೂನಿಕೇಷನ್

ಪ್ರಕಟಣೆ :
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,
ನಂ. 132, ಕೆ.ಎಚ್. ರಸ್ತೆ, ಬೆಂಗಳೂರು - 27

ದೂರವಾಣಿ :
080-22233662, 080-22279574

ಇ-ಮೇಲ್ :
editorkubf@gmail.com
ಅಂತರ್ಜಾಲ : www.kubfed.com
ಮುದ್ರಣ : ನವರತ್ನ ಪ್ರಿಂಟರ್ಸ್, ಬೆಂಗಳೂರು.

ಬ್ಯಾಂಕ್ ಗ್ರಾಹಕರೇ ಗಮನಿಸಿ: ಇನ್ಮುಂದೆ ಇಷ್ಟು ಬ್ಯಾಂಕ್ ಬ್ಯಾಲೆನ್ಸ್ ನಿರ್ವಹಿಸುವುದು ಕಡ್ಡಾಯ....06

ಬ್ಯಾಂಕಿಂಗ್ ಕಾನೂನಿಗೆ ತಿದ್ದುಪಡಿ, ಬ್ಯಾಂಕಿಂಗ್ ವಲಯ ಇನ್ನಷ್ಟು ಪ್ರಬಲ ಹಾಗೂ ಹೂಡಿಕೆದಾರರ ಹಿತಾಸಕ್ತಿಯೂ ರಕ್ಷಣೆ: ನಿರ್ಮಲಾ ಸೀತಾರಾಮನ್ ...07

ವಿಶ್ವದಲ್ಲೇ ಅಗ್ಗದ ಕರೆನ್ಸಿ ಹೊಂದಿರುವ ದೇಶಗಳಲ್ಲಿ ಭಾರತದ 1 ರೂ.ನ ಮೌಲ್ಯ ಎಷ್ಟಾಗುತ್ತೆ ನೋಡಿ!....08

ನಕಲಿ ಎಸ್‌ಬಿಐ ಬ್ಯಾಂಕ್ ತೆರೆದು ವಂಚನೆ....11

ಸಾಲದ ಅಂತರ ಕಡಿಮೆ ಮಾಡಲು ಆರ್‌ಬಿಐನಿಂದ ಶೀಘ್ರ ಹೊಸ ಆಯ್ಕೆ!....13

2023-24ನೇ ಆರ್ಥಿಕ ವರ್ಷದಲ್ಲಿ ರೂ.2.01 ಲಕ್ಷ ಕೋಟಿ ಜಿಎಸ್‌ಟಿ ವಂಚನೆ.....15

ಧಾರವಾಡದ ರಡ್ಡಿ ಸಹಕಾರ ಬ್ಯಾಂಕ್ ನಿ., 110 ವರ್ಷಗಳನ್ನು ದಾಟಿ ಪ್ರಗತಿ ಪಥದಲ್ಲಿ ಸಾಗಿದೆ....17

ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ಮತ್ತು ವೃತ್ತಿಪರ ನಿರ್ದೇಶಕರುಗಳ ಜವಾಬ್ದಾರಿ ಹಾಗೂ ಕರ್ತವ್ಯಗಳು....20

ಪ್ರಗತಿ ಪಥದಲ್ಲಿ ಸಾಗಿದೆ ದಿ ದಾವಣಗೆರೆ – ಹರಿಹರ ಅರ್ಬನ್ ಸಹಕಾರ ಬ್ಯಾಂಕ್....24

109 ವರ್ಷಗಳ ಸಂತೃಪ್ತ ಸೇವೆಯಲ್ಲಿ ದಿ. ಹೊಸಪೇಟೆ ಕೋ-ಆಪರೇಟಿವ್ ಸಿಟಿ ಬ್ಯಾಂಕ್ ನಿ.,.... 28

ಸುವರ್ಣ ಮಹೋತ್ಸವ ಸಂಭ್ರಮ ದಿ ಗಾಂಧಿ ಗಂಜ ಕೋ-ಆಪರೇಟಿವ್ ಬ್ಯಾಂಕ್ ಲಿ, ಬೀದರ....30

ಸಾರ್ಥಕ 100 ವಸಂತಗಳನ್ನು ಪೂರೈಸಿ ಪ್ರಗತಿ ಪಥದಲ್ಲಿ ಸಾಗಿರುವ ಗ್ರಾಹಕ ಸ್ನೇಹಿ – ವೈಶ್ಯ ಕೋ-ಆಪರೇಟಿವ್ ಬ್ಯಾಂಕ್, ತುಮಕೂರು....33

ಗಣ್ಯರ ಅನಿಸಿಕೆ....37

ಮೃತ ವ್ಯಕ್ತಿಯ ಎಟಿಎಂ ಕಾರ್ಡ್‌ನಿಂದ ಹಣ ಡ್ರಾ ಮಾಡುವುದು ಅಪರಾಧ....38

ನಿಮ್ಮ ಬ್ಯಾಂಕ್ ಖಾತೆಯನ್ನು ದೀರ್ಘಕಾಲದವರೆಗೆ ಬಳಸದಿದ್ದರೆ, ಅದನ್ನು ನಿಷ್ಕ್ರಿಯ ಗೊಳಸಲಾಗುತ್ತದೆ....39

ಸಂಪಾದಕೀಯ

ಆತ್ಮೀಯ ಸಹಕಾರಿ ಬಂಧುಗಳೇ...

▸▸ ಎಚ್.ಕೆ. ಪಾಟೀಲ

ಗ್ರಾಹಕರಾದ ನಾವುಗಳು ಎಚ್ಚೆತ್ತುಕೊಳ್ಳಬೇಕು

ಪ್ರತಿವರ್ಷ ಮಾರ್ಚ್ 15ರಂದು ವಿಶ್ವ ಗ್ರಾಹಕ ಹಕ್ಕುಗಳ ದಿನವನ್ನಾಗಿ ಆಚರಿಸಲಾಗುತ್ತದೆ. ಆದರೆ, ನಮ್ಮಲ್ಲಿ 1986ರ ಡಿಸೆಂಬರ್ 24ರಂದು ಈ ಗ್ರಾಹಕ ಸಂರಕ್ಷಣಾ ಕಾಯಿದೆಗೆ ರಾಷ್ಟ್ರಪತಿಗಳ ಅಂಕಿತ ದೊರೆತ ಹಿನ್ನೆಲೆಯಲ್ಲಿ ಪ್ರತಿ ವರ್ಷ ಡಿಸೆಂಬರ್ 24ರಂದು ರಾಷ್ಟ್ರೀಯ ಗ್ರಾಹಕ ಹಕ್ಕುಗಳ ದಿನವನ್ನಾಗಿ ಆಚರಿಸಲಾಗುತ್ತದೆ.

ಅಂದು ವಿಚಾರ ಸಂಕಿರಣಗಳು, ಚರ್ಚಾಗೋಷ್ಠಿಗಳು, ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸಿ, ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತದೆ. ಗ್ರಾಹಕರಾಗಿ ನಾವು ಯಾವುದೇ ವಸ್ತು ಖರೀದಿಸುವಾಗ ವಸ್ತುವಿನ ಗುಣಮಟ್ಟ, ಸುರಕ್ಷತೆ, ವಸ್ತುವಿನ ಉತ್ಪಾದನೆ ಮತ್ತು ಅದರ ಕೊನೆಯ ಅವಧಿಯನ್ನು ಪರಿಶೀಲಿಸಬೇಕು. ದೋಷಯುಕ್ತ ಸರಕುಗಳು, ಸೇವೆಗಳ ಕೊರತೆ ಮತ್ತು ಅನ್ಯಾಯದ ವಿವಿಧ ರೀತಿಯ ಶೋಷಣೆಯ ವಿರುದ್ಧ ಗ್ರಾಹಕರಿಗೆ ಪರಿಣಾಮಕಾರಿ ರಕ್ಷಣೆ ಒದಗಿಸುವ ಸಲುವಾಗಿಯೇ ಕಾಯ್ದೆ ಇದೆ. ಯಾವುದೇ ಪ್ಯಾಕ್ ಮಾಡಲಾದ ಆಹಾರ ಇನ್ನಿತರ ಉತ್ಪನ್ನಗಳ ಮೇಲೆ ಅವುಗಳ ಮೇಲೆ ತೆರಿಗೆಗಳು ಸೇರಿದಂತೆ ನಮೂದಿಸಿರುವ ಬೆಲೆಯನ್ನಷ್ಟೇ ಪಡೆಯಬೇಕು ಎನ್ನುವುದು ಕಾನೂನು ಮಾಪನ ಇಲಾಖೆಯ ಕಾಯಿದೆ.

ಮೊದಲ ಸಲ ಇದನ್ನು ಉಲ್ಲಂಘಿಸಿದರೇ, ಮಾರಾಟಗಾರನಿಗೆ ಎರಡು ಸಾವಿರ ರೂಪಾಯಿ ದಂಡ ವಿಧಿಸಬಹುದಾಗಿದೆ. ಎರಡನೇ ಬಾರಿ ಉಲ್ಲಂಘಿಸಿದರೆ, ದಂಡದೊಂದಿಗೆ ಆರು ತಿಂಗಳು ಜೈಲು ಶಿಕ್ಷೆ ವಿಧಿಸಲು ಕೂಡ ಇದರಲ್ಲಿ ಅವಕಾಶವಿದೆ. ಆದರೆ, ನಾನು ಕಂಡ ಹಾಗೆ ಈ ಕಾನೂನು ಬಳಕೆಯಾಗಿದ್ದು ಅಪರೂಪ. ಎಲ್ಲೆಡೆ ಮಾರಾಟಗಾರರಿಂದ ನಿತ್ಯವೂ ಬಡ ಗ್ರಾಹಕನಿಗೆ ವಂಚನೆ ನಡೆಯುತ್ತಲೇ ಇದೆ.

ಇದಕ್ಕೆ ಮುಖ್ಯ ಕಾರಣ; ವಸ್ತುಗಳನ್ನು ಕೊಳ್ಳುವ ಜನರಿಗೆ ಗ್ರಾಹಕ ಹಕ್ಕುಗಳ ಕುರಿತು ತಿಳಿವಳಿಕೆಯೇ ಇಲ್ಲವಾಗಿರುವುದು. ಒಂದು ವೇಳೆ ತಿಳಿದಿದ್ದರೂ, ತಮಗೆ ಆದ ವಂಚನೆಗೆ ಯಾರಿಗೆ, ಎಲ್ಲಿ ದೂರು ನೀಡಬೇಕೆನ್ನುವ ಗೊಂದಲ. ಬದುಕಿನ ನಿತ್ಯ ಜಂಜಾಟದಲ್ಲಿ ಇದಕ್ಕೆಲ್ಲ ಸಮಯ ಎಲ್ಲಿದೆ ಎಂದು ಅಲಕ್ಷಿಸುವವರೆ ಹೆಚ್ಚು. ಇದನ್ನು ಅರಿತ ವ್ಯಾಪಾರಿಗಳು ಸುಲಭವಾಗಿ ಜನರನ್ನು ಸುಲಿಗೆ ಮಾಡುತ್ತಿದ್ದಾರೆ.

ಇದರಿಂದಾಗಿಯೇ ಯಾವುದೇ ಪ್ರವಾಸಿ ತಾಣ ಇರಲಿ, ಚಿತ್ರಮಂದಿರದಲ್ಲಾಗಲಿ ನೀವು ಕೊಂಡ ವಸ್ತುವಿಗೆ ಅಧಿಕ ಬೆಲೆ ತೆರಬೇಕಾದಂತ ಪರಿಸ್ಥಿತಿ ಇದೆ. ಇದನ್ನು ಪ್ರಶ್ನಿಸಿದರೆ, ವ್ಯಾಪಾರಿಗಳಿಂದ ಅಸಡ್ಡೆಯ ಮಾತು ಕೇಳಿ ಎಲ್ಲರ ಮುಂದೆ ಮುಜುಗರಕ್ಕೆ ಒಳಗಾಗಬೇಕಾಗುತ್ತದೆ.

ಕೇಂದ್ರ ಸರಕಾರ ಕಾನೂನು ಮಾಪನಶಾಸ್ತ್ರ ಕಾಯಿದೆಗೆ ಅಗತ್ಯ ತಿದ್ದುಪಡಿ ತರುವ ಮೂಲಕ ಖರೀದಿ ಮತ್ತು ನಿಯಂತ್ರಣ ಮತ್ತು ನಿರ್ವಹಣಾ ವ್ಯವಸ್ಥೆಗಳನ್ನು ಪ್ರತ್ಯೇಕ ಘಟಕಗಳಾಗಿ ವಿಂಗಡಿಸಿ ಅದಕ್ಕೆ ಹೆಚ್ಚಿನ ಸಿಬ್ಬಂದಿ ಒದಗಿಸಬೇಕಿದೆ. ಕಾಯ್ದೆ ಜಾರಿಯಲ್ಲಿ ಅಸಡ್ಡೆ ತೋರುವ ಅಧಿಕಾರಿಗಳನ್ನು ದಂಡಿಸಬೇಕಿದೆ. ಎಲ್ಲಕ್ಕೂ ಮೊದಲು ಗ್ರಾಹಕರಾದ ನಾವುಗಳು ಎಚ್ಚೆತ್ತುಕೊಳ್ಳಬೇಕು, ಎಚ್ಚೆತ್ತುಕೊಳ್ಳುತ್ತಿರಿ ಎಂದು ಆಶಿಸುತ್ತಾ ಎಲ್ಲರಿಗೂ 2025ರ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇನೆ.

ಗ್ರಾಹಕರಾಗಿ ನಾವು ಯಾವುದೇ ವಸ್ತು ಖರೀದಿಸುವಾಗ ವಸ್ತುವಿನ ಗುಣಮಟ್ಟ, ಸುರಕ್ಷತೆ, ವಸ್ತುವಿನ ಉತ್ಪಾದನೆ ಮತ್ತು ಅದರ ಕೊನೆಯ ಅವಧಿಯನ್ನು ಪರಿಶೀಲಿಸಬೇಕು. ದೋಷಯುಕ್ತ ಸರಕುಗಳು, ಸೇವೆಗಳ ಕೊರತೆ ಮತ್ತು ಅನ್ಯಾಯದ ವಿವಿಧ ರೀತಿಯ ಶೋಷಣೆಯ ವಿರುದ್ಧ ಗ್ರಾಹಕರಿಗೆ ಪರಿಣಾಮಕಾರಿ ರಕ್ಷಣೆ ಒದಗಿಸುವ ಸಲುವಾಗಿಯೇ ಕಾಯ್ದೆ ಇದೆ.

ಬ್ಯಾಂಕ್ ಗ್ರಾಹಕರೇ ಗಮನಿಸಿ : ಇನ್ಮುಂದೆ ಇಷ್ಟು ಬ್ಯಾಂಕ್ ಬ್ಯಾಲೆನ್ಸ್ ನಿರ್ವಹಿಸುವುದು ಕಡ್ಡಾಯ

ನವದೆಹಲಿ : ಪ್ರಸ್ತುತ, ಹೆಚ್ಚಿನ ಬ್ಯಾಂಕ್‌ಗಳು ಉಳಿತಾಯ ಖಾತೆ ತೆರೆಯುವಾಗ ಕನಿಷ್ಠ ಬ್ಯಾಲೆನ್ಸ್ ಕಾಯ್ದುಕೊಳ್ಳುವ ಷರತ್ತನ್ನು ವಿಧಿಸುತ್ತವೆ. ಅಂದರೆ ಖಾತೆದಾರ ಯಾವಾಗಲೂ ತನ್ನ ಖಾತೆಯಲ್ಲಿ ನಿಗದಿತ ಮೊತ್ತವನ್ನು ನಿರ್ವಹಿಸಬೇಕಾಗುತ್ತದೆ. ಇಲ್ಲದಿದ್ದರೆ ಬ್ಯಾಂಕ್ ಪ್ರತಿ ತಿಂಗಳು ಶುಲ್ಕ ವಿಧಿಸುತ್ತದೆ. ಅನೇಕ ಬಾರಿ ಈ ಸ್ಥಿತಿಯ ಬಗ್ಗೆ ಜನರಿಗೆ ತಿಳಿದಿರುವುದಿಲ್ಲ.

ನಿಯಮಿತ ಶುಲ್ಕಗಳಿಂದಾಗಿ ಅವರ ಖಾತೆಯು ಕ್ರಮೇಣ ಖಾಲಿಯಾಗುತ್ತದೆ. ಆದ್ದರಿಂದ ಯಾವ ಬ್ಯಾಂಕಿನಲ್ಲಿ ಎಷ್ಟು ಹಣವನ್ನು ಮಿನಿಮಮ್ ಬ್ಯಾಲೆನ್ಸ್ ಆಗಿ ಇಡಬೇಕು ಎಂಬುದು ಬಹಳ ಮುಖ್ಯ. ಇದರಿಂದ ಅನಗತ್ಯ ದಂಡವನ್ನು ತಪ್ಪಿಸಬಹುದು. ಹಾಗಾಗಿ ಉಳಿತಾಯ ಖಾತೆದಾರರು ತಮ್ಮ ಖಾತೆಯಲ್ಲಿ ಇರಿಸಿಕೊಳ್ಳಲು ಈಗ ಯಾವ ಕನಿಷ್ಠ ಬ್ಯಾಲೆನ್ಸ್ ಮೊತ್ತ ಕಡ್ಡಾಯವಾಗಿದೆ ಎನ್ನುವುದನ್ನು ಕೆಳಗೆ ನೀಡಲಾಗಿದೆ.

ಇಂಡಸ್ ಇಂಡ್ ಬ್ಯಾಂಕ್ : ಇಂಡಸ್ ಇಂಡ್ ಬ್ಯಾಂಕ್ ಖಾತೆದಾರರು ಕನಿಷ್ಠ ಬ್ಯಾಲೆನ್ಸ್ ಅನ್ನು ನಿರ್ವಹಿಸಬೇಕಾಗುತ್ತದೆ. ಮಹಾನಗರಗಳು ಮತ್ತು ದೊಡ್ಡ ನಗರಗಳಲ್ಲಿ ಕನಿಷ್ಠ ರೂ. 10,000 ಮತ್ತು ಸಣ್ಣ ನಗರಗಳಲ್ಲಿ ಈ ಮಿತಿ 5,000 ರೂ. ಖಾತೆಯಲ್ಲಿ ಅಷ್ಟು ಹಣ ಇರದಿದ್ದಲ್ಲಿ ಖಾತೆಯಿಂದ ನಿರ್ವಹಣಾ ಶುಲ್ಕವನ್ನು ಕಡಿತಗೊಳಿಸಲಾಗುತ್ತದೆ.

ಯೆಸ್ ಬ್ಯಾಂಕ್ : ಯೆಸ್ ಬ್ಯಾಂಕ್‌ನ ಉಳಿತಾಯ ಅಡ್ವಾಂಟೇಜ್ ಖಾತೆಯನ್ನು ಹೊಂದಿರುವವರು ಕನಿಷ್ಠ ಬ್ಯಾಲೆನ್ಸ್ ಅನ್ನು ಸಹ ನಿರ್ವಹಿಸಬೇಕು. ಯೆಸ್ ಬ್ಯಾಂಕ್‌ನಲ್ಲಿ ಕನಿಷ್ಠ ರೂ. 10,000 ಈ ಮೊತ್ತವನ್ನು ಖಾತೆಯಲ್ಲಿ ಇರದಿದ್ದಲ್ಲಿ ಬ್ಯಾಂಕ್ ಪ್ರತಿ ತಿಂಗಳು ರೂ. 500 ನಿರ್ವಹಣೆಯೇತರ ಶುಲ್ಕ ವಿಧಿಸುತ್ತದೆ.

ಐಸಿಐಸಿಐ ಬ್ಯಾಂಕ್ : ಐಸಿಐಸಿಐ ಬ್ಯಾಂಕ್ ತನ್ನ ಖಾತೆದಾರರು ಕನಿಷ್ಠ ಬ್ಯಾಲೆನ್ಸ್ ಅನ್ನು ಕಾಯ್ದುಕೊಳ್ಳಬೇಕೆಂದು ನಿರೀಕ್ಷಿಸುತ್ತದೆ. ದೊಡ್ಡ ನಗರಗಳಲ್ಲಿ ಖಾತೆದಾರರು ತಮ್ಮ ಖಾತೆಯಲ್ಲಿ ರೂ. 10,000 ಬ್ಯಾಲೆನ್ಸ್ ಕಾಯ್ದುಕೊಳ್ಳಬೇಕು. ಈ ಮಿತಿ ಸಣ್ಣ ಪಟ್ಟಣಗಳಲ್ಲಿ ರೂ. 5,000 ಮತ್ತು ಗ್ರಾಮೀಣ ಪ್ರದೇಶದಲ್ಲಿ ರೂ. 2,000.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ : ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ನಿಮ್ಮ ಉಳಿತಾಯ ಖಾತೆ ಇದ್ದರೆ, ಆದ್ದರಿಂದ ನೀವು ನಿಮ್ಮ ಖಾತೆಯಲ್ಲಿ ಕನಿಷ್ಠ ಒಂದು ನಿರ್ದಿಷ್ಟ ಮೊತ್ತವನ್ನು ನಿರ್ವಹಿಸಬೇಕು. ಇದು ನಿಮ್ಮ ನಗರ ಅಥವಾ ಪ್ರದೇಶವನ್ನು ಅವಲಂಬಿಸಿರುತ್ತದೆ. ಮಹಾನಗರಗಳು ಮತ್ತು ದೊಡ್ಡ ನಗರಗಳಲ್ಲಿ, ಖಾತೆದಾರರು ಕನಿಷ್ಠ ರೂ. 3,000. ಸಣ್ಣ ನಗರಗಳಲ್ಲಿ ಈ ಮಿತಿ ರೂ. 2,000 ಮತ್ತು ಹಳ್ಳಿಗಳಲ್ಲಿ ವಾಸಿಸುವವರಿಗೆ, ಈ ಕನಿಷ್ಠ ಬ್ಯಾಲೆನ್ಸ್ ರೂ. 1,000 ಈ

ಕನಿಷ್ಠ ಮೊತ್ತ ಖಾತೆಯಲ್ಲಿ ಇರದಿದ್ದಲ್ಲಿ ಆದ್ದರಿಂದ ಬ್ಯಾಂಕ್ ಪ್ರತಿ ತಿಂಗಳು ಕೆಲವು ಮೊತ್ತವನ್ನು ನಿರ್ವಹಣಾ ಶುಲ್ಕವಾಗಿ ಕಡಿತಗೊಳಿಸುತ್ತದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್ : ಪಂಜಾಬ್ ನ್ಯಾಷನಲ್ ಬ್ಯಾಂಕ್ ಖಾತೆದಾರರು ತಮ್ಮ ಖಾತೆಯಲ್ಲಿ ಕನಿಷ್ಠ ಬ್ಯಾಲೆನ್ಸ್ ಕಾಯ್ದುಕೊಳ್ಳಬೇಕು. ನಗರ ಮತ್ತು ಮೆಟ್ರೋ ನಗರಗಳಲ್ಲಿ ವಾಸಿಸುವ ಜನರು ತಮ್ಮ ಬ್ಯಾಂಕ್ ಖಾತೆಯಲ್ಲಿ ಕನಿಷ್ಠ ರೂ. 2,000 ಅದೇ ಸಮಯದಲ್ಲಿ, ಗ್ರಾಮೀಣ ಪ್ರದೇಶದ ಖಾತೆದಾರರು ತಮ್ಮ ಖಾತೆಯಲ್ಲಿ ಕನಿಷ್ಠ ರೂ. 1,000 ಅಂತಹ ಪರಿಸ್ಥಿತಿಯಲ್ಲಿ, ಖಾತೆಯಲ್ಲಿನ ಮೊತ್ತವು ಕನಿಷ್ಠ ಬ್ಯಾಲೆನ್ಸ್‌ಗಿಂತ ಕಡಿಮೆಯಿದ್ದರೆ ಬ್ಯಾಂಕ್ ಶುಲ್ಕ ವಿಧಿಸುತ್ತದೆ.

ಎಚ್.ಡಿ.ಎಫ್.ಸಿ ಬ್ಯಾಂಕ್ : ನಗರ ಮತ್ತು ಮೆಟ್ರೋ ಪ್ರದೇಶಗಳಲ್ಲಿ ಎಚ್.ಡಿ.ಎಫ್.ಸಿ ಬ್ಯಾಂಕ್ ಖಾತೆದಾರರಿಗೆ ಕನಿಷ್ಠ ಬ್ಯಾಲೆನ್ಸ್ ಮಿತಿ ಹೆಚ್ಚಾಗಿರುತ್ತದೆ. ಇಲ್ಲಿ ಮೆಟ್ರೋ ನಗರಗಳಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಉಳಿತಾಯ ಖಾತೆಯಲ್ಲಿ ರೂ.10,000ಗಳ ಬ್ಯಾಲೆನ್ಸ್ ಅನ್ನು ಕಡ್ಡಾಯವಾಗಿ ನಿರ್ವಹಿಸಬೇಕು. ಮತ್ತು ಸಣ್ಣ ನಗರಗಳಲ್ಲಿ ಈ ಮಿತಿಯು ರೂ.5000 ಆಗಿರುತ್ತದೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರು ಖಾತೆಯಲ್ಲಿ ರೂ.2,500 ಬ್ಯಾಲೆನ್ಸ್ ಇರಿಸಬೇಕಾಗುತ್ತದೆ. ಕನಿಷ್ಠ ಬ್ಯಾಲೆನ್ಸ್ ನಿರ್ವಹಿಸದಿದ್ದರೆ, ಬ್ಯಾಂಕ್ ಪ್ರತಿ ತಿಂಗಳು ನಿರ್ವಹಣಾ ಶುಲ್ಕವನ್ನು ವಿಧಿಸುತ್ತದೆ.

ಬ್ಯಾಂಕಿಂಗ್ ಕಾನೂನಿಗೆ ತಿದ್ದುಪಡಿ, ಬ್ಯಾಂಕಿಂಗ್ ವಲಯ ಇನ್ನಷ್ಟು ಪ್ರಬಲ ಹಾಗೂ ಹೂಡಿಕೆದಾರರ ಹಿತಾಸಕ್ತಿಯೂ ರಕ್ಷಣೆ: ನಿರ್ಮಲಾ ಸೀತಾರಾಮನ್

ಬ್ಯಾಂಕಿಂಗ್ ರೆಗ್ಯುಲೇಶನ್ಸ್ ಕಾಯ್ದೆಯಲ್ಲಿ ಮಾಡಲಾಗಿರುವ ತಿದ್ದುಪಡಿಗಳು ಸಹಕಾರಿ ಬ್ಯಾಂಕುಗಳಿಗೆ ಅನ್ವಯ ಆಗುತ್ತದೆ. ಕೋ ಆಪರೇಟಿವ್ ಸೊಸೈಟಿಗಳಿಗೆ ಇದು ಅನ್ವಯ ಆಗಲ್ಲ. ಸಹಕಾರಿ ಬ್ಯಾಂಕುಗಳಲ್ಲಿನ ನಿರ್ದೇಶಕರ ಅವಧಿಯನ್ನು ಈಗಿರುವ ಸತತ 8ವರ್ಷದಿಂದ 10 ವರ್ಷಕ್ಕೆ ಏರಿಸಲಾಗುವುದು. ಕೇಂದ್ರೀಯ ಸಹಕಾರಿ ಬ್ಯಾಂಕ್‌ವೊಂದರ ನಿರ್ದೇಶಕರು ರಾಜ್ಯದ ಸಹಕಾರಿ ಬ್ಯಾಂಕಿನ ಮಂಡಳಿಯಲ್ಲಿ ಸೇವೆ ಸಲ್ಲಿಸಲು ಅವಕಾಶ ಸಿಗಲಿದೆ.

ನವದೆಹಲಿ: ಬ್ಯಾಂಕಿಂಗ್ ಕಾನೂನುಗಳಿಗೆ ತಿದ್ದುಪಡಿ ತರುವ ಮಸೂದೆ ರೂಪಿಸಲಾಗಿದ್ದು, ಈ ಹೊಸ ತಿದ್ದುಪಡಿ ಕಾನೂನುಗಳಿಂದ ಭಾರತದ ಬ್ಯಾಂಕಿಂಗ್ ವಲಯ ಮತ್ತಷ್ಟು ಬಲಗೊಳ್ಳಲಿದೆ. ಹೂಡಿಕೆದಾರರ ಹಿತಾಸಕ್ತಿಯೂ ರಕ್ಷಿತವಾಗುತ್ತದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಲೋಕಸಭೆಯಲ್ಲಿ ಮಸೂದೆಯನ್ನು ಮಂಡಿಸಿರುವ ಅವರು, ಇದರಲ್ಲಿ ಒಟ್ಟು 19 ತಿದ್ದುಪಡಿ ತರಲಾಗಿರುವುದನ್ನು ತಿಳಿಸಿದ್ದಾರೆ.

1934ರ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕಾಯ್ದೆ, 1949ರ ಬ್ಯಾಂಕಿಂಗ್ ರೆಗ್ಯುಲೇಶನ್ ಕಾಯ್ದೆ, 1955ರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಾಯ್ದೆ, 1970ರ ಬ್ಯಾಂಕಿಂಗ್ ಕಂಪನೀಸ್ ಕಾಯ್ದೆ, 1980ರ ಬ್ಯಾಂಕಿಂಗ್ ಕಂಪನೀಸ್ ಕಾಯ್ದೆಗಳಲ್ಲಿ ಈ 19 ತಿದ್ದುಪಡಿಗಳನ್ನು ತರಲಾಗಿದೆ.

ಬ್ಯಾಂಕಿಂಗ್ ಕಾನೂನುಗಳಲ್ಲಿನ ಕೆಲ ಪ್ರಸ್ತಾಪಿತ ತಿದ್ದುಪಡಿಗಳು

1. ಒಂದು ಬ್ಯಾಂಕ್ ಖಾತೆಗೆ ನಾಲ್ಕು ನಾಮಿನಿಗಳನ್ನು ಹೆಸರಿಸುವ ಅವಕಾಶ.

2. ಕ್ಲೇಮ್ ಆಗದೇ ಇರುವ ಡಿವಿಡೆಂಡ್, ಶೇರುಗಳು, ಮತ್ತು ಬಾಂಡ್‌ಗಳ ರಿಡಂಪ್ಷನ್ ಇತ್ಯಾದಿಯನ್ನು ಐಇಪಿಎಫ್ ಎನ್ನುವ ವಿಶೇಷ ಫಂಡ್‌ಗೆ ವರ್ಗಾವಣೆ ಆಗುತ್ತವೆ. ಅರ್ಹ ವಾರಸುದಾರರಿಗೆ ಇದನ್ನು ತಲುಪಿಸುವುದು ಸುಲಭವಾಗುತ್ತದೆ.

3. ಬ್ಯಾಂಕುಗಳಲ್ಲಿನ ಆಡಳಿತ ಗುಣಮಟ್ಟವನ್ನು ಸುಧಾರಿಸಲಾಗುವುದು. ಸಹಕಾರಿ ಬ್ಯಾಂಕುಗಳಲ್ಲಿನ ನಿರ್ದೇಶಕರ ಅವಧಿಯನ್ನು ಹೆಚ್ಚಿಸಲಾಗುವುದು.

4. ಬ್ಯಾಂಕ್ ನಿರ್ದೇಶಕರಿಗೆ ಸಂಬಂಧಿಸಿದ 'ಸಬ್‌ಸ್ಟ್ಯಾನ್ಷಿಯಲ್ ಇಂಟರೆಸ್ಟ್' ಅಥವಾ ಪ್ರಮುಖ ಹಿತಾಸಕ್ತಿ ಪದಕ್ಕೆ ಮರು ವ್ಯಾಖ್ಯಾನ ಮಾಡಲಾಗಿದೆ. ಈ ಮುಂಚೆ ಒಂದು ಬ್ಯಾಂಕ್‌ನಲ್ಲಿ ನಿರ್ದೇಶಕರ ಆಸ್ತಿ ರೂ. 5 ಲಕ್ಷ ಗಿಂತ ಹೆಚ್ಚಿದ್ದರೆ ಸಬ್‌ಸ್ಟ್ಯಾನ್ಷಿಯಲ್ ಇಂಟರೆಸ್ಟ್ ಎಂದು ಪರಿಗಣಿಸಲಾಗುತ್ತಿತ್ತು. ಈಗ ತಿದ್ದುಪಡಿಯಲ್ಲಿ ಆ ಮಿತಿಯನ್ನು ರೂ.2 ಕೋಟಿಗೆ ಏರಿಸಲಾಗಿದೆ.

5. ಬ್ಯಾಂಕಿಂಗ್ ರೆಗ್ಯುಲೇಶನ್ಸ್ ಕಾಯ್ದೆಯಲ್ಲಿ ಮಾಡಲಾಗಿರುವ ತಿದ್ದುಪಡಿಗಳು ಸಹಕಾರಿ ಬ್ಯಾಂಕುಗಳಿಗೆ ಅನ್ವಯ ಆಗುತ್ತದೆ. ಕೋ ಆಪರೇಟಿವ್ ಸೊಸೈಟಿಗಳಿಗೆ ಇದು ಅನ್ವಯ ಆಗಲ್ಲ.

6. ಸಹಕಾರಿ ಬ್ಯಾಂಕುಗಳಲ್ಲಿನ ನಿರ್ದೇಶಕರ ಅವಧಿಯನ್ನು ಈಗಿರುವ 8 ವರ್ಷದಿಂದ 10 ವರ್ಷಕ್ಕೆ ಏರಿಸಲಾಗುವುದು.

ಮಸೂದೆಯಲ್ಲಿ ಸಹಕಾರಿ ಬ್ಯಾಂಕ್‌ಗಳ ನಿರ್ದೇಶಕರ ಅವಧಿಯನ್ನು 8 ವರ್ಷದಿಂದ 10 ವರ್ಷಕ್ಕೆ ಹೆಚ್ಚಿಸಲಾಗಿದೆ. ಆದರೆ ಈ ನಿಯಮವು ಅಧ್ಯಕ್ಷರು ಮತ್ತು ಪೂರ್ಣ ಸಮಯದ ನಿರ್ದೇಶಕರಿಗೆ ಅನ್ವಯಿಸುವುದಿಲ್ಲ. ಈ ಮಸೂದೆಯ ಅಡಿಯಲ್ಲಿ, ಲೆಕ್ಕಪರಿಶೋಧಕರ ಶುಲ್ಕವನ್ನು ನಿರ್ಧರಿಸುವ ಮತ್ತು ಉನ್ನತ ಮಟ್ಟದ ಪ್ರತಿಭಾವಂತರನ್ನು ನೇಮಿಸಿಕೊಳ್ಳುವ ಹಕ್ಕನ್ನು ಸರ್ಕಾರಿ ಬ್ಯಾಂಕುಗಳು ಪಡೆಯುತ್ತವೆ.

7. ಕೇಂದ್ರೀಯ ಸಹಕಾರಿ ಬ್ಯಾಂಕ್‌ವೊಂದರ ನಿರ್ದೇಶಕರು ರಾಜ್ಯದ ಸಹಕಾರಿ ಬ್ಯಾಂಕ್‌ನ ಮಂಡಳಿಯಲ್ಲಿ ಸೇವೆ ಸಲ್ಲಿಸಲು ಅವಕಾಶ ಸಿಗಲಿದೆ.

8. ಸರ್ಕಾರಿ ನಿಯೋಜಿತ ಆಡಿಟರ್‌ಗಳಿಗೆ ಎಷ್ಟು ಸಂಭಾವನೆ ನೀಡಬೇಕು ಎಂಬುದನ್ನು ನಿರ್ಧರಿಸಲು ಬ್ಯಾಂಕುಗಳು ಹೆಚ್ಚು ಸ್ವತಂತ್ರವಾಗಿರುತ್ತವೆ.

9. ನಿಯಮಗಳ ಪಾಲನೆ ಸಂಬಂಧ ಆರ್‌ಬಿಐಗೆ ಪ್ರತೀ ಎರಡನೇ ಮತ್ತು ನಾಲ್ಕನೇ ಶುಕ್ರವಾರ ವರದಿ ಸಲ್ಲಿಸಬೇಕಿತ್ತು. ಅದನ್ನು ತಿಂಗಳ 15ನೇ ತಾರೀಖು ಮತ್ತು ಕೊನೆಯ ತಾರೀಖಿಗೆ ಬದಲಾಯಿಸಲಾಗಿದೆ.

ಸಂರಕ್ಷಣಾ ನಿಧಿಗೆ ವರ್ಗಾಯಿಸುವ ಸೌಲಭ್ಯ :

ಇದರ ಹೊರತಾಗಿ, ಹೊಸ ಮಸೂದೆಯ ಅಡಿಯಲ್ಲಿ, 7 ವರ್ಷಗಳವರೆಗೆ ಕ್ಲೈಮ್ ಮಾಡದ ಲಾಭಾಂಶ, ಷೇರುಗಳು, ಬಡ್ಡಿ ಮತ್ತು ಪ್ರಬುದ್ಧ ಬಾಂಡ್‌ಗಳ ಮೊತ್ತವನ್ನು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸಲಾಗುತ್ತದೆ.

ವಿಶ್ವದಲ್ಲೇ ಅಗ್ಗದ ಕರೆನ್ಸಿ ಹೊಂದಿರುವ ದೇಶಗಳಲ್ಲಿ ಭಾರತದ 1 ರೂ.ನ ಮೌಲ್ಯ ಎಷ್ಟಾಗುತ್ತೆ ನೋಡಿ!

ವಿಶ್ವದಲ್ಲೇ ಅತ್ಯಂತ ಪ್ರಬಲ ಮತ್ತು ಪ್ರಭಾವಶಾಲಿ ಕರೆನ್ಸಿಗಳ ಬಗ್ಗೆ ನಮಗೆ ತಿಳಿದಿದೆ. ಆದರೆ ಅತ್ಯಂತ ಕಡಿಮೆ ಮೌಲ್ಯವಿರುವ ಕರೆನ್ಸಿ ಬಗ್ಗೆ ಎಷ್ಟು ಮಂದಿಗೆ ಗೊತ್ತು? ಕೆಲವು ದೇಶಗಳ ಕರೆನ್ಸಿಗಳು ತೀರಾ ಕಡಿಮೆ ಮೌಲ್ಯವನ್ನು ಹೊಂದಿದೆ.

ಒಂದಲ್ಲ ಒಂದು ರೀತಿಯ ವ್ಯವಹಾರ ನಡೆಸುವ ನಾವು ಈ ಅಗ್ಗದ ಕರೆನ್ಸಿಗಳ ಬಗ್ಗೆ ತಿಳಿದುಕೊಳ್ಳಬೇಕಿದೆ. ಇಂಗ್ಲೇಂಡಿನ ಪೌಂಡ್ ಮತು ಸ್ಟರ್ಲಿಂಗ್, ಸ್ವಿಸ್ ಫ್ರಾಂಕ್, ಮತ್ತು ಯುಎಸ್ ಡಾಲರ್ ವಿಶ್ವದಲ್ಲೇ ಎಲ್ಲರಿಗೂ ಪರಿಚಿತ ದುಬಾರಿ ಮೌಲ್ಯ ಹೊಂದಿರುವ ಕರೆನ್ಸಿಗಳಾಗಿವೆ. ಆದರೆ ವಿಶ್ವದ ಅತ್ಯಂತ ಕಡಿಮೆ ಬೆಲೆಬಾಳುವ ಕರೆನ್ಸಿಗಳ ಪಟ್ಟಿ ಮಾಡುವುದು ತುಸು ಕಷ್ಟ. ಯಾಕೆಂದರೆ ಆರ್ಥಿಕ ಪರಿಸ್ಥಿತಿಗಳು ಅತ್ಯಂತ ವೇಗವಾಗಿ ಬದಲಾಗುತ್ತದೆ. ಇದು ಒಂದು ರೀತಿಯಲ್ಲಿ ಎಲ್ಲರಿಗೂ ಸವಾಲಾಗಿರುತ್ತದೆ.

ಇತ್ತೀಚೆಗೆ ಗಮನಾರ್ಹವಾದ ಅಪಮೌಲ್ಯೀಕರಣವನ್ನು ಅನುಭವಿಸಿದ ನಿರ್ದಿಷ್ಟ ರಾಷ್ಟ್ರೀಯ ಕರೆನ್ಸಿಗಳನ್ನು ಗುರುತಿಸಲಾಗಿದೆ. ಇದರಲ್ಲಿ ಯುಎಸ್ ಡಾಲರ್ ಮತ್ತು ಭಾರತೀಯ ರೂಪಾಯಿಗೆ ಹೋಲಿಸಿದರೆ ವಿಶ್ವದ ಹತ್ತು ದೇಶಗಳ ಕರೆನ್ಸಿಗಳು ಅತ್ಯಂತ ಕಡಿಮೆ ಮೌಲ್ಯ ಹೊಂದಿದೆ. ಇದರಲ್ಲಿ ಇರಾನಿನ ರಿಯಾಲ್, ವಿಯೆಟ್ನಾಮೀಸ್ ಡಾಂಗ್, ಸಿಯೆರಾ ಲಿಯೋನಿಯನ್ ಲಿಯೋನ್, ಲಾವೊ/ಲಾವೋಟಿಯನ್ ಕಿಪ್, ಇಂಡೋನೇಷಿಯನ್ ರುಪಿಯಾ, ಉಜ್ಬೇಕಿಸ್ತಾನಿ ಸೋಮ್, ಗಿನಿಯನ್ ಫ್ರಾಂಕ್, ಪರಾಗ್ವೆಯ ಗೌರಾನಿ, ಕಾಂಬೋಡಿಯನ್ ರಿಯಲ್, ಉಗಾಂಡಾದ ಶಿಲ್ಲಿಂಗ್ ಸೇರಿದೆ.

ಇರಾನಿನ ರಿಯಾಲ್ (IRR) : ಪ್ರಸ್ತುತ 1 ಭಾರತೀಯ ರೂಪಾಯಿಯು 501.73 ಐಆರ್ಆರ್‌ಗೆ ಸಮನಾಗಿದೆ. ಇರಾನಿನ ರಿಯಾಲ್ ಅನ್ನು ವಿಶ್ವದ ಅತ್ಯಂತ ಕಡಿಮೆ ಮೌಲ್ಯಯುತ ಕರೆನ್ಸಿ ಎಂದು ಗುರುತಿಸಲಾಗಿದೆ. ಇದಕ್ಕೆ ದೇಶದಲ್ಲಿ ನಡೆಯುವ ರಾಜಕೀಯ ಅಶಾಂತಿ, ಇರಾನ್-ಇರಾಕ್ ಯುದ್ಧ ಮತ್ತು ಪರಮಾಣು ಕಾರ್ಯಕ್ರಮದಂತಹ ಅಂಶಗಳು ಕಾರಣ ಎನ್ನಲಾಗುತ್ತದೆ.

ವಿಯೆಟ್ನಾಮೀಸ್ ಡಾಂಗ್ (VND) : ವಿಯೆಟ್ನಾಂ ಐತಿಹಾಸಿಕವಾಗಿ ಕೇಂದ್ರೀಕೃತ ಆರ್ಥಿಕತೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಮಾರುಕಟ್ಟೆ ಆರ್ಥಿಕತೆಯನ್ನು ಸ್ಥಾಪಿಸಲು ಪ್ರಯತ್ನಗಳನ್ನು ಮಾಡಲಾಗಿದ್ದರೂ ಇನ್ನೂ ಬಹಳ ದೂರ ಹೋಗಬೇಕಾಗಿದೆ. ಪ್ರಸ್ತುತ, ವಿಯೆಟ್ನಾಮೀಸ್ ಡಾಂಗ್ ಗಣನೀಯ ಅಪಮೌಲ್ಯವನ್ನು ಅನುಭವಿಸುತ್ತಿದೆ. ಇಲ್ಲಿ 1 ಭಾರತೀಯ ರೂಪಾಯಿಯು 297.72ವಿಎನ್ ಡಿಗೆ ಸಮನಾಗಿದೆ.

ಲಾವೋ/ಲಾವೋಟಿಯನ್ ಕಿಪ್ (LAK) : 1952ರಲ್ಲಿ ಸ್ಥಾಪನೆಯಾದಾಗಿನಿಂದ

ಲಾವೊ ಕರೆನ್ಸಿಯ ಮೌಲ್ಯವು ತುಲನಾತ್ಮಕವಾಗಿ ಕಡಿಮೆಯಾಗಿದೆ. ಇಲ್ಲಿ ಪ್ರಸ್ತುತ 1 ಭಾರತೀಯ ರೂಪಾಯಿಯು 263.00 ಎಲ್‌ಎಕೆಗೆ ಸಮವಾಗಿದೆ.

ಸಿಯೆರಾ ಲಿಯೋನಿಯನ್ ಲಿಯೋನ್ (SLL) : ಆಫ್ರಿಕನ್ ರಾಷ್ಟ್ರವಾದ ಸಿಯೆರಾ ಲಿಯೋನ್ ತೀವ್ರ ಬಡತನವನ್ನು ಎದುರಿಸುತ್ತಿದೆ. ವಿನಾಶಕಾರಿ ಅಂತರ್ಯುದ್ಧ ಸೇರಿದಂತೆ ಪಶ್ಚಿಮ ಆಫ್ರಿಕಾದಲ್ಲಿ ಹಗರಣಗಳು, ಭ್ರಷ್ಟಾಚಾರ ಮತ್ತು ಯುದ್ಧಗಳ ಇತಿಹಾಸವನ್ನು ದೇಶ ಹೊಂದಿದೆ. ಇದರಿಂದಾಗಿ ಕರೆನ್ಸಿ ಮೌಲ್ಯ ಮತ್ತು ದೇಶದ ಆರ್ಥಿಕತೆ ಎರಡೂ ಕುಸಿದಿದೆ. ಇಲ್ಲಿ ಭಾರತೀಯ 1 ರೂಪಾಯಿಯು 267.39 ಎಸ್‌ಎಲ್‌ಎಲ್‌ಗೆ ಸಮವಾಗಿದೆ.

ಕಳೆದ ಏಳು ವರ್ಷಗಳಿಂದ ಇಂಡೋನೇಷ್ಯಾದ ರೂಪಾಯಿ ಯಾವುದೇ ಸುಧಾರಣೆಯನ್ನು ತೋರಿಸಿಲ್ಲ. ವಿದೇಶಿ ವಿನಿಮಯ ಮೀಸಲು ಕಡಿಮೆಯಾಗುವುದು, ಕರೆನ್ಸಿಯನ್ನು ರಕ್ಷಿಸುವಲ್ಲಿ ಕೇಂದ್ರೀಯ ಬ್ಯಾಂಕ್ ವಿಫಲತೆ ಮತ್ತು ಸರಕು ರಫ್ತಿನ ಮೇಲೆ ದೇಶದ ಭಾರೀ ಅವಲಂಬನೆ ಸೇರಿದಂತೆ ವಿವಿಧ ಅಂಶಗಳು ಇದಕ್ಕೆ ಕಾರಣ. ಇದಲ್ಲದೆ, ಸರಕುಗಳ ಬೆಲೆಗಳಲ್ಲಿನ ಕುಸಿತವು ಕರೆನ್ಸಿಯ ಮೌಲ್ಯದಲ್ಲಿನ ಇಳಿಕೆಗೆ ಮತ್ತಷ್ಟು ಕೊಡುಗೆ ನೀಡಿದೆ. ರೂಪಾಯಿಯ ಸಾರ್ವಭೌಮ ಬಾಂಡ್‌ಗಳ ಗಮನಾರ್ಹ ಭಾಗವನ್ನು ಹೊಂದಿರುವ ವಿದೇಶಿ ಹೂಡಿಕೆದಾರರ ಉಪಸ್ಥಿತಿಯು ಬಂಡವಾಳದ ಹರಿವಿಗೆ ಅಪಾಯವನ್ನುಂಟು ಮಾಡುತ್ತದೆ. ಇಲ್ಲಿ ಪ್ರಸ್ತುತ ಭಾರತೀಯ 1 ರೂಪಾಯಿಯು 185.66 ಐಡಿಆರ್‌ಗೆ ಸಮವಾಗಿದೆ.

ಉಜ್ಬೇಕಿಸ್ತಾನಿ ಸೋಮ್ (UZS) : ಉಜ್ಬೇಕಿಸ್ತಾನ್‌ನ ಆರ್ಥಿಕತೆಯು ದುರ್ಬಲವಾಗಿದೆ. ಇದು ದುರ್ಬಲ ಕರೆನ್ಸಿಗೆ ಕಾರಣವಾಗಿದೆ. ಸಾಂಕ್ರಾಮಿಕ ರೋಗವು ರಾಷ್ಟ್ರದ ಆರ್ಥಿಕತೆಯ ಮೇಲೆ ಪ್ರಭಾವ ಬೀರಿದ್ದರೂ, 2022ರ ಮೂರನೇ ತ್ರೈಮಾಸಿಕದಲ್ಲಿ ಆಂತರಿಕ ಕಾರ್ಯಾಚರಣೆಗಳು ಪುನರಾರಂಭಗೊಂಡಿದೆ. ಆದರೂ ಕೈಗಾರಿಕಾ ಉತ್ಪಾದನೆಯಲ್ಲಿನ ಕುಸಿತವು ಕರೆನ್ಸಿಯ ಭವಿಷ್ಯದ ಬಗ್ಗೆ ಅನಿಶ್ಚಿತತೆಯನ್ನು ಸೃಷ್ಟಿಸಿದೆ. ಇಲ್ಲಿ ಪ್ರಸ್ತುತ ಭಾರತೀಯ 1 ರೂಪಾಯಿಯು 150.24 ಯುಝಡ್‌ಎಸ್‌ಗೆ ಸಮವಾಗಿದೆ.

ಗಿನಿಯನ್ ಫ್ರಾಂಕ್ (GNF) : ಗಿನಿಯನ್ ಫ್ರಾಂಕ್ ಗಿನಿಯಾದ ಅಧಿಕೃತ ಕರೆನ್ಸಿಯಾಗಿ ಕಾರ್ಯನಿರ್ವಹಿಸುತ್ತದೆ. ರಾಷ್ಟ್ರವು ವ್ಯಾಪಕ ಭ್ರಷ್ಟಾಚಾರ ಮತ್ತು ರಾಜಕೀಯ ಅಶಾಂತಿಯಿಂದ ಬಳಲುತ್ತಿದೆ. ಇದು ಅದರ ಕರೆನ್ಸಿಯನ್ನು ದುರ್ಬಲಗೊಳಿಸಿದೆ. ವರ್ಷದಿಂದ ವರ್ಷಕ್ಕೆ, ರಾಷ್ಟ್ರದ ಕರೆನ್ಸಿಯ ಮೌಲ್ಯವು ಕಡಿಮೆಯಾಗುತ್ತಲೇ ಇದೆ. ಇಲ್ಲಿ ಪ್ರಸ್ತುತ ಭಾರತೀಯ 1 ರೂಪಾಯಿಯು 102.41 ಜಿಎನ್‌ಎಫ್‌ಗೆ ಸಮವಾಗಿದೆ.

ಪರಗ್ವೆಯ ಗೌರಾನಿ (PYG) : ಹೆಚ್ಚಿನ ಹಣದುಬ್ಬರ, ಭ್ರಷ್ಟಾಚಾರ, ಹೆಚ್ಚಿನ ನಿರುದ್ಯೋಗ ಮತ್ತು ಹೆಚ್ಚಿದ ಬಡತನದ ಪರಿಣಾಮವಾಗಿ ದೇಶವು ವಿನಾಶಕಾರಿ ಆರ್ಥಿಕ ಕುಸಿತವನ್ನು ಅನುಭವಿಸಿತು. ಈ ಪ್ರತಿಯೊಂದು ಅಂಶಗಳು ಕರೆನ್ಸಿಯ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರಿವೆ. ಇಲ್ಲಿ ಪ್ರಸ್ತುತ ಭಾರತೀಯ 1

ರೂಪಾಯಿಯು 89.88 ಪಿವೈಜಿಗೆ ಸಮವಾಗಿದೆ.

ಕಾಂಬೋಡಿಯನ್ ರಿಯಲ್ (KHR) : ದುರ್ಬಲವಾದ ಕಾಂಬೋಡಿಯನ್ ರಿಯಲ್ ಹಿಂದಿನ ಪ್ರಮುಖ ಕಾರಣವೆಂದರೆ ದೇಶದ ಹೆಚ್ಚಿನ ಡಾಲರೀಕರಣ. 80ರ ದಶಕದ ಉತ್ತರಾರ್ಧ ಮತ್ತು 90ರ ದಶಕದ ಆರಂಭದಲ್ಲಿ ರಾಜಕೀಯ ಅಸಾಮರ್ಥ್ಯಗಳಿಂದಾಗಿ ದೇಶದ ರಿಯಲ್‌ನಲ್ಲಿ ವಿದೇಶಿ ಹೂಡಿಕೆಯನ್ನು ನಡೆಸಿ ಸಾರ್ವಜನಿಕ ವಿಶ್ವಾಸವನ್ನು ಗಳಿಸಲಾಯಿತು. 90 ರ ದಶಕದಲ್ಲಿ ಯುಎಸ್ ಡಾಲರ್ ಜನರಿಗೆ ಅನುಕೂಲಕರವಾಯಿತು. ಅತ್ಯಧಿಕ ಮಟ್ಟದಲ್ಲಿ ಯುಎಸ್ ಡಾಲರ್ ದೇಶದಲ್ಲಿ ಚಲಾವಣೆಯಾಯಿತು. ಹೀಗಾಗಿ ಶೇ. 90 ರಷ್ಟು ರಿಯಲ್ ಡಾಲರ್ ರೂಪದಲ್ಲಿದೆ. ಕಳೆದ ಎರಡು ದಶಕಗಳಲ್ಲಿ ನ್ಯಾಷನಲ್ ಬ್ಯಾಂಕ್ ಆಫ್ ಕಾಂಬೋಡಿಯಾ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಇದು ರಿಯಲ್ ಚಲಾವಣೆಯಲ್ಲಿ ಶೇ. 80ರಷ್ಟು ಹೆಚ್ಚಳಕ್ಕೆ ಕಾರಣವಾಯಿತು. ಆದರೂ ಇದು ಇನ್ನೂ ಹೆಚ್ಚು ಯುಎಸ್ ಡಾಲರ್ ಅನ್ನು ಅವಲಂಬಿಸಿದೆ. ಇಲ್ಲಿ ಪ್ರಸ್ತುತ ಭಾರತೀಯ 1 ರೂಪಾಯಿಯು 48.62 ರಿಯಲ್ ಗೆ ಸಮವಾಗಿದೆ.

ಉಗಾಂಡಾ ಶಿಲ್ಲಿಂಗ್ (UGX) : 1966ರಲ್ಲಿ ಉಗಾಂಡಾದ ಶಿಲ್ಲಿಂಗ್ ಪೂರ್ವ ಆಫ್ರಿಕಾದ ಶಿಲ್ಲಿಂಗ್ ಅನ್ನು ಬದಲಿಸಿತು. ಪ್ರಸ್ತುತ ಉಗಾಂಡಾದ ಶಿಲ್ಲಿಂಗ್ ಅತ್ಯಂತ ಕಡಿಮೆ ಬೆಲೆಬಾಳುವ ಕರೆನ್ಸಿಗಳಲ್ಲಿ ಒಂದಾಗಿದೆ. ಇದಿ ಅಮೀನ್ ಆಳ್ವಿಕೆಯ ಅಡಿಯಲ್ಲಿ ಉಗಾಂಡಾವು ರಾಷ್ಟ್ರದ ಆರ್ಥಿಕತೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ವಲಸೆ ಕಾನೂನುಗಳಂತಹ ಕ್ರಮಗಳಿಂದ ಗಮನಾರ್ಹ ಹಿನ್ನಡೆ ಅನುಭವಿಸಿತು. ಅಧ್ಯಕ್ಷರ ಆರ್ಥಿಕ ಕುಸಿತದ ಪರಿಣಾಮಗಳು ದೇಶದ ಪ್ರಗತಿಗೆ ಅಡ್ಡಿಯಾಗುತ್ತಲೇ ಇವೆ. ಆದರೂ ಇತ್ತೀಚಿನ ವರ್ಷಗಳಲ್ಲಿ ಕರೆನ್ಸಿಯ ಮೌಲ್ಯವು ಹೆಚ್ಚಿದೆ. ಇಲ್ಲಿ ಪ್ರಸ್ತುತ ಭಾರತೀಯ 1 ರೂಪಾಯಿಯು 44.22 ಯುಜಿಎಕ್ಸ್ ಆಗಿದೆ.

ಈ ಹತ್ತು ಅಗ್ಗದ ದೇಶಗಳ ಕರೆನ್ಸಿಯೊಂದಿಗೆ ಭಾರತೀಯ ರೂಪಾಯಿ ಮೌಲ್ಯದ ಹೋಲಿಕೆಯು 2024ರ ಆಗಸ್ಟ್ 19ರ ಅಂಕಿ ಅಂಶಗಳನ್ನು ಆಧರಿಸಿ ನೀಡಲಾಗಿದೆ. ಇದು ಕೆಲವೊಮ್ಮೆ ಕೊಂಚ ಏರಿಳಿತ ಕಾಣಬಹುದು.

ಬ್ಯಾಂಕ್ ಲಾಕರ್‌ನಲ್ಲಿ ಇಟ್ಟ ವಸ್ತು ಕಳೆದರೆ ಅದರ ಹೊಣೆಯಾರದು

ಲಾಕರ್ ಸೇವೆ ಹೇಗಿರುತ್ತದೆ. ಅದರ ನಿಬಂಧನೆಗಳು ಯಾವುವು ಎಂಬುದನ್ನು ವಿವರಿಸುವ ಒಪ್ಪಂದದ ದಾಖಲೆಯನ್ನು ಬ್ಯಾಂಕ್ ಒದಗಿಸುತ್ತದೆ. ಈ ಒಪ್ಪಂದವು ಕಾನೂನಾತ್ಮಕವಾಗಿ ಬದ್ಧವಾಗಿದೆ. ಇದಕ್ಕೆ ಬ್ಯಾಂಕ್ ಅಧಿಕಾರಿಗಳು ಮತ್ತು ಗ್ರಾಹಕರು ಸಹ ಸಹಿ ಹಾಕುತ್ತಾರೆ. ಲಾಕರ್‌ಗಳು ಸಣ್ಣದರಿಂದ ದೊಡ್ಡ ಗಾತ್ರದ ಕಪಾಟುಗಳವರೆಗೆ ಇರುತ್ತವೆ. ಅವುಗಳನ್ನು ನಿಯೋಜಿಸುವಾಗ ಅನೇಕ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಲಾಕರ್‌ಗಳು ಸಂಪೂರ್ಣವಾಗಿ ಭರ್ತಿಯಾದಾಗ ವೇಟಿಂಗ್ ಲಿಸ್ಟ್ ವ್ಯವಸ್ಥೆಯನ್ನು ಸಹ ಜಾರಿಗೆ ತರಲಾಗುತ್ತದೆ. ಲಾಕರ್ ಅನ್ನು ಹಂಚಿಕೆ ಮಾಡಿದ ನಂತರ ಕೀ ಸಂಖ್ಯೆಯನ್ನು ಗ್ರಾಹಕರಿಗೆ ಹಸ್ತಾಂತರಿಸಲಾಗುತ್ತದೆ. ಅಲ್ಲದೆ, ಬ್ಯಾಂಕ್ ಮಾಸ್ಟರ್ ಕೀಯನ್ನು ಹೊಂದಿದೆ.

ಬ್ಯಾಂಕುಗಳು ನೀಡುವ ಲಾಕರ್ ಸೌಲಭ್ಯದ ಬಗ್ಗೆ ಎಲ್ಲರಿಗೂ ತಿಳಿದಿದೆ. ಬೆಲೆಬಾಳುವ ಆಭರಣಗಳು, ದಾಖಲೆಗಳು ಮತ್ತು ದಾಖಲೆಗಳನ್ನು ಸಂಗ್ರಹಿಸಲು ಅವು ಬಹಳ ಉಪಯುಕ್ತವಾಗಿವೆ. ಬೆಲೆಬಾಳುವ ವಸ್ತುಗಳನ್ನು ಮನೆಯಲ್ಲಿ ಇಡುವುದು ಅಪಘಾತಗಳಿಗೆ ಕಾರಣವಾಗಬಹುದು.

ವಿಶೇಷವಾಗಿ ಕಳ್ಳತನದ ಭಯ : ಬ್ಯಾಂಕ್ ಲಾಕರ್ ಗಳಲ್ಲಿ ನಮ್ಮ ಸರಕುಗಳ ಸಂಪೂರ್ಣ ಭದ್ರತೆ ಇದೆ. ಲಾಕರ್ ಗಳು ಇರುವ ಕೋಣೆಯಲ್ಲಿ ಕಣ್ಗಾವಲು ಕ್ಯಾಮೆರಾಗಳು ದಿನದ 24 ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತವೆ. ಭದ್ರತೆಯಲ್ಲಿ ಕಟ್ಟೆಚ್ಚರ ವಹಿಸಲಾಗುವುದು. ಹೊರಗೆ ಅವರು ಒಳಗೆ ಪ್ರವೇಶಿಸುವ ಸಾಧ್ಯತೆಯಿಲ್ಲ. ಆದ್ದರಿಂದ ಅತ್ಯಂತ ಅಮೂಲ್ಯವಾದ ವಸ್ತುಗಳನ್ನು ಸಂಗ್ರಹಿಸಲು ಬ್ಯಾಂಕ್ ಲಾಕರ್ ಗಳು ಬಹಳ ಉಪಯುಕ್ತವಾಗಿವೆ. ಆದರೆ ಯಾವ ವಸ್ತುಗಳನ್ನು ಲಾಕರ್‌ಗಳಲ್ಲಿ ಅಡಗಿಸಿಡಬಹುದು. ಅವು ಹಾನಿಗೊಳಗಾದರೆ ಯಾರು ಜವಾಬ್ದಾರರು ಮತ್ತು ನಿಯಮಗಳು ಏನು ಹೇಳುತ್ತವೆ ಎಂಬುದನ್ನು ಕಂಡುಹಿಡಿಯೋಣ.

ರಿಸರ್ವ್ ಬ್ಯಾಂಕಿನ ನಿಯಮಗಳು : ಬ್ಯಾಂಕುಗಳ ಲಾಕರ್‌ಗಳಿಗೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕೆಲವು ಮಾರ್ಗಸೂಚಿಗಳನ್ನು ರೂಪಿಸಿದೆ. ಅವುಗಳನ್ನು ಗ್ರಾಹಕರು ಮತ್ತು ಬ್ಯಾಂಕುಗಳು ಅನುಸರಿಸಬೇಕು. ಯಾವುದೇ ವಸ್ತುಗಳನ್ನು ಲಾಕರ್‌ಗಳಲ್ಲಿ ಅಡಗಿಸಿಡಬಹುದು. ಯಾವುದೇ ಕಳ್ಳತನದ ಸಂದರ್ಭದಲ್ಲಿ ಬ್ಯಾಂಕುಗಳು ಎಷ್ಟರ ಮಟ್ಟಿಗೆ ಜವಾಬ್ದಾರರಾಗಿರುತ್ತವೆ ಎಂಬುದರ ಕುರಿತು ಇದು ನೀತಿಗಳನ್ನು ರೂಪಿಸಿದೆ.

ಪ್ರಮುಖ ಅಂಶಗಳು : ಕೆಲವು ಬ್ಯಾಂಕುಗಳು ಲಾಕರ್ ಮತ್ತು ಇತರ ಸೇವೆಗಳನ್ನು ಒದಗಿಸಲು ಉಳಿತಾಯ ಅಥವಾ ಚಾಲ್ತಿ ಖಾತೆಯನ್ನು ತೆರೆಯಲು ಗ್ರಾಹಕರನ್ನು ಕೇಳುತ್ತಿವೆ. ಬ್ಯಾಂಕಿನಲ್ಲಿ ಲಾಕರ್ ಸೌಲಭ್ಯವನ್ನು ಬಯಸುವವರು ಕೆಲವು ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ. ಇದರರ್ಥ ವೈಯಕ್ತಿಕ ಗುರುತು, ವಿಳಾಸ ಪುರಾವೆ, ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್ ಮತ್ತು ಇತ್ತೀಚಿನ ಫೋಟೋವನ್ನು ಒದಗಿಸಬೇಕಾಗುತ್ತದೆ.

ಲಾಕರ್ ಸೇವೆ ಹೇಗಿರುತ್ತದೆ. ಅದರ ನಿಬಂಧನೆಗಳು ಯಾವುವು ಎಂಬುದನ್ನು ವಿವರಿಸುವ ಒಪ್ಪಂದದ

12ನೇ ಪುಟಕ್ಕೆ...

ನಕಲಿ ಎಸ್‌ಬಿಐ ಬ್ಯಾಂಕ್ ತೆರೆದು ವಂಚನೆ

ಗ್ರಾಮಸ್ಥರು ಹೊಸ ಶಾಖೆ ತೆರೆದ ಕಾರಣ ಉತ್ಸುಕರಾಗಿದ್ದರು. ಬ್ಯಾಂಕ್ ಸಂಪೂರ್ಣವಾಗಿ ಕಾರ್ಯಾರಂಭ ನಂತರ ಉತ್ತಮ ವಹಿವಾಟು ನಡೆಯಿತು. ಸಾಲವನ್ನು ತೆಗೆದುಕೊಳ್ಳುವ ಬಗ್ಗೆ ಯೋಚಿಸಿದ್ದರು. ಹಲವರು ಚಿನ್ನಾಭರಣ ಅಡಮಾನವಿಟ್ಟು ಸಾಲ ಪಡೆದರು. ನಿರುದ್ಯೋಗಿ ಸಂತ್ರಸ್ತರು ಈಗ ಆರ್ಥಿಕ ನಷ್ಟದ ಜೊತೆಗೆ ಕಾನೂನು ತೊಂದರೆಗಳನ್ನೂ ಎದುರಿಸುತ್ತಿದ್ದಾರೆ ಎಂದು ಸ್ಥಳೀಯ ಅಂಗಡಿ ಮಾಲೀಕ ಯೋಗೇಶ್ ಸಾಹು ಹೇಳಿದ್ದಾರೆ. ಅಜಯ್ ಅವರ ಅನುಮಾನ ಮತ್ತು ನಂತರ ದಾಬ್ರಾ ಬ್ರಾಂಚ್ ಮ್ಯಾನೇಜರ್‌ಗೆ ನೀಡಿದ ವರದಿಯು ಈ ಸಂಕೀರ್ಣ ಹಗರಣವನ್ನು ಬಿಚ್ಚಿಡಲು ಕಾರಣವಾಯಿತು.

ಛತ್ತೀಸ್‌ಗಢ: ಇತ್ತೀಚೆಗೆ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿವೆ. ಬ್ಯಾಂಕ್ ವಹಿವಾಟು, ಆನ್‌ಲೈನ್ ವ್ಯವಹಾರ ಸೇರಿ ಇತರ ಹಣಕಾಸು ವಂಚನೆಗಳ ವಿವಿಧ ಪ್ರಕರಣಗಳು ಪತ್ತೆಯಾಗುತ್ತಿವೆ. ಆದರೆ, ಛತ್ತೀಸ್‌ಗಢದಲ್ಲಿ ನಡೆದ ಘಟನೆ ಹಿಂದೆಂದೂ ನಡೆಯದ ವಂಚನೆ ಪ್ರಕರಣಗಳಲ್ಲಿ ಒಂದಾಗಿದೆ.

ಇಲ್ಲಿನ ಮೋಸದ ಕಥೆ, ಸಿನಿಮಾ ಕಥೆಯನ್ನೂ ಮೀರಿಸುವಂತಿದೆ ಎಂದರೂ ತಪ್ಪಾಗಲ್ಲ. ಹೌದು ನಕಲಿ ಎಸ್‌ಬಿಐ ಬ್ಯಾಂಕನ್ನೇ ತೆರೆದು ನೂರಾರು ಜನರಿಗೆ ವಂಚಿಸಿರುವ ಘಟನೆ ರಾಜ್ಯದ ರಾಜಧಾನಿ ರಾಯ್‌ಪುರದಿಂದ ಸುಮಾರು 250 ಕಿಲೋಮೀಟರ್ ದೂರದಲ್ಲಿರುವ ಸಕ್ತಿ ಜಿಲ್ಲೆಯ ಛಪೋರಾ ಎಂಬ ಪ್ರಶಾಂತ ಹಳ್ಳಿಯಲ್ಲಿ ನಡೆದಿದೆ. ಇದು ದೇಶದ ಅತಿ ದೊಡ್ಡ ಬ್ಯಾಂಕಿಂಗ್ ವಂಚನೆ ಪ್ರಕರಣ ಎಂದು ಹೇಳಲಾಗುತ್ತಿದೆ. ದೇಶದ ಅತಿ ದೊಡ್ಡ ಬ್ಯಾಂಕ್ ಸ್ಟೇಟ್ ಬ್ಯಾಂಕ್ ತೆರೆದ ಆರು ಅಪರಿಚಿತ ವ್ಯಕ್ತಿಗಳು, ಹಳ್ಳಿಯ ಜನರನ್ನು ನಂಬಿಸಿದ್ದರು. ನಿಖರವಾದ ಯೋಜನೆಯೊಂದಿಗೆ ನಕಲಿ ಬ್ಯಾಂಕ್ ತೆರೆದು ಗ್ರಾಮಸ್ಥರನ್ನು ನಂಬಿಸಲು ಅತ್ಯುತ್ತಮ ಸಿದ್ಧತೆ ಮಾಡಿಕೊಂಡಿದ್ದರು. ಕೇವಲ 10 ದಿನಗಳ ಹಿಂದೆ ಪ್ರಾರಂಭವಾದ ಎಸ್‌ಬಿಐ ಶಾಖೆಯು ನೈಜ ಬ್ಯಾಂಕ್‌ನ ಎಲ್ಲಾ ಅಂಶಗಳನ್ನು ಒಳಗೊಂಡಿತ್ತು. ಹೊಸ ಪೀಠೋಪಕರಣಗಳು, ವೃತ್ತಿಪರ ಪೇಪರ್‌ಗಳು, ಕಾರ್ಯನಿರ್ವಹಿಸುವ ಬ್ಯಾಂಕ್ ಕೌಂಟರ್ಸ್, ಬೋರ್ಡ್‌ಗಳು... ಹೀಗೆ ಎಲ್ಲವೂ ನೈಜವಾಗಿದ್ದವು. ಗ್ರಾಮಸ್ಥರನ್ನು ನಂಬಿಸಲು ಏನೆಲ್ಲಾ ಮಾಡಬೇಕೋ ಅದೆಲ್ಲವನ್ನೂ ಮಾಡಿದ್ದರು. ಜನರು ಕೂಡ ನಂಬಿದ್ದರು.

ಎಲ್ಲವೂ ಒರಿಜಿನಲ್ ಆಗಿಯೇ ರೆಡಿ ಮಾಡಿಸಿದ್ದ : ನಡೆಯುತ್ತಿರುವ ಹಗರಣದ ಅರಿವಿಲ್ಲದ ಗ್ರಾಮಸ್ಥರು ಖಾತೆ ತೆರೆಯಲು, ವಹಿವಾಟು ನಡೆಸಲು ಈ ನಕಲಿ ಬ್ಯಾಂಕ್‌ಗೆ ಭೇಟಿ ನೀಡಲು ಪ್ರಾರಂಭಿಸಿದರು. ಹೊಸದಾಗಿ ನೇಮಕಗೊಂಡ ಉದ್ಯೋಗಿಗಳು ಪ್ರತಿಷ್ಠಿತ ಬ್ಯಾಂಕ್‌ನಲ್ಲಿ ಉದ್ಯೋಗ ಪಡೆದಿದ್ದಕ್ಕೆ ಫುಲ್ ಖುಷ್ ಆದರು. ಎಲ್ಲವೂ ನೈಜವಾಗಿಯೇ ಇರುವಂತೆ ಆಫರ್ ಲೆಟರ್ಸ್, ಮ್ಯಾನೇಜರ್ಸ್, ಮಾರ್ಕೆಟಿಂಗ್ ಅಧಿಕಾರಿಗಳು, ಕ್ಯಾಷಿಯರ್ಸ್ ಮತ್ತು ಕಂಪ್ಯೂಟರ್ ಆಪರೇಟರ್‌ಗಳನ್ನು ನೇಮಕ ಮಾಡಿಕೊಂಡಿದ್ದ. ವಂಚಕನು ಎಲ್ಲಾ ಉದ್ಯೋಗಿಗಳಿಗೆ ತರಬೇತಿ ಕೂಡ ನೀಡಿದ್ದ. ಆದರೆ ಈ ಉದ್ಯೋಗಿಗಳು ಉದ್ಯೋಗ ಪಡೆಯಲು 2 ಲಕ್ಷದಿಂದ 6 ಲಕ್ಷ ರೂಪಾಯಿ ಪಾವತಿಸಿದ್ದರು ಎಂಬುದು ಮತ್ತೊಂದು ಅಚ್ಚರಿ ಸಂಗತಿ.

ಆದರೆ, ಅಜಯ್ ಕುಮಾರ್ ಅಗರ್ವಾಲ್ ಎಂಬ ಸ್ಥಳೀಯ ಗ್ರಾಮಸ್ಥರು ಛಪೋರಾದಲ್ಲಿ ಎಸ್‌ಬಿಐ ಕಿಯೋಸ್ಕ್‌ಗಾಗಿ ಅರ್ಜಿ ಸಲ್ಲಿಸಿದ್ದರು. ರಾತ್ರೋರಾತ್ರಿ ಇದ್ದಕ್ಕಿದ್ದಂತೆ ಎಸ್‌ಬಿಐ ಶಾಖೆಯೊಂದು ತೆರೆದಿದ್ದೇಗೆ? ಏಕೆಂದರೆ ಕಾನೂನುಬದ್ಧ ಶಾಖೆ ದಾಬ್ರಾದಲ್ಲಿದ್ದರೂ ಇದ್ದಕ್ಕಿದ್ದಂತೆ ಬ್ರಾಂಚ್ ಓಪನ್ ಮಾಡಿದ್ದೇಗೆ ಎಂಬ ಅನುಮಾನ ಎಂದು ವ್ಯಕ್ತಪಡಿಸಿದ್ದರು. ಅಲ್ಲದೆ, ಅಜಯ್ ಬ್ಯಾಂಕ್ ಉದ್ಯೋಗಿಗಳನ್ನು ವಿಚಾರಿಸಿದ್ದರು. ಆದರೆ ಅವರಿಂದ ತೃಪ್ತಿದಾಯಕ ಉತ್ತರಗಳು ಬರಲಿಲ್ಲ. ಸೈನ್‌ಬೋರ್ಡ್‌ನಲ್ಲಿ ಯಾವುದೇ ಶಾಖೆಯ ಕೋಡ್ ಪಟ್ಟಿ ಮಾಡಿರಲಿಲ್ಲ. ಗ್ರಾಮದ ನಿವಾಸಿ ತೋಷ್ ಚಂದ್ರ ಎಂಬುವರಿಗೆ ಸೇರಿದ ಬಾಡಿಗೆ ಕಾಂಪ್ಲೆಕ್ಸ್‌ನಲ್ಲಿ ನಕಲಿ ಎಸ್‌ಬಿಐ ಶಾಖೆಯನ್ನು ಸ್ಥಾಪಿಸಲಾಗಿತ್ತು.

30 ಸಾವಿರ ಸಂಬಳ ನೀಡುವ ಭರವಸೆ ನೀಡಿದ್ರು : ಆ ಜಾಗದ ಬಾಡಿಗೆ ತಿಂಗಳಿಗೆ 7,000 ಸಾವಿರ ರೂಪಾಯಿ ಇತ್ತು. ವಿವಿಧ ಜಿಲ್ಲೆಗಳ ನಿರುದ್ಯೋಗಿ ಯುವಕರನ್ನೇ

ಈತ ಗುರಿಯಾಗಿಸಿಕೊಂಡಿದ್ದ. ಉದ್ಯೋಗಿಯಾಗಿ ನೇಮಕಗೊಂಡಿದ್ದ ಜ್ಯೋತಿ ಯಾದವ್ ಎಂಬವರು, 'ನಾನು ನನ್ನ ದಾಖಲೆಗಳನ್ನು ಸಲ್ಲಿಸಿದೆ. ಬಯೋಮೆಟ್ರಿಕ್ಸ್ ಪೂರ್ಣಗೊಳಿಸಿ ನನ್ನ ಕೆಲಸಕ್ಕೆ ಸೇರಿದ್ದನ್ನು ಖಚಿತಪಡಿಸಿದ್ದರು. ಇನ್ನೋರ್ವ ಸಂತ್ರಸ್ತೆ ಸಂಗೀತಾ ಕನ್ವರ್ ಎಂಬವರು ಮಾತನಾಡಿ, 'ನನಗೆ 5 ಲಕ್ಷ ರೂಪಾಯಿ ಕೇಳಲಾಗಿತ್ತು. ಆದರೆ ಅಷ್ಟು ಪಾವತಿಸಲು ಸಾಧ್ಯವಿರಲಿಲ್ಲ ಎಂದು ಅವರಿಗೆ ಹೇಳಿದ್ದೆ. ಅಂತಿಮವಾಗಿ 2.5 ಲಕ್ಷ ರೂಪಾಯಿ ಹೊಂದಿಸಿದ್ದೆವು. ನನಗೆ 30,000 ರೂಪಾಯಿ ಸಂಬಳ ನೀಡುವುದಾಗಿ ಭರವಸೆ ನೀಡಲಾಯಿತು' ಎಂದರು.

ಗ್ರಾಮಸ್ಥರು ಹೊಸ ಶಾಖೆ ತೆರೆದ ಕಾರಣ ಉತ್ಸುಕರಾಗಿದ್ದರು. ಬ್ಯಾಂಕ್ ಸಂಪೂರ್ಣವಾಗಿ ಕಾರ್ಯಾರಂಭ ನಂತರ ಉತ್ತಮ ವಹಿವಾಟು ನಡೆಯಿತು. ಸಾಲವನ್ನು ತೆಗೆದುಕೊಳ್ಳುವ ಬಗ್ಗೆ ಯೋಚಿಸಿದ್ದರು. ಹಲವರು ಚಿನ್ನಾಭರಣ ಅಡಮಾನವಿಟ್ಟು ಸಾಲ ಪಡೆದರು. ನಿರುದ್ಯೋಗಿ ಸಂತ್ರಸ್ತರು ಈಗ ಆರ್ಥಿಕ ನಷ್ಟದ ಜೊತೆಗೆ ಕಾನೂನು ತೊಂದರೆಗಳನ್ನೂ ಎದುರಿಸುತ್ತಿದ್ದಾರೆ ಎಂದು ಸ್ಥಳೀಯ ಅಂಗಡಿ ಮಾಲೀಕ ಯೋಗೇಶ್ ಸಾಹು ಹೇಳಿದ್ದಾರೆ. ಅಜಯ್ ಅವರ ಅನುಮಾನ ಮತ್ತು ನಂತರ ದಾಬ್ರಾ ಬ್ರಾಂಚ್ ಮ್ಯಾನೇಜರ್‌ಗೆ ನೀಡಿದ ವರದಿಯು ಈ ಸಂಕೀರ್ಣ ಹಗರಣವನ್ನು ಬಿಚ್ಚಿಡಲು ಕಾರಣವಾಯಿತು.

ಪೊಲೀಸರು ಹೇಳಿದ್ದೇನು? : ಛಪೋರಾದಲ್ಲಿ ಕಾರ್ಯಾಚರಿಸುತ್ತಿರುವ ನಕಲಿ ಬ್ಯಾಂಕ್ ಬಗ್ಗೆ ಡಾಬ್ರಾ ಶಾಖೆಯ ಮ್ಯಾನೇಜರ್ ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದರು. ಆದರೆ ತನಿಖೆಯ ನಂತರ, ಬ್ಯಾಂಕ್ ನಕಲಿ ಎಂದು ದೃಢಪಟ್ಟಿತು. ಉದ್ಯೋಗಿಗಳನ್ನು ನಕಲಿ ದಾಖಲೆಗಳೊಂದಿಗೆ ನೇಮಿಸಲಾಗಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿ ರಾಜೇಶ್ ಪಟೇಲ್ ಹೇಳಿದ್ದಾರೆ. ಇಲ್ಲಿ ನೂರಾರು ಜನರ ಕೋಟಿ ಕೋಟಿ ರೂಪಾಯಿ ವಂಚನೆಯಾಗಿದೆ. ನಕಲಿ ಎಸ್‌ಬಿಐ ಶಾಖೆಯ ಮ್ಯಾನೇಜರ್ ರೇಖಾ ಸಾಹು, ಮಂದಿರ್ ದಾಸ್ ಮತ್ತು ಪಂಕಜ್ ಸೇರಿದಂತೆ ಹಗರಣದಲ್ಲಿ ಭಾಗಿಯಾದವರ ನಾಲ್ವರನ್ನು ಈವರೆಗೆ ಗುರುತಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

...10ನೇ ಪುಟದಿಂದ

ದಾಖಲೆಯನ್ನು ಬ್ಯಾಂಕ್ ಒದಗಿಸುತ್ತದೆ. ಈ ಒಪ್ಪಂದವು ಕಾನೂನಾತ್ಮಕವಾಗಿ ಬದ್ಧವಾಗಿದೆ. ಇದಕ್ಕೆ ಬ್ಯಾಂಕ್ ಅಧಿಕಾರಿಗಳು ಮತ್ತು ಗ್ರಾಹಕರು ಸಹ ಸಹಿ ಹಾಕುತ್ತಾರೆ. ಲಾಕರ್‌ಗಳು ಸಣ್ಣದರಿಂದ ದೊಡ್ಡ ಗಾತ್ರದ ಕಪಾಟುಗಳವರೆಗೆ ಇರುತ್ತವೆ. ಅವುಗಳನ್ನು ನಿಯೋಜಿಸುವಾಗ ಅನೇಕ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಲಾಕರ್‌ಗಳು ಸಂಪೂರ್ಣವಾಗಿ ಭರ್ತಿಯಾದಾಗ ವೇಟಿಂಗ್ ಲಿಸ್ಟ್ ವ್ಯವಸ್ಥೆಯನ್ನು ಸಹ ಜಾರಿಗೆ ತರಲಾಗುತ್ತದೆ. ಲಾಕರ್ ಅನ್ನು ಹಂಚಿಕೆ ಮಾಡಿದ ನಂತರ ಕೀ ಸಂಖ್ಯೆಯನ್ನು ಗ್ರಾಹಕರಿಗೆ ಹಸ್ತಾಂತರಿಸಲಾಗುತ್ತದೆ. ಅಲ್ಲದೆ, ಬ್ಯಾಂಕ್ ಮಾಸ್ಟರ್ ಕೀಯನ್ನು ಹೊಂದಿದೆ.

ಲಾಕರ್ ಸೌಲಭ್ಯವನ್ನು ಬಳಸುವ ಗ್ರಾಹಕರಿಂದ ಸ್ವಲ್ಪ ಶುಲ್ಕವನ್ನು ವಿಧಿಸಲಾಗುತ್ತದೆ. ಆ ಶುಲ್ಕವು ಬ್ಯಾಂಕಿನ ಸ್ಥಳ ಮತ್ತು ಬಾಡಿಗೆಗೆ ನೀಡಲಾದ ಲಾಕರ್‌ನ ಗಾತ್ರವನ್ನು ಅವಲಂಬಿಸಿರುತ್ತದೆ.

ಲಾಕರ್‌ಗೆ ಹಾನಿಯಾದರೆ : ಬ್ಯಾಂಕ್ ಲಾಕರ್‌ಗಳಲ್ಲಿ ಅಡಗಿಸಿಟ್ಟಿರುವ ವಸ್ತುಗಳು ಸುರಕ್ಷಿತ ಮತ್ತು ಸುಭದ್ರವಾಗಿವೆ. ಆದಾಗ್ಯೂ, ಕೆಲವು ಸಂದರ್ಭಗಳಲ್ಲಿ, ಗ್ರಾಹಕರಿಗೆ ನಷ್ಟವಾಗಿದ್ದರೂ ಸಹ ನಿಯಮಗಳ ಪ್ರಕಾರ ಬ್ಯಾಂಕುಗಳು ಜವಾಬ್ದಾರರಾಗಿರುವುದಿಲ್ಲ. ಬ್ಯಾಂಕಿನ ಸಿಬ್ಬಂದಿಯಿಂದಾಗಿ ಲಾಕರ್ ಗಳಲ್ಲಿನ ಸರಕುಗಳಿಗೆ ಹಾನಿಯಾದರೆ ಬ್ಯಾಂಕುಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು. ಅಂತಹ ಸಮಯದಲ್ಲಿ ನೀವು ನಿಮ್ಮ ವಸ್ತುವಿನ ಮೌಲ್ಯದ ಸುಮಾರು ನೂರು ಪಟ್ಟು ಒದಗಿಸಬೇಕಾಗುತ್ತದೆ.

ಭೂಕಂಪ, ಪ್ರವಾಹ, ಮಿಂಚು ಮತ್ತು ಗುಡುಗು ಸಹಿತ ನೈಸರ್ಗಿಕ ವಿಪತ್ತುಗಳ ಸಂದರ್ಭದಲ್ಲಿ, ಗ್ರಾಹಕರ ನಿರ್ಲಕ್ಷ್ಯದಿಂದಾಗಿ ಲಾಕರ್ ಗಳಲ್ಲಿನ ಸರಕುಗಳಿಗೆ

ಉಂಟಾದ ನಷ್ಟಕ್ಕೂ ಬ್ಯಾಂಕಿಗೆ ಯಾವುದೇ ಸಂಬಂಧವಿಲ್ಲ.

ಲಾಕರ್ ತೆಗೆದುಕೊಳ್ಳುವ ಸಮಯದಲ್ಲಿ ಗ್ರಾಹಕರು ತಮ್ಮ ನಾಮನಿರ್ದೇಶಿತರ ವಿವರಗಳನ್ನು ಬಹಿರಂಗಪಡಿಸಬೇಕು. ಗ್ರಾಹಕರ ಆಕಸ್ಮಿಕ ಸಾವಿನ ಸಂದರ್ಭದಲ್ಲಿ ಲಾಕರ್ ತೆರೆಯಲು ನಾಮನಿರ್ದೇಶಿತರಿಗೆ ಅವಕಾಶವಿದೆ.

ಗೋಲ್ಡ್ ಲೋನ್ ಬಗ್ಗೆ ಬಿಗ್ ಅಪ್ಡೇಟ್ : ಸಾಲದ ಅಂತರ ಕಡಿಮೆ ಮಾಡಲು ಆರ್‌ಬಿಐನಿಂದ ಶೀಘ್ರ ಹೊಸ ಆಯ್ಕೆ!

ಭಾರತೀಯ ನಾಗರಿಕರು ಹೊಂದಿರುವಷ್ಟು ಚಿನ್ನವನ್ನು ಬಹುಷಃ ವಿಶ್ವದ ಯಾವುದೇ ಸರ್ಕಾರಗಳು ಕೂಡ ಹೊಂದಿರಲಿಕ್ಕಿಲ್ಲ ಎಂಬ ಮಾತು ಸದ್ಯ ಎಲ್ಲರಿಗೂ ತಿಳಿದಿರುವ ವಿಚಾರ. ಭಾರತದಲ್ಲಿ ಚಿನ್ನವನ್ನು ಕೇವಲ ಆಭರಣದ ದೃಷ್ಟಿಯಿಂದ ನೋಡದೇ ಶುಭ ಅಥವಾ ಒಳಿತು ಎಂಬ ಹಿನ್ನೆಲೆಯಿಂದಲೇ ಗುರುತಿಸಿಲಾಗುತ್ತದೆ. ಇದೇ ಕಾರಣದಿಂದ ಬಹುತೇಕ ಭಾರತದ ಎಲ್ಲಾ ನಗರಗಳಲ್ಲೂ ಚಿನ್ನದಂಗಡಿಗಳು ಸರ್ವೇ ಸಾಮಾನ್ಯವಾಗಿದೆ. ಅದೂ ಅಲ್ಲದೆ ಚಿನ್ನವನ್ನು ಅಡವಿರಿಸಿ ಸಾಲ ನೀಡುವ ಸಂಸ್ಥೆಗಳು ಕೂಡ ಇದೀಗ ಭಾರತದಲ್ಲಿ ಅಲ್ಲಲ್ಲಿ ಹುಟ್ಟಿಕೊಳ್ಳುತ್ತಿದೆ. ಇನ್ನು ಚಿನ್ನದ ಸಾಲ ನೀಡುವ ಸಂಸ್ಥೆಗಳು ಅವರು ನಿಗದಿಪಡಿಸಿದ ಬಡ್ಡಿಯನ್ನು ಸಾಲಗಾರರಿಂದ ವಸೂಲಿ ಮಾಡಲಾಗುತ್ತದೆ.

ಸದ್ಯ ಬ್ಯಾಂಕ್‌ಗಳು ಮತ್ತು ಎನ್‌ಬಿಎಫ್‌ಸಿಗಳು ಸೇರಿದಂತೆ ಚಿನ್ನದ ಸಾಲ ಪೂರೈಕೆದಾರರು ಸಾಲಗಾರರಿಗೆ ಮಾಸಿಕ ಕಂತಿನ ಮರುಪಾವತಿ ಆಯ್ಕೆಗಳನ್ನು ಪರಿಚಯಿಸಲು ಯೋಜಿಸುತ್ತಿದ್ದಾರೆ ಎನ್ನಲಾಗಿದೆ. ಚಿನ್ನದ ಸಾಲ ವಿತರಣೆಯ ಪ್ರಸ್ತುತ ನಿಯಮಗಳಲ್ಲಿ ಹಲವಾರು ಸಮಸ್ಯೆಗಳಿದ್ದು, ಇದನ್ನು ತಪ್ಪಿಸಲು ಆರ್‌ಬಿಐ ಈ ಕ್ರಮಕ್ಕೆ ಮುಂದಾಗಿದೆ. ಈ ಮೂಲಕ ಸಾಲದ ಅವಧಿಯನ್ನು ದೀರ್ಘ ಸಮಯಕ್ಕೆ ಕೊಂಡುಹೋಗುವುದನ್ನು ತಪ್ಪಿಸಿ, ಪಾರದರ್ಶಕ ರೀತಿಯಲ್ಲಿ ಕೊಡು ಕೊಳ್ಳುವಿಕೆಗೆ ಆರ್‌ಬಿಐ ಹೆಚ್ಚಿನ ಗಮನ ಹರಿಸಿದೆ.

ಸದ್ಯ ಅಸ್ತಿತ್ವದಲ್ಲಿರುವ ಚಿನ್ನದ ಸಾಲದ ನಿಯಮಗಳಲ್ಲಿನ ಸಮಸ್ಯೆಗಳನ್ನು ಎತ್ತಿತೋರಿಸುತ್ತಿದ್ದು, ಪರಿಣಾಮ ಸದ್ಯ ರಿಸರ್ವ್ ಬ್ಯಾಂಕ್ ಇದರತ್ತ ನಿಗಾ ಇರಿಸಲು ಮುಂದಾಗಿದೆ ಎನ್ನಲಾಗಿದೆ.

ಚಿನ್ನದ ಸಾಲಗಳ ಸೋರ್ಸಿಂಗ್ ಮತ್ತು ಮೌಲ್ಯಮಾಪನ, ಸರಿಯಾದ ಶ್ರದ್ಧೆ, ನಿಧಿಯ ಅಂತಿಮ ಬಳಕೆಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಹರಾಜಿನ ಸಮಯದಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವುದು ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ರಿಸರ್ವ್‌ಬ್ಯಾಂಕ್ ಗುರುತಿಸಿದೆ.

ಹೊಸ ನಿಯಮದಲ್ಲೇನಿದೆ?

ಇನ್ನು ಪ್ರಸ್ತಾವಿತ ಹೊಸ ನಿಯಮದಲ್ಲಿ ಹಲವು ವಿಚಾರಗಳು ಅಡಕವಾಗಿದೆ. ನೂತನ ನಿಯಮದ ಪ್ರಕಾರ, ಸಾಲಗಾರರು ಸಾಲದ ಅವಧಿಯ ಪ್ರಾರಂಭದಿಂದ ಸಮಾನ ಮಾಸಿಕ ಕಂತುಗಳ ಮೂಲಕ ಅಸಲು ಮತ್ತು ಬಡ್ಡಿ ಎರಡನ್ನೂ ಮರುಪಾವತಿಸಲಿದ್ದಾರೆ. ಈ ಹಿಂದೆ ಸಾಮಾನ್ಯವಾಗಿ ಬಳಸಲಾಗುತ್ತಿದ್ದ ಬುಲೆಟ್ ಮರುಪಾವತಿ ವಿಧಾನವನ್ನು ಬದಲಿಸುವ ಮೂಲಕ ಸಾಲದಾತರು ಚಿನ್ನದ ಸಾಲಗಳನ್ನು ಟರ್ಮ್ ಲೋನ್‌ಗಳಾಗಿ ನೀಡಲು ಪರಿಗಣಿಸುತ್ತಿದ್ದಾರೆ. ಅದೂ ಅಲ್ಲದೆ ಸಾಮಾನ್ಯವಾಗಿ ಚಿನ್ನದ ಮೇಲಿನ ಸಾಲದ ವ್ಯವಸ್ಥೆಯಲ್ಲಿ ಸಾಲಗಾರರಿಗೆ ಸಾಲದ ಅವಧಿಯ ಕೊನೆಯಲ್ಲಿ ಬಡ್ಡಿ ಸೇರಿದಂತೆ ಸಂಪೂರ್ಣ ಮೊತ್ತವನ್ನು ಪಾವತಿಸಬೇಕಿದೆ. ಅದರಲ್ಲೂ ಮೆಚ್ಯೂರಿಟಿಯ ಮೊದಲು ಒಟ್ಟು ಮೊತ್ತವನ್ನು ಇತ್ಯರ್ಥಪಡಿಸುವವರೆಗೆ ಭಾಗಶಃ ಪಾವತಿಗಳನ್ನು ಸಹ ಇದರಲ್ಲಿ ಅನುಮತಿಸಲಾಗಿದೆ. ಇದರ ಹೊರತಾಗಿಯೂ ರಿಸರ್ವ್ ಬ್ಯಾಂಕ್ ಈ ವಿಧಾನದಲ್ಲಿ ಡೀಫಾಲ್ಟ್‌ಗಳು ಮತ್ತು ಅಕ್ರಮಗಳ ಅಪಾಯಗಳನ್ನು ಕೂಡ ಇದರಲ್ಲಿ ಬೊಟ್ಟು ಮಾಡಿದೆ.

ಆರ್‌ಬಿಐ ಸುತ್ತೋಲೆಯಲ್ಲಿ ಏನಿದೆ?

ಇನ್ನು ರಿಸರ್ವ್ ಬ್ಯಾಂಕ್ ಸೆಪ್ಟೆಂಬರ್ 30ರ ತನ್ನ ಸುತ್ತೋಲೆಯಲ್ಲಿ ಚಿನ್ನದ ಸಾಲಗಳಲ್ಲಿ ಮೂಲ, ಮೌಲ್ಯ ಮತ್ತು ಮೇಲ್ವಿಚಾರಣೆಯಲ್ಲಿ ನ್ಯೂನತೆಗಳನ್ನು ಎತ್ತಿ ತೋರಿಸಿದೆ. ಅಲ್ಲದೆ ಆರ್‌ಬಿಐಯು ಸಾಲ ಮತ್ತು ಮೌಲ್ಯ ಅನುಪಾತಗಳು, ಹರಾಜಿನಲ್ಲಿ ಪಾರದರ್ಶಕತೆ ಮತ್ತು ಅಪಾಯದ ಮೌಲ್ಯಮಾಪನಗಳೊಂದಿಗೆ ಮುಂತಾದ ಸಮಸ್ಯೆಗಳನ್ನು ಎತ್ತಿ ತೋರಿಸಿದೆ. ಹೆಚ್ಚುವರಿಯಾಗಿ ಭಾಗಶಃ ಪಾವತಿಗಳೊಂದಿಗೆ ಸಾಲಗಳನ್ನು ರೋಲಿಂಗ್ ಮಾಡುವುದು ಸಮಸ್ಯಾತ್ಮಕವಾಗಿದೆ ಎಂದು ಉಲ್ಲೇಖಿಸಿದೆ. ಚಿನ್ನದ ಮೇಲಾಧಾರದ ಮೇಲೆ ಮಾತ್ರ ಅವಲಂಬಿತರಾಗುವ ಬದಲು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲು ಸಾಲದಾತರನ್ನು ಆರ್‌ಬಿಐ ಒತ್ತಾಯಿಸಿದೆ. ಸಾಲದಾತರು ಒತ್ತೆ ಇಟ್ಟ ಚಿನ್ನದ ಮೌಲ್ಯವನ್ನು ಮಾತ್ರ ಅವಲಂಬಿಸಿರುವ ಬದಲು ಸಾಲಗಾರರ ಮರುಪಾವತಿ ಸಾಮರ್ಥ್ಯದ ಮೇಲೆ ಕೇಂದ್ರೀಕರಿಸಬೇಕೆಂದು ಆರ್‌ಬಿಐ ಬಯಸುತ್ತದೆ ಎಂದು ಹಿರಿಯ ಬ್ಯಾಂಕ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚಿನ್ನದ ಸಾಲದ ಬೇಡಿಕೆಯಲ್ಲಿ ಏರಿಕೆ ಎಲ್ಲರಿಗೂ ತಿಳಿದಿರುವಂತೆ ಭಾರತದಲ್ಲಿ ಚಿನ್ನದ ಮೇಲೆ ಸಾಲ ಪಡೆಯುವವರ ಸಂಖ್ಯೆ ತೀವ್ರವಾಗಿ ಹೆಚ್ಚುತ್ತಿದೆ. ಆದರೆ ಕೆಲವೊಂದು ಹಣಕಾಸಿನ ಸಂಸ್ಥೆಗಳು ಇದನ್ನೇ ಬಂಡವಾಳ ಮಾಡಿಕೊಂಡು ಬಡಕುಟುಂಬಗಳನ್ನು ಶೋಷಿಸುತ್ತಾರೆ ಎಂಬ ಆರೋಪಗಳು ಕೇಳಿಬಂದಿರುವ ಹಿನ್ನೆಲೆಯಲ್ಲಿ ಸದ್ಯ ಆರ್‌ಬಿಐ ಕ್ರಮಕ್ಕೆ ಮುಂದಾಗಿದೆ. ಬ್ಯಾಂಕುಗಳು ಮತ್ತು ಎನ್‌ಬಿಎಫ್‌ಸಿಗಳು ಸೆಪ್ಟೆಂಬರ್ 30ರ ಹೊತ್ತಿಗೆ ಆಭರಣಗಳ ಮೇಲೆ 1.4 ಲಕ್ಷ ಕೋಟಿ ರೂಪಾಯಿ ಸಾಲವನ್ನು ವಿತರಿಸಿವೆ. ಇದು ವರ್ಷದಿಂದ ವರ್ಷಕ್ಕೆ ಶೇಕಡಾ 51 ರಷ್ಟು ಹೆಚ್ಚಳವಾಗಿದೆ.

ಈ ಏರಿಕೆಯು ಹೆಚ್ಚಿನ ಚಿನ್ನದ ಬೆಲೆಗಳಿಗೆ ಕಾರಣವಾಗಿದೆ, ಇದು ಸಾಲಗಾರರಿಗೆ ಅಸ್ತಿತ್ವದಲ್ಲಿರುವ ಸಾಲಗಳ ಮೇಲೆ ಹೆಚ್ಚುವರಿ ಟಾಪ್-ಅಪ್‌ಗಳನ್ನು ಪಡೆಯಲು ಅವಕಾಶ ಮಾಡಿಕೊಟ್ಟಿದೆ. ಅಲ್ಲದೆ ಅಸುರಕ್ಷಿತ ಮತ್ತು ಕಿರುಬಂಡವಾಳ ಸಾಲಗಳ ಸೀಮಿತ ಲಭ್ಯತೆಯು ಹೆಚ್ಚಿನ ಸಾಲಗಾರರನ್ನು ಚಿನ್ನದ ಸಾಲಗಳತ್ತ ಪ್ರೇರೇಪಿಸಿದೆ.

ಭಾರತವು 10 ಟ್ರಿಲಿಯನ್ ಡಾಲರ್ ಆರ್ಥಿಕತೆ ಮುಟ್ಟಲಿದೆ: ಬೋರ್ಗೆ ಬ್ರೆಂಡೆ, ವಿಶ್ವ ಆರ್ಥಿಕ ವೇದಿಕೆಯ ಅಧ್ಯಕ್ಷ

ಭಾರತ ಉತ್ತಮ ಆರ್ಥಿಕ ಪ್ರಗತಿಯ ಹಾದಿಯಲ್ಲಿ ನಡೆಯುತ್ತಿದೆ. ಭಾರತದ ಆರ್ಥಿಕತೆಯ ಬಗ್ಗೆ ವಿಶ್ವದ ನಾನಾ ದೇಶಗಳು ನೋಡಿ ಅಚ್ಚರಿ ಮೂಡಿಸಿವೆ. ಈ ಬಗ್ಗೆ ಈಗಾಗಲೇ ವಿಶ್ವದ ಹೆಸರಾಂತ ಕಂಪನಿಗಳು ಈಗಾಗಲೇ ಭವಿಷ್ಯ ನುಡಿದಿವೆ. ಈ ಸಾಲಿಗೆ ಇನ್ನೊಂದು ಸಂಸ್ಥೆ ಸೇರಿಕೊಳ್ಳಲಿದೆ.

2027ರ ವೇಳೆಗೆ ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಜೆಫರೀಸ್ ಭವಿಷ್ಯ ನುಡಿದಿತ್ತು. ಇದೀಗ ವಿಶ್ವ ಆರ್ಥಿಕ ವೇದಿಕೆಯ ಅಧ್ಯಕ್ಷ ಬೋರ್ಗೆ ಬ್ರೆಂಡೆ ಭಾರತವು 10 ಟ್ರಿಲಿಯನ್ ಆರ್ಥಿಕತೆಯ ಹಾದಿಯಲ್ಲಿದೆ ಎಂದು ವಿಶ್ವ ಆರ್ಥಿಕ ವೇದಿಕೆಯ ಅಧ್ಯಕ್ಷರು ಈ ಬಗ್ಗೆ ಭವಿಷ್ಯ ನುಡಿದಿದ್ದಾರೆ. ಭಾರತವು 10 ಬಿಲಿಯನ್ ಡಾಲರ್ ಆರ್ಥಿಕತೆಯ ಹಾದಿಯಲ್ಲಿದೆ. ಶೀಘ್ರದಲ್ಲೇ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಅವರು ಹೇಳಿದರು. ವಿಶ್ವದ ಎಲ್ಲಾ ಪ್ರಮುಖ ಆರ್ಥಿಕತೆಗಳಲ್ಲಿ ಭಾರತದ ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿದೆ. ದಾವೋಸ್‌ನಲ್ಲಿ ನಡೆದ ಈ ವಿಶ್ವ ಆರ್ಥಿಕ ವೇದಿಕೆ ಸಭೆಯಲ್ಲಿ ನಾವು ಭಾರತದಲ್ಲಿ ಹೂಡಿಕೆ ಮಾಡಲು ಹೆಚ್ಚಿನ ಆಸಕ್ತಿಯನ್ನು ನೋಡಿದ್ದೇವೆ. ಇದು ಭವಿಷ್ಯದಲ್ಲಿಯೂ ಮುಂದುವರಿಯುತ್ತದೆ ಎಂದು ನಾನು ಭಾವಿಸುತ್ತೇನೆ ಎಂದು ಬೋರ್ಗೆ ಬ್ರೆಂಡೆ ತಿಳಿಸಿದ್ದಾರೆ.

ವಿಶ್ವ ಆರ್ಥಿಕ ವೇದಿಕೆಯ ಅಧ್ಯಕ್ಷರು ಮಾತನಾಡಿ, ನೀವು ಭಾರತಕ್ಕೆ ಬಂದಾಗಲೆಲ್ಲಾ ನೀವು ಭರವಸೆಯ ತುಂಬಿರುವಿರಿ. ಇದು ಪ್ರಪಂಚದ ಬೇರೆ ದೇಶದಲ್ಲಿ ನೋಡಲು ಸಾಧ್ಯವಿಲ್ಲ ಎಂದಿದ್ದಾರೆ.

ಭಾರತವು ಆರ್ಥಿಕವಾಗಿ ಶೇ.7ರ ದರದಲ್ಲಿ ಬೆಳೆಯುತ್ತಿದೆ ಮತ್ತು ವಿಶ್ವದ ಅತಿದೊಡ್ಡ ಆರ್ಥಿಕತೆಯಾಗಿರುವ ಅಮೆರಿಕ ಕೂಡ ಉತ್ತಮ ಸಾಧನೆ ಮಾಡುತ್ತಿದೆ. ಮುಂದಿನ ಎರಡು ಮೂರು ವರ್ಷಗಳಲ್ಲಿ ಮೂರನೇ ಅತಿದೊಡ್ಡ ಆರ್ಥಿಕತೆಯಾಗುವ ಸಾಧ್ಯತೆ ಇದೆ. ಭಾರತದ ಗುರಿಯ ಕುರಿತು ಬೋರ್ಗೆ ಬ್ರೆಂಡೆ ಮಾತನಾಡಿ, ಮುಂಬರುವ ವರ್ಷಗಳಲ್ಲಿ ಭಾರತವು 10 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಹಾದಿಯಲ್ಲಿದೆ ಎಂದು ಹೇಳಿದರು.

ಭಾರತವು ಪ್ರಮುಖ ಸುಧಾರಣೆಗಳ ಮೂಲಕ ಸಾಗಿದೆ ಎಂದು ಬೋರ್ಗೆ ಬ್ರೆಂಡೆ ಹೇಳಿದರು. ದೊಡ್ಡ ಆರ್ಥಿಕತೆಗಳಾದ ಅಮೆರಿಕ ಮತ್ತು ಚೀನಾಕ್ಕೆ ಹೋಲಿಸಿದರೆ ಇದು ಉತ್ತಮ ಸ್ಥಾನದಲ್ಲಿದೆ. ಭಾರತದಲ್ಲಿ ವಿದೇಶಿ ಹೂಡಿಕೆಯಲ್ಲಿ ನಿರಂತರ ಹೆಚ್ಚಳವಿದೆ. ಉತ್ಪಾದನಾ ಚಟುವಟಿಕೆಯು ಈ ಹಿಂದೆ ಇತರ ದೇಶಗಳಲ್ಲಿ ಕಂಡುಬಂದಿದೆ ಎಂದಿದ್ದಾರೆ.

2023–24ನೇ ಆರ್ಥಿಕ ವರ್ಷದಲ್ಲಿ ರೂ.2.01 ಲಕ್ಷ ಕೋಟಿ ಜಿಎಸ್‌ಟಿ ವಂಚನೆ

2023–24ರಲ್ಲಿ ಆನ್ಲೈನ್ ಗೇಮಿಂಗ್ ವಲಯದಲ್ಲಿ ರೂ.81,875 ಕೋಟಿ ಮೊತ್ತದ 78 ವಂಚನೆ ಪ್ರಕರಣಗಳು ಬೆಳಕಿಗೆ ಬಂದಿವೆ. ಬಿಎಫ್‌ಎಸ್‌ಐ ವಲಯದಲ್ಲಿ 171 ಪ್ರಕರಣ ದಾಖಲಿಸಿ, ರೂ.18,961 ಕೋಟಿ ವಂಚನೆಯನ್ನು ಪತ್ತೆ ಹಚ್ಚಲಾಗಿದೆ. ಕೆಲಸ ಗುತ್ತಿಗೆ ಮತ್ತು ಸೇವಾ ವಲಯದಲ್ಲಿ ರೂ.40 ಕೋಟಿ ಹಾಗೂ ಔಷಧ ತಯಾರಿಕೆ ವಲಯದಲ್ಲಿ ರೂ.2,846 ಕೋಟಿ ವಂಚನೆಯನ್ನು ಬಯಲಿಗೆ ಎಳೆಯಲಾಗಿದೆ ಎಂದು ವಿವರಿಸಿದೆ.

2023–24ನೇ ಆರ್ಥಿಕ ವರ್ಷದಲ್ಲಿ ಜಿಎಸ್‌ಟಿ ಗುಪ್ತಚರ ಮಹಾ ನಿರ್ದೇಶನಾಲಯವು ಒಟ್ಟು 6,084 ಪ್ರಕರಣಗಳನ್ನು ಭೇದಿಸಿ, ರೂ.2.01 ಲಕ್ಷ ಕೋಟಿ ಮೊತ್ತದ ಜಿಎಸ್‌ಟಿ ವಂಚನೆಯನ್ನು ಪತ್ತೆ ಹಚ್ಚಿದೆ. ಈ ಪೈಕಿ ರೂ.26,605 ಕೋಟಿಯನ್ನು ವಂಚನೆ ಎಸಗಿದವರು ಮರುಪಾವತಿಸಿದ್ದಾರೆ. ಆನ್ಲೈನ್ ಗೇಮಿಂಗ್, ಬ್ಯಾಂಕಿಂಗ್, ಹಣಕಾಸು ಸೇವೆ ಮತ್ತು ವಿಮೆ (ಬಿಎಫ್‌ಎಸ್‌ಐ), ಕಬ್ಬಿಣ, ತಾಮ್ರ ಹಾಗೂ ಮಿಶ್ರಲೋಹದ ಸರಕು ವಲಯದಲ್ಲಿ ಅತಿಹೆಚ್ಚು ವಂಚನೆ ನಡೆದಿದೆ ಎಂದು ಡಿಜಿಜಿಐ ವಾರ್ಷಿಕ ವರದಿ ತಿಳಿಸಿದೆ.

2022–23ರಲ್ಲಿ ಒಟ್ಟು 4,872 ಪ್ರಕರಣಗಳಲ್ಲಿ ರೂ.1.01 ಲಕ್ಷ ಕೋಟಿ ವಂಚನೆಯನ್ನು ಬಯಲಿಗೆ ಎಳೆದಿತ್ತು. ಈ ಪೈಕಿ ರೂ.20,713 ಕೋಟಿಯನ್ನು ವಂಚನೆ ಎಸಗಿದವರು ಮರುಪಾವತಿದ್ದಾರೆ ಎಂದು ಹೇಳಿದೆ.

2023–24ರಲ್ಲಿ ಆನ್ಲೈನ್ ಗೇಮಿಂಗ್ ವಲಯದಲ್ಲಿ ರೂ.81,875 ಕೋಟಿ ಮೊತ್ತದ 78 ವಂಚನೆ ಪ್ರಕರಣಗಳು ಬೆಳಕಿಗೆ ಬಂದಿವೆ. ಬಿಎಫ್‌ಎಸ್‌ಐ ವಲಯದಲ್ಲಿ 171 ಪ್ರಕರಣ ದಾಖಲಿಸಿ, ರೂ.18,961 ಕೋಟಿ ವಂಚನೆಯನ್ನು ಪತ್ತೆ ಹಚ್ಚಲಾಗಿದೆ. ಕೆಲಸ ಗುತ್ತಿಗೆ ಮತ್ತು ಸೇವಾ ವಲಯದಲ್ಲಿ ರೂ.40 ಕೋಟಿ ಹಾಗೂ ಔಷಧ ತಯಾರಿಕೆ ವಲಯದಲ್ಲಿ ರೂ.2,846 ಕೋಟಿ ವಂಚನೆಯನ್ನು ಬಯಲಿಗೆ ಎಳೆಯಲಾಗಿದೆ ಎಂದು ವಿವರಿಸಿದೆ.

ಕಬ್ಬಿಣ, ತಾಮ್ರ ಹಾಗೂ ಮಿಶ್ರಲೋಹ ವಲಯದಲ್ಲಿ ರೂ. 16,806 ಕೋಟಿ ವಂಚನೆ ನಡೆದಿದೆ. ಪಾನ್ ಮಸಾಲಾ, ತಂಬಾಕು, ಸಿಗರೇಟ್, ಬೀಡಿ ತಯಾರಿಕೆ ವಲಯದಲ್ಲಿ ರೂ.5.794 ಕೋಟಿ ಮೊತ್ತದ ವಂಚನೆಯನ್ನು ಪತ್ತೆ ಹಚ್ಚಲಾಗಿದೆ ಎಂದು ತಿಳಿಸಿದೆ. 21ರಲ್ಲಿ ರೂ.31,908 ಕೋಟಿ ಹಾಗೂ 2021–22ರಲ್ಲಿ ರೂ.50,325 ಕೋಟಿ ವಂಚನೆಯನ್ನು ಪತ್ತೆ ಹಚ್ಚಲಾಗಿದೆ.

ಬೆಂಗಳೂರಿನಲ್ಲಿ ಉದ್ಯಮಿಗೆ ರೂ. 1.5 ಕೋಟಿ ವಂಚಿಸಿದ 5 ಜಿಎಸ್‌ಟಿ ಅಧಿಕಾರಿಗಳ ಬಂಧನ

ಬೆಂಗಳೂರು: ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಕೋಟ್ಯಾಂತರ ರೂಪಾಯಿ ವ್ಯವಹಾರವನ್ನು ಹೊಂದಿದ್ದ ಉದ್ಯಮಿಯೊಬ್ಬರಿಂದ ಬರೋಬ್ಬರಿ ರೂ. 1.5 ಕೋಟಿ ಲಂಚದ ಹಣ ಪಡೆದು ವಂಚಿಸಿದ್ದ ಐವರು ಗೂಡ್ಸ್ ಅಂಡ್ ಸರ್ವಿಸ್ ಟ್ಯಾಕ್ಸ್ (ಜಿಎಸ್‌ಟಿ) ಅಧಿಕಾರಿಗಳನ್ನು ಬೆಂಗಳೂರು ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಉದ್ಯಮಿಯೊಬ್ಬರಿಗೆ ಜಿಎಸ್‌ಟಿ ಅಧಿಕಾರಿಗಳು ರೂ. 1.5 ಕೋಟಿ ಬೇಡಿಕೆ ಇಟ್ಟಿದ್ದರು. ಈ ಕುರಿತಂತೆ ಉದ್ಯಮಿ ಸ್ಥಳೀಯ ಬೈಯಪ್ಪನಹಳ್ಳಿ ಪೊಲೀಸರಿಗೆ ದೂರು ನೀಡಿದ್ದಾರೆ. ಕಳೆದ ತಿಂಗಳ 31ನೇ ತಾರೀಖು ದಾಖಲಾಗಿದ್ದ ಪ್ರಕರಣದ ದೂರನ್ನು ಆಧರಿಸಿ ಬೈಯಪ್ಪನಹಳ್ಳಿ ಪೊಲೀಸರು ಐವರು ಜಿಎಸ್‌ಟಿ ಅಧಿಕಾರಿಗಳನ್ನು ಬಂಧಿಸಿದ್ದಾರೆ. ಇಲ್ಲಿ ಜಿಎಸ್‌ಟಿ ಅಧಿಕಾರಿಗಳು ತಾವು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಎಂದು ಹೇಳಿಕೊಂಡು ಉದ್ಯಮಿ ಕೇಶವ್ ಎಂಬಾತನಿಗೆ ಬೆದರಿಕೆ ಹಾಕಿದ್ದರು. ಜೊತೆಗೆ, ನೀವು ಸರ್ಕಾರಕ್ಕೆ ತೆರಿಗೆ ವಂಚನೆ ಮಾಡುತ್ತಿರುವುದು ಬೆಳಕಿಗೆ ಬಂದಿದ್ದು, ಇಡಿ ದಾಳಿ ಮಾಡಬಾರದೆಂದರೆ ರೂ. 1.5 ಕೋಟಿ ಹಣ ನೀಡಬೇಕು ಎಂದು ಬೇಡಿಕೆ ಇಟ್ಟಿದ್ದರು.

ಆದರೆ, ಉದ್ಯಮಿ ಕೇಶವ್ ಹಣ ಕೊಡದಿದ್ದಾಗ ಆತನ ಕಚೇರಿಗೆ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ಮಾಡುವುದಾಗಿ ಉದ್ಯಮಿಯನ್ನ ಕೂಡಿ ಹಾಕಿದ್ದರು. ನೀವು ಕಂಪನಿಯನ್ನು ನಕಲಿಯಾಗಿ ನಡೆಸುತ್ತಿದ್ದೀರಿ. ನಾವು ಇ.ಡಿ ಮತ್ತು ಜಿಎಸ್‌ಟಿ ಅಧಿಕಾರಿಗಳು. ಅಕ್ರಮವಾಗಿ ಕಚೇರಿ ನಡೆದಿರೋದು ಗೊತ್ತಾಗಿದೆ. ಹೀಗಾಗಿ ನಿಮ್ಮನ್ನ

ಜಿಎಸ್‌ಟಿ ಬೆಂಗಳೂರು ವಲಯದ ಅಧೀಕ್ಷಕ ಅಭಿಷೇಕ್, ಇಂಟಲಿಜೆನ್ಸ್ ಆಫೀಸರ್ ಸೋನಾಲಿ ಸಹಾಯ್, ಸೀನಿಯರ್ ಇಂಟಲಿಜೆನ್ಸ್ ಆಫೀಸರ್‌ಗಳಾದ ಮನೋಜ್ ಸೈನಿ ಮತ್ತು ನಾಗೇಶ್ ಬಾಬು ಅವರನ್ನು ವಿಚಾರಣೆ ನಡೆಸಲಾಗಿದೆ. ಆರೋಪಿಗಳು ಸುಲಿಗೆ ಮಾಡಿದ ಹಣದ ಜಪ್ತಿಗೆ ಅವರ ನಿವಾಸಗಳು, ಕಚೇರಿಗಳೂ ಸೇರಿದಂತೆ ಹಲವೆಡೆ ಪರಿಶೀಲನೆ ನಡೆಸಬೇಕಿದೆ. ಜತೆಗೆ, ಆರೋಪಿಗಳ ವೈಯಕ್ತಿಕ ಬ್ಯಾಂಕ್ ಖಾತೆ ಹಾಗೂ ಸಂಬಂಧಿಕರ ಖಾತೆಗಳನ್ನು ಪರಿಶೀಲನೆ ನಡೆಸುತ್ತಿದ್ದು, ಕೃತ್ಯದ ಹಣ ಜಪ್ತಿ ಕಾರ್ಯಕ್ಕೆ ತನಿಖೆ ಮುಂದುವರಿದಿದೆ ಎಂದು ತನಿಖಾ ಮೂಲಗಳು ತಿಳಿಸಿವೆ.

ಅರೆಸ್ಟ್ ಮಾಡ್ತೀವಿ ಅಂತಾ ಅವರನ್ನು ಕಾರಿನಲ್ಲಿ ಕರೆದೊಯ್ದಿದ್ದರು. ನಂತರ, ಕಚೇರಿಯ ಒಳಗಿಟ್ಟುಕೊಂಡು ಬರೋಬ್ಬರಿ ಒಂದೂವರೆ ಕೋಟಿ ರೂಗಳನ್ನು ನೀಡಿದರೆ ನಿನ್ನನ್ನು ಬಿಟ್ಟು ಕಳಿಸುವುದಾಗಿ ಬೆದರಿಕೆ ಹಾಕಿದ್ದಾರೆ.

ಉದ್ಯಮಿ ಕೇಶವ್ ಮನೆ ಮೇಲೆ ದಾಳಿ ನಡೆಸಿದ್ದ ಜಿಎಸ್‌ಟಿ ಮತ್ತು ಇಡಿ ಅಧಿಕಾರಿಗಳು. ಅತಿಕ್ರಮ ಪ್ರವೇಶ ಮಾಡಿ ಮೊಬೈಲ್ ಫೋನ್ ಹಾಗೂ ಕೆಲವು ವಸ್ತುಗಳನ್ನ ತೆಗೆದುಕೊಂಡು ಹೋಗಿದ್ದರು. ನಂತರ ಕೇಶವ್, ಮುಖೇಶ್ ಜೈನ್, ಪವನ್ ತಕ್, ರಾಕೇಶ್ ಮಾಣಕ್ ಚಾಂದನಿ ಅವರನ್ನ ಬಲವಂತವಾಗಿ ಕರೆದೊಯ್ದಿದ್ದಾರೆ. ಬಲವಂತವಾಗಿ ಇಂದಿರಾನಗರಕ್ಕೆ ಕರೆದೊಯ್ದು ಪೋನ್ ಫ್ಲೈಟ್ ಮೋಡ್ ಹಾಕಿಸಿದ್ದ ಅಧಿಕಾರಿಗಳು. ನಂತರ ರೋಷನ್ ಜೈನ್ ಎಂಬಾತನಿಗೆ ಕರೆ ಮಾಡಿಸಿ ರೂ. 3 ಕೋಟಿ ಹಣ ತರಲು ಸೂಚನೆ. ವಾಟ್ಸಪ್ ಕರೆ ಮಾಡಿ ಹಣ ತರಲು ಸೂಚನೆ ನೀಡಿದ್ದರು.

ನಂತರ ಬೇರೆ ಬೇರೆ ಕಡೆ ಕರೆದೊಯ್ದಿದ್ದ ಅಧಿಕಾರಿಗಳು, ರೋಷನ್ ಎಂಬಾತನಿಗೆ ಕರೆ ಮಾಡಿ ಹಣ ತರಲು ಒತ್ತಾಯ ಮಾಡಿದ್ದಾರೆ. ಈ ವೇಳೆ ನಾಲ್ವರ ಮೇಲೆ ಹಲ್ಲೆ ನಡೆಸಿದ್ದಾರೆ. ನಂತರ 1.5 ಕೋಟಿ ರೂ. ಹಣ ಹೊಂದಿಸಿ ನೀಡಿದ ನಂತರ ರೋಷನ್, ಮುಖೇಶ್ ಜೈನ್ ಅವರುಗಳನ್ನು ವಾಪಸ್ ಕಳುಹಿಸಿ ಹಣ ಸಂಗ್ರಹ ಮಾಡಿಕೊಂಡಿದ್ದಾರೆ. ಆದರೆ, ನಾಲ್ವರಿಂದ ಸಹಿ ಪಡೆದಿದ್ದ ಮಹಜರು ಪ್ರತಿಯನ್ನು ಮರೆತು ಅಲ್ಲಿಯೇ ಬಿಟ್ಟು ಹೋದ ಅಧಿಕಾರಿಗಳು ಇದರಿಂದ ಅನುಮಾನಗೊಂಡ ರೋಷನ್, ಮುಖೇಶ್ ಜೈನ್ ಪೊಲೀಸ್ ಠಾಣೆಗೆ ದೂರು ನೀಡಿದರು.

ಈ ಸಂಬಂಧ ದೂರು ದಾಖಲಾಗುತ್ತಿದ್ದಂತೆಯೇ ಈ ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ಸಿಸಿಬಿ ತನಿಖೆಗೆ ನೀಡಲಾಗಿದೆ. ತನಿಖೆಯನ್ನು ಮುಂದುವರಿಸಿದ ಸಿಸಿಬಿ ಪೊಲೀಸರು, ಈ ಪ್ರಕರಣದ ತನಿಖೆಯಲ್ಲಿ ಆಗಿರುವ ಲೋಪ ಹಾಗೂ ಮೋಸವನ್ನು ಪತ್ತೆ ಮಾಡಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಘಟಕದ ಅಧಿಕಾರಿಗಳು ಯಾವುದೇ ಅನುಮೋದನೆ ಇಲ್ಲದೆ, ದಾಳಿ ಮಾಡಿರುವುದು ಧೃಡಪಟ್ಟಿದೆ. ಅಲ್ಲದೇ ಜಿಎಸ್‌ಟಿ ಅಧಿಕಾರಿಗಳು ಹಲವು ವಸ್ತುಗಳನ್ನು ಕಾನೂನು ಬಾಹಿರವಾಗಿ ಜಪ್ತಿ ಮಾಡಿರುವುದು ಬೆಳಕಿಗೆ ಬಂದಿದೆ. ಪೊಲೀಸರ ತನಿಖೆ ವೇಳೆ ಮೇಲ್ನೋಟಕ್ಕೆ ಅನುಮೋದನೆ ಇಲ್ಲದೆ ದಾಳಿ ನಡೆದಿದ್ದು ಬೆಳಕಿಗೆ ಬಂದಿದೆ. ಡೈರೆಕ್ಟರ್ ಜನರಲ್ ಆಫ್ ಜಿಎಸ್‌ಟಿ

ಇಂಟಲಿಜೆನ್ಸ್, ಬೆಂಗಳೂರು ವಲಯ ವಿಭಾಗಕ್ಕೆ ಸೇರಿದ ಅಧಿಕಾರಿಗಳು ಇವರಾಗಿದ್ದಾರೆ. ದಾಳಿ ವೇಳೆ ಹಲವಾರು ವಸ್ತುಗಳನ್ನ ಜಪ್ತಿ ಮಾಡಿರುವುದು ಪತ್ತೆಯಾಗಿದೆ. ಪ್ರಕರಣದಲ್ಲಿ ಬಂಧಿತರಾಗಿರುವ ನಾಲ್ವರು ಸರಕು ಸೇವಾ ತೆರಿಗೆ (ಜಿಎಸ್‌ಟಿ) ಅಧಿಕಾರಿಗಳ ವಿಚಾರಣೆ ತೀವ್ರಗೊಳಿಸಿರುವ ಸಿಸಿಬಿ ಪೊಲೀಸರು, ಸುಲಿಗೆ ಮಾಡಿದ ಹಣದ ಜಪ್ತಿಗೆ ಶೋಧ ಕಾರ್ಯ ಮುಂದುವರಿಸಿದ್ದಾರೆ.

ಜಿಎಸ್‌ಟಿ ಬೆಂಗಳೂರು ವಲಯದ ಅಧೀಕ್ಷಕ ಅಭಿಷೇಕ್, ಇಂಟಲಿಜೆನ್ಸ್ ಆಫೀಸರ್ ಸೋನಾಲಿ ಸಹಾಯ್, ಸೀನಿಯರ್ ಇಂಟಲಿಜೆನ್ಸ್ ಆಫೀಸರ್‌ಗಳಾದ ಮನೋಜ್ ಸೈನಿ ಮತ್ತು ನಾಗೇಶ್ ಬಾಬು ಅವರನ್ನು ವಿಚಾರಣೆ ನಡೆಸಲಾಗಿದೆ. ಆರೋಪಿಗಳು ಸುಲಿಗೆ ಮಾಡಿದ ಹಣದ ಜಪ್ತಿಗೆ ಅವರ ನಿವಾಸಗಳು, ಕಚೇರಿಗಳೂ ಸೇರಿದಂತೆ ಹಲವೆಡೆ ಪರಿಶೀಲನೆ ನಡೆಸಬೇಕಿದೆ. ಜತೆಗೆ, ಆರೋಪಿಗಳ ವೈಯಕ್ತಿಕ ಬ್ಯಾಂಕ್ ಖಾತೆ ಹಾಗೂ ಸಂಬಂಧಿಕರ ಖಾತೆಗಳನ್ನು ಪರಿಶೀಲನೆ ನಡೆಸುತ್ತಿದ್ದು, ಕೃತ್ಯದ ಹಣ ಜಪ್ತಿ ಕಾರ್ಯಕ್ಕೆ ತನಿಖೆ ಮುಂದುವರಿದಿದೆ ಎಂದು ತನಿಖಾ ಮೂಲಗಳು ತಿಳಿಸಿವೆ.

ಆರೋಪಿಗಳ ಬಳಿ 50 ಚೆಕ್, 32 ಮೊಬೈಲ್, ಎರಡು ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ. ನಾಲ್ವರು ಇಷ್ಟೊಂದು ಪ್ರಮಾಣದ ಮೊಬೈಲ್ ಏಕೆ ಬಳಸುತ್ತಿದ್ದರು, ಚೆಕ್ ಪುಸ್ತಕಗಳು ಯಾರಿಗೆ ಸಂಬಂಧಪಟ್ಟಿದ್ದವು ಎಂಬುದರ ಕುರಿತೂ ತನಿಖೆ ನಡೆಯುತ್ತಿದೆ.

ಸದಸ್ಯರಿಗೆ ಹಾಗೂ ಗ್ರಾಹಕರಿಗೆ ತೃಪ್ತಿಕರ ಸೇವೆ ನೀಡುವ ಮೂಲಕ

ಧಾರವಾಡದ ರಡ್ಡಿ ಸಹಕಾರ ಬ್ಯಾಂಕ್ ನಿ.

110 ವರ್ಷಗಳನ್ನು ದಾಟಿ ಪ್ರಗತಿ ಪಥದಲ್ಲಿ ಸಾಗಿದೆ

ಕೆ.ಎಚ್. ಪಾಟೀಲ
ಮಾಜಿ ಅಧ್ಯಕ್ಷರು

ಎಚ್.ಕೆ. ಪಾಟೀಲ
ನಿರ್ದೇಶಕರು

ಕೆ.ಎಲ್. ಪಾಟೀಲ
ಅಧ್ಯಕ್ಷರು

ಸ್ವಾತಂತ್ರ್ಯ ಪೂರ್ವದಲ್ಲಿ ರಡ್ಡಿ ಸಮುದಾಯದ ಜನರು ಹೆಚ್ಚಾಗಿ ವ್ಯವಸಾಯವನ್ನು ಅವಲಂಬಿಸಿದ್ದರು. ಆ ಅವಧಿಯಲ್ಲಿ ಪೀಡಿಸಿದ, ಕ್ಷಾಮಗಳಿಂದ ಜನರು ಆರ್ಥಿಕ ತೊಂದರೆಗಳಿಗೆ ಸಿಲುಕಿ, ಧನಿಕರಿಂದ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ಪಡೆಯಬೇಕಾಗಿತ್ತು. ಆಗ ಜಾರಿಯಲ್ಲಿದ್ದ ಕಾನೂನುಗಳು ಮತ್ತು ಆಡಳಿತವು ದುರಾಸೆಯ ಲೇವಾದೇವಿ ಮಾಡುವ ಧನಕರಿಗೆ ಅನುಕೂಲವಾಗಿದ್ದಿತು. ಇದರಿಂದ ರಡ್ಡಿ ಜನಾಂಗದ ರೈತರು ದಾರುಣವಾದ ಬಡತನಕ್ಕೆ ಸಿಲುಕಿದರು. ಅವರಿಗೆ ಧನಸಹಾಯ ಪಡೆಯುವ ಯಾವ ಮಾರ್ಗವೂ ಇಲ್ಲದ್ದರಿಂದ ಈ ಪರಿಸ್ಥಿತಿಯು ಮುಂದುವರೆದಿದ್ದರಿಂದ ರಡ್ಡಿ ಜನಾಂಗದ ನಾಯಕರು ತಮ್ಮ ರೈತ ಸಹೋದರರ ಆರ್ಥಿಕ ದುಃಸ್ಥಿತಿಗೆ ಬಹಳವಾಗಿ ಮರುಗಿದರು. ಇಂತಹ ಅನೇಕ ಕಾರಣಗಳಿಂದಲೇ ನಿಸ್ವಾರ್ಥ ಸೇವಾ ಆಕಾಂಕ್ಷಿತ ಹಲವು ಹಿರಿಯರು ಒಂದು ಸಹಕಾರಿ ಸಂಸ್ಥೆ ಸ್ಥಾಪಿಸಲು ಮುಂದಾದರು.

ಅದರ ಫಲವಾಗಿ ಸಮಾನ ಮನಸ್ಕರಾಗಿದ್ದ ಫಕ್ಕೀರಪ್ಪ ನಲವಡಿ, ಲಿಂಗನಗೌಡ ಬಿ. ಪಾಟೀಲ, ಸಿದ್ದನಗೌಡ ಬಿ. ಪಾಟೀಲ, ದ್ಯಾವನಗೌಡ ಆರ್. ಪಾಟೀಲ್, ಹನಮಂತಗೌಡ ವಿ ಹಿರೇಗೌಡರ, ಬಸನಗೌಡ ಎಚ್. ಪಾಟೀಲ, ಹನಮಂತಗೌಡ ಖಾನಾಮರ, ಗೋವಿಂದಪ್ಪ ಕುರಟ್ಟಿ, ಭೀಮನಗೌಡ ಕೆ. ಪಾಟೀಲ ಹಾಗೂ ಶಿವನಗೌಡ ಗಿರಿಯಪ್ಪಗೌಡ ಪಾಟೀಲ ಅವರುಗಳು ಶಿಕ್ಷಣ, ಸಂಸ್ಕೃತಿ ಹಾಗೂ ಶಿಕ್ಷಣಕ್ಕೆ ಪ್ರಸಿದ್ಧವಾಗಿರುವ ಧಾರವಾಡದಲ್ಲಿ ರಡ್ಡಿ ಜನಾಂಗದ ಏಳಿಗೆ ಉದ್ದೇಶವನ್ನೇ, ಇಟ್ಟುಕೊಂಡು ಸ್ಥಾಪಿತವಾಗಿ ರಡ್ಡಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಯಾಗಿ ಸ್ಥಾಪನೆಯಾಯಿತು. ಅಂದಿನಿಂದ ಇಲ್ಲಿಯವರಿಗೆ ಪ್ರಗತಿಯನ್ನು ಸಾಗುತ್ತಾ ಮುನ್ನಡೆದಿರುವುದು ಗಮನಾರ್ಹವಾದ ವಿಷಯವಾಗಿದೆ.

ದಿನಾಂಕ : 04/02/1914ರಲ್ಲಿ ರಡ್ಡಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಯು ಕೇವಲ 50 ಸದಸ್ಯರನ್ನು ಒಳಗೊಂಡು, ರೂ. 2400ಗಳ ಬಂಡವಾಳದೊಂದಿಗೆ ಫಕೀರಪ್ಪ ಟಿ ನಲವಡಿ ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಒಂದು ವರ್ಷದಲ್ಲಿ 92 ಸದಸ್ಯರನ್ನೊಳಗೊಂಡು ರೂ. 4030ಗಳ ಶೇರು ಬಂಡವಾಳ ಹೊಂದಿ ರೂ.551ಗಳ ಲಾಭವನ್ನು ಗಳಿಸಿತ್ತು.

1921 ರಲ್ಲಿ ಸದಸ್ಯರ ಸಂಖ್ಯೆಯು 460 ಮತ್ತು ಶೇರು ಬಂಡವಾಳವು ರೂ. 20,840ಗಳಾಗಿ ದುಡಿಯುವ ಬಂಡವಾಳವು ರೂ 1,07,938ಗಳಾಗಿ ಬೆಳೆಯಿತು. ಸೊಸೈಟಿಯ ಬೆಳವಣಿಗೆಯಿಂದಾಗಿ ಹಾಗೂ ಸಮಾಜದ ನಾಯಕರ ಪ್ರಯತ್ನದಿಂದಾಗಿ ದಿನಾಂಕ: 05/08/1921 ರಲ್ಲಿ "ದಿ. ರಡ್ಡಿ ಕೋ-ಆಪರೇಟಿವ್ ಕ್ರೆಡಿಟ್ ಬ್ಯಾಂಕ್ ಲಿ.," ಎಂಬ ಹೆಸರಿನಿಂದ 604 ಸದಸ್ಯರ ರೂ. 20,840ಗಳ ಶೇರು ಬಂಡವಾಳದಿಂದ ನೋಂದಾಯಿಸಲ್ಪಟ್ಟಿತು.

ಸಂಸ್ಥೆಯು ಕ್ರಮೇಣ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಆಗಿ ರೂಪಗೊಂಡು. ಪ್ರಸ್ತುತ ಕರ್ನಾಟಕ ರಾಜ್ಯದ 10 ಜಿಲ್ಲೆಗಳಲ್ಲಿ ತನ್ನ ಬ್ಯಾಂಕಿಂಗ್ ವ್ಯವಹಾರವನ್ನು ನಿರ್ವಹಿಸುತ್ತಿದೆ. 2014ರ ವರ್ಷಕ್ಕೆ ಬ್ಯಾಂಕ್ ನೂರು ವರ್ಷಗಳನ್ನು ಪೂರೈಸಿ ದಿನಾಂಕ : 13-10-2024 ತನ್ನ ಶತಮಾನೋತ್ಸವವನ್ನು ಸಂಭ್ರಮದಿಂದ ಆಚರಸಿಕೊಂಡಿರುವುದು ಶ್ಲಾಘನೀಯ ಸಂಗತಿ.

ಬ್ಯಾಂಕ್ ಒಟ್ಟು 25 ಶಾಖೆ ಹೊಂದಿದೆ. ರಾಣೆಬೆನ್ನೂರು, ಯರಗಟ್ಟಿ, ಬಾಗಲಕೋಟ ಮುಂತಾದ ರಾಜ್ಯದ ಹಲವು ಕಡೆ ತನ್ನ ಶಾಖೆಗಳನ್ನು ಪ್ರಾರಂಭಿಸಿತು. ಒಂದು ಮಹಿಳಾ ಮುಂಗಟ್ಟೆ ಮೂಲಕ ದಿನಾಂಕ: 31/03/2024ಕ್ಕೆ ಇದ್ದಂತೆ ಒಟ್ಟು ಸದಸ್ಯರ ಸಂಖ್ಯೆ 35977 ಹೊಂದುವ ಮೂಲಕ ಶೇರು ಬಂಡವಾಳ ರೂ. 2045.60 ಲಕ್ಷಗಳು, ಒಟ್ಟು ಠೇವು ರೂ. 63996.90 ಲಕ್ಷಗಳು, ವಿತರಿಸಿದ ಒಟ್ಟು ಸಾಲ ಮುಂಗಡ ರೂ.40090.23 ಲಕ್ಷಗಳು ಹಾಗೂ ದುಡಿಯುವ ಬಂಡವಾಳ ರೂ.73997.27 ಹೊಂದಿದೆ.

ರಾಜ್ಯದ 10 ಜಿಲ್ಲೆಗಳಲ್ಲಿ 25 ಶಾಖೆಗಳು ಹಾಗೂ ಒಂದು ವಿಸ್ತೀರ್ಣ ಮುಂಗಟ್ಟೆ ಇವುಗಳ ಮುಖಾಂತರ ಸದಸ್ಯರಿಗೆ, ಸಾರ್ವಜನಿಕರಿಗೆ ಸಮರ್ಪಕ ಸೇವೆಯನ್ನು ನೀಡುತ್ತಾ ಬಂದಿದೆ. ಬ್ಯಾಂಕಿನ 15 ಶಾಖೆಗಳು ಸುಸಜ್ಜಿತ ಸ್ವಂತ ಕಟ್ಟಡ ಹೊಂದಿವೆ

ಹಾಗೂ ಧಾರವಾಡದ ಪ್ರಧಾನ ಕಚೇರಿಗೆ ಸುಸಜ್ಜಿತ ನೂತನ ವಿಶಾಲ ಕಟ್ಟಡವನ್ನು ನಿರ್ಮಿಸಲಾಗಿದೆ.

ಬ್ಯಾಂಕಿನಿಂದ ನೀಡುವ ಸಾಲ ಸೌಲಭ್ಯ : ಠೇವಣಿ ಸಾಲ, ವೈಯಕಿಕ ಸಾಲ, ಅಡಮಾನ ಸಾಲ, ನಗದು ಸಾಲ, ವಾಹನ ಸಾಲ, ಸಾಲಗಾರರು ಹೊಸ ಸರಕುಗಳು, ಲಘು/ಭಾರೀ ವಾಹನಗಳನ್ನು ಅತ್ಯಂತ ಸುಲಭವಾದ ದಾಖಲಾತಿ ವಿಧಾನಗಳಲ್ಲಿ ಖರೀದಿಸಬಹುದಾದ ಅತ್ಯಂತ ಶ್ರೇಷ್ಠ ಮತ್ತು ವೇಗವಾಗಿ ಚಲಿಸುವ ಯೋಜನೆ.

ಈ ಪ್ರಾಂತ್ಯದಲ್ಲಿ ಜಮೀನುಗಳನ್ನು ಅಡಮಾನದ ವ್ಯವಹಾರ ನಡೆಸುವ ಮೊಟ್ಟಮೊದಲ ಸಹಕಾರ ಸಂಸ್ಥೆ ಎಂದು ಕೀರ್ತಿ ಪಡೆದಿದೆ. ಆರ್ಥಿಕವಾಗಿ ಬೆಂಬಲ ನೀಡುತ್ತಾ, ಎಲ್ಲ ಜನಾಂಗದವರಿಗೂ ಸಹಾಯ ಹಸ್ತ ಚಾಚುತ್ತ, ತನ್ನ ಬ್ಯಾಂಕಿಂಗ್ ವ್ಯವಹಾರವನ್ನು ಬೆಳೆಸಿಕೊಳ್ಳುತ್ತ ಬಂದಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪನೆಯಾದ ಬ್ಯಾಂಕ್ ಸ್ವಾತಂತ್ರ್ಯ ದೊರೆಯುವವರೆಗೆ ಹೋರಾಟದಲ್ಲಿ ಬ್ಯಾಂಕಿನ ಆಡಳಿತ ಮಂಡಳಿ, ಸಿಬ್ಬಂದಿ ಹಾಗೂ ಸಮಾಜದ ಧುರೀಣರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸಿಕೊಂಡಿದ್ದರೆಂದು ಹೇಳಲು ಹೆಮ್ಮೆಯ ವಿಷಯವಾಗಿದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಿದ್ದನ್ನು ಗಮನಿಸಿ ಬ್ಯಾಂಕ್ ಎಲ್ಲಾ ಶಾಖೆಗಳನ್ನು ಸಂಪೂರ್ಣವಾಗಿ ಗಣಕೀಕೃತಗೊಳಿಸಲಾಗಿದೆ. ಬ್ಯಾಂಕಿನ ಎಲ್ಲ ಸದಸ್ಯರುಗಳಿಗೆ ಹಾಗೂ ಬ್ಯಾಂಕಿನ ಗ್ರಾಹಕರಿಗೆ ಉತ್ತಮ ಹಾಗೂ ನಿರ್ದಿಷ್ಟ ಸೇವೆ ನೀಡಲು ಬ್ಯಾಂಕ್ ಎಲ್ಲಾ ಶಾಖೆಗಳಿಗೆ ಕೋರ್ ಬ್ಯಾಂಕಿಂಗ್ ತಂತ್ರಜ್ಞಾನ ಅಳವಡಿಸುವ ಮೂಲಕ ಎಲ್ಲಾ ಶಾಖೆಗಳ ಕಾರ್ಯಾಚರಣೆಯನ್ನು ಕೇಂದ್ರೀಕೃತಗೊಳಿಸಲಾಗಿದೆ. ಆಕರ್ಷಕ ಬಡ್ಡಿ ಠೇವಣಿ ಮತ್ತು ಸಾಲಗಳೊಂದಿಗೆ ಅಳವಡಿಸಲಾಗಿದೆ. ಪ್ರಸ್ತುತ ಬ್ಯಾಂಕ್ ಈಗಾಗಲೇ IFSC ಕೋಡ್ ನಂಬರ್ ಹೊಂದಿದೆ. ಇದರಿಂದ ಬ್ಯಾಂಕಿನ ಗ್ರಾಹಕರು ನೇರವಾಗಿ ತಮ್ಮ ಖಾತೆಗಳಿಗೆ RTGS / NEFT ಮುಖಾಂತರ ಹಣ ಪಡೆಯಬಹುದು. ಎ.ಟಿ.ಎಂ ವಿತರಣೆ ಮಾಡಿದ್ದು, ಈ ಮೂಲಕ ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ತಂತ್ರಜ್ಞಾನದಲ್ಲಿಯೂ ಸಹ ಮುಂಚೂಣಿಯಲ್ಲಿದೆ.

ಸಂಸ್ಥೆಯ ಬೆಳವಣಿಗೆಯಲ್ಲಿ ಕೆ.ಎಚ್. ಪಾಟೀಲರ ಅವಿಸ್ಮರಣೆಯ ಕೊಡುಗೆ : ಸಹಕಾರಿ ರಂಗದ ಭೀಷ್ಮ ಎಂದೇ ಖ್ಯಾತರಾಗಿದ್ದ ಕೆ.ಎಚ್.ಪಾಟೀಲರು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ನಂತರ 1965ರಲ್ಲಿ ಬ್ಯಾಂಕ್ ಬೆಳವಣಿಗೆ ಕಂಡಿತು. ಅವರ ಕಾಲದಲ್ಲಿ ಬ್ಯಾಂಕ್ ವಿಸ್ತೃತವಾಗಿ ಬೆಳವಣಿಗೆ ಪಡೆಯಿತು. ನಂತರ ದಿನಗಳಲ್ಲಿ ಹಾಲಿ ಕರ್ನಾಟಕ ಸರಕಾರದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ

ಪ್ರಗತಿ ಪಕ್ಷ ನೋಟ (ರೂ. ಲಕ್ಷಗಳಲ್ಲಿ)				
ವಿವರ	2020–21	2021–22	2022–23	2023–24
ಸದಸ್ಯತ್ವ ಸಂಖ್ಯೆ	64257	38109	38704	35977
ಶೇರು ಬಂಡವಾಳ	1819.97	1862.43	1970.21	2045.60
ಠೇವಣಿಗಳು	57980.74	60106.40	60871.56	63996.90
ದುಡಿಯುವ ಬಂಡವಾಳ	66872.98	69272.19	70472.25	73997.27
ಸಾಲ ವ ಮುಂಗಡ	32161.56	32187.97	37139.68	40090.23
ನಿವ್ವಳ ಲಾಭ	185.45	216.38	298.64	314.58
ಆಡಿಟ್ ವರ್ಗೀಕರಣ	ಎ	ಎ	ಎ	ಎ

ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ.ಪಾಟೀಲರು ನೇತೃತ್ವ ವಹಿಸಿಕೊಂಡರು. ಬ್ಯಾಂಕ್ ಅತ್ಯಂತ ದುಃಸ್ಥಿತಿಗೆ ತಲುಪಿದ ಸಂದರ್ಭದಲ್ಲಿ ಎಚ್.ಕೆ.ಪಾಟೀಲರು ಹಗಲು ರಾತ್ರಿ ಎನ್ನದೇ ಅವಿರತವಾಗಿ ಶ್ರಮಿಸಿ ಹಿರಿಯರನ್ನು ಒಗ್ಗೂಡಿಸಿ ಬ್ಯಾಂಕ್‌ನ್ನು ಉನ್ನತಮಟ್ಟಕ್ಕೆ ತಂದರು. ಎಚ್.ಕೆ.ಪಾಟೀಲರು ಬ್ಯಾಂಕಿನ ನಿರ್ದೇಶಕರಾಗಿ, ವ್ಯವಸ್ಥಾಪಕ ನಿರ್ದೇಶಕರಾಗಿ, ಸ್ವಲ್ಪ ಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಪ್ರಸ್ತುತ ಅವಧಿಯಲ್ಲಿಯೂ ಸಹ ನಿರ್ದೇಶಕರಾಗಿ ಬ್ಯಾಂಕಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಪ್ರಸ್ತುತ ಬ್ಯಾಂಕಿನ ಅಧ್ಯಕ್ಷರಾಗಿರುವ ಖ್ಯಾತ ಹಿರಿಯ ವಕೀಲರಾದ ಕೆ.ಎಲ್.ಪಾಟೀಲ ರವರು ಕಳೆದ 26 ವರ್ಷಗಳಿಂದ ಬ್ಯಾಂಕಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬ್ಯಾಂಕಿನ ಅಧ್ಯಕ್ಷರಾಗಿ ಸಹಕಾರ ಸೇವಾ ಅನುಭವದಿಂದ ಬ್ಯಾಂಕನ್ನು ಲಾಭದೆಡೆಗೆ ಮುನ್ನಡೆಸಿ-ಮಾರ್ಗದರ್ಶನ ನೀಡುತ್ತಿದ್ದಾರೆ. ಸೇವಾ ಬದ್ಧತೆಯ ಜೊತೆಗೆ ಆಡಳಿತ ಮಂಡಳಿ ಸದಸ್ಯರ ಪ್ರೋತ್ಸಾಹದೊಂದಿಗೆ ಬ್ಯಾಂಕನ್ನು ಮುನ್ನಡೆಸುತ್ತಿದ್ದಾರೆ. ಈ ಮೂಲಕ ಬ್ಯಾಂಕಿನ ಸದಸ್ಯರಿಗೆ ಹಾಗೂ ಗ್ರಾಹಕರಿಗೆ ಹಣಕಾಸು ವಹಿವಾಟಿನ ಚಟುವಟಿಕೆಗಳಿಗೆ ಪೋಷಕರಾಗಿದ್ದಾರೆ.

ಆಡಳಿತ ಮಂಡಳಿಯ ಉಪಾಧ್ಯಕ್ಷರಾದ ಕೆ.ಬಿ.ನಾಯಿಕ ಅವರೂ ಸಹ ಅಧ್ಯಕ್ಷರ ಜೊತೆಗೆ ಬ್ಯಾಂಕಿನ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸಿದ್ದಾರೆ. ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರಾದ ಮತ್ತು ಶಾಸಕರಾದ ಎನ್.ಎಚ್. ಕೋನರಡ್ಡಿ ಅವರ ಅವಿರತ ಪರಿಶ್ರಮ ಮತ್ತು ದಕ್ಷ ಆಡಳಿತದಿಂದ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಆಡಳಿತ ಮಂಡಳಿಯ ಸದಸ್ಯರ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ವ್ಹಿ.ಆರ್ ನಾಗಾವಿ ಹಾಗೂ ಸಿಬ್ಬಂದಿ ವರ್ಗದವರು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಅವರ ಪರಿಶ್ರಮದ ಮೂಲಕ ರಾಜ್ಯದ ಮಾದರಿ ಸಹಕಾರ ಬ್ಯಾಂಕ್ ಎಂದು ಗುರುತಿಸಿಕೊಂಡಿರುವುದು ಸ್ವಾಗತಾರ್ಹವಾದ ಸಂಗತಿ.

ಬ್ಯಾಂಕಿಗೆ ಸಂದ ಪ್ರಶಸ್ತಿಗಳು

- ಬೆಳಗಾವಿ ವಿಭಾಗದ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಸನ್. 2015-16ನೇ ಸಾಲಿನಲ್ಲಿ ದುಡಿಯುವ ಬಂಡವಾಳದಲ್ಲಿ ದ್ವಿತೀಯ ಸ್ಥಾನ ಪಡೆದಿರುವುದಕ್ಕೆ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಬೆಂಗಳೂರು ಇದರಿಂದ ಪ್ರಶಸ್ತಿ ಪಡೆದಿದೆ.
- ದಕ್ಷಿಣ ವಲಯ ಅರ್ಬನ್ ಕೋ-ಆಪ್ ಬ್ಯಾಂಕಿಂಗ್ ಸಮಿತ್ (SUMMIT) ಇವರುಗಳಿಂದ ಪ್ರಶಸ್ತಿ ಪಡೆಯಲಾಗಿದೆ.
- ಸನ್ 2015-16 ನೇ ಸಾಲಿಗೆ ಧಾರವಾಡದಲ್ಲಿ ಜರುಗಿದ 63ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಉತ್ತಮ ಸಹಕಾರ ಬ್ಯಾಂಕ್ ಪ್ರಶಸ್ತಿಯನ್ನು ಪಡೆದಿರುತ್ತದೆ.

ಈ ಎಲ್ಲಾ ಪುರಸ್ಕಾರಗಳು ಬ್ಯಾಂಕಿನ ಬೆಳವಣಿಗೆಗೆ ಸಹಕಾರಿಯಾಗಿವೆ. ರಾಜ್ಯಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡಿರುತ್ತದೆ.

ಆಡಳಿತ ಮಂಡಳಿ ಸದಸ್ಯರು

ಶ್ರೀ ಕೆ. ಎಲ್. ಪಾಟೀಲ, ಅಧ್ಯಕ್ಷರು
ಶ್ರೀ ಕೆ. ಬಿ. ನಾಯಿಕ, ಉಪಾಧ್ಯಕ್ಷರು
ಶ್ರೀ ಎಚ್. ಕೆ. ಪಾಟೀಲ, ನಿರ್ದೇಶಕರು
ಶ್ರೀ ಎನ್. ಎಚ್. ಕೋನರಡ್ಡಿ, ನಿರ್ದೇಶಕರು
ಶ್ರೀ ವ್ಹಿ. ಡಿ. ಕಾಮರಡ್ಡಿ, ನಿರ್ದೇಶಕರು
ಶ್ರೀ ಎಲ್. ಆರ್. ಉದಪುಡಿ, ನಿರ್ದೇಶಕರು
ಶ್ರೀ ರವಿ. ಜಿ. ಬೂದಿಹಾಳ, ನಿರ್ದೇಶಕರು
ಶ್ರೀ ಕೆ. ವ್ಹಿ. ಹುಲಕೋಟಿ, ನಿರ್ದೇಶಕರು
ಶ್ರೀ ವ್ಹಿ. ಎಚ್. ಬಿದರಿ, ನಿರ್ದೇಶಕರು
ಶ್ರೀ ಎಮ್. ವ್ಹಿ. ಮಣಕೂರ, ನಿರ್ದೇಶಕರು
ಶ್ರೀ ಪಿ. ವ್ಹಿ. ಚವಣ್ಣವರ, ನಿರ್ದೇಶಕರು
ಶ್ರೀ ಎಚ್. ಎಸ್. ಕೊರಡ್ಡಿ, ನಿರ್ದೇಶಕರು
ಶ್ರೀ ಎಸ್. ಆರ್. ಸೋನವಾಲಕರ, ನಿರ್ದೇಶಕರು
ಶ್ರೀ ಎಸ್. ಎನ್. ನಾಡಗೌಡರ, ನಿರ್ದೇಶಕರು
ಶ್ರೀ ವ್ಹಿ. ವ್ಹಿ. ತುಳಸಿಗೇರಿ, ನಿರ್ದೇಶಕರು
ಶ್ರೀಮತಿ ಬಿ. ವ್ಹಿ. ನವಲಗುಂದ, ನಿರ್ದೇಶಕರು
ಶ್ರೀಮತಿ ಎಸ್. ಸಿ. ಹುಚ್ಚಣ್ಣವರ, ನಿರ್ದೇಶಕರು
ಶ್ರೀ ಡಿ. ಜಿ. ಜೋಗಣ್ಣವರ, ನಿರ್ದೇಶಕರು
ಶ್ರೀ ಎ. ಎಲ್. ಪೋಶ್ನೀಸ್, ವೃತ್ತಿಪರ ನಿರ್ದೇಶಕರು
ಶ್ರೀ ಜಿ. ಬಿ. ಒಂಟಗೋಡಿ, ವೃತ್ತಿಪರ ನಿರ್ದೇಶಕರು
ಶ್ರೀ ವ್ಹಿ. ಆರ್. ನಾಗಾವಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ಮತ್ತು ವೃತ್ತಿಪರ ನಿರ್ದೇಶಕರುಗಳ ಜವಾಬ್ದಾರಿ ಹಾಗೂ ಕರ್ತವ್ಯಗಳು

–ಹೆಚ್.ಎಸ್. ನಾಗರಾಜಯ್ಯ, ಕೆ.ಸಿ.ಎಸ್.

ಸಹಕಾರ ಸಂಘಗಳ ಅಪರ ನಿಬಂಧಕರು (ನಿ) ಬೆಂಗಳೂರು.

ಪಟ್ಟಣ ಸಹಕಾರ ಬ್ಯಾಂಕುಗಳು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960 ಹಾಗೂ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949ರಡಿಯಲ್ಲಿ ದ್ವಿನಿಯಂತ್ರಣದಡಿಯಲ್ಲಿ ಕಾರ್ಯನಿರ್ವಹಿಸಬೇಕಾಗಿದೆ. ಆಡಳಿತ ಮತ್ತು ವ್ಯವಸ್ಥಾಪನೆ ವಿಷಯದಲ್ಲಿ ಸಹಕಾರ ಇಲಾಖೆ ಹಾಗೂ ಹಣಕಾಸಿನ ವ್ಯವಹಾರ ಮತ್ತು ವಹಿವಾಟಿನ ಬಗ್ಗೆ ಭಾರತೀಯ ರಿಜರ್ವ್ ಬ್ಯಾಂಕಿನ ನಿರ್ದೇಶನದಂತೆ ಕಾರ್ಯನಿರ್ವಹಿಸುವುದು ಕಡ್ಡಾಯವಾಗಿದೆ.

ಆಡಳಿತ ಮಂಡಳಿ ಸಹಕಾರ ಬ್ಯಾಂಕುಗಳಲ್ಲಿ ಪ್ರಧಾನ ಘಟಕ ಹಾಗೂ ನೀತಿ–ನಿರೂಪಣೆ (Policy Making body) ರಚಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿ ಇದರ ಕರ್ತವ್ಯವಾಗಿದೆ.

ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 28ಸಿ ಮತ್ತು ಭಾರತೀಯ ರಿಜರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ: 2/14.01.062/15–16 ದಿನಾಂಕ: 01.07.2015 ಹಾಗೂ 1/18.10.010/24–25 ದಿನಾಂಕ: 01.04.2024 ಕ್ರೋಢಿಕೃತ ಅಂಶಗಳು ಕೆಳಕಂಡಂತಿವೆ.

ಆಡಳಿತ ಮಂಡಳಿಗೆ ಇರುವ ಅಧಿಕಾರ:

ಬ್ಯಾಂಕಿನಲ್ಲಿ ಸದಸ್ಯತ್ವ ಅಂಗೀಕರಿಸುವ, ಸಕಾರಣದೊಂದಿಗೆ ತಿರಸ್ಕರಿಸುವ ಹಾಗೂ ಷೇರು ಹಂಚಿಕೆ ಮತ್ತು ಹಿಂದಿರುಗಿಸುವ ಅಧಿಕಾರ ಆಡಳಿತ ಮಂಡಳಿಗೆ ದತ್ತವಾಗಿದೆ. ಸದಸ್ಯತ್ವ ಕೋರಿ ಬಂದಂತ ಅರ್ಜಿಗಳನ್ನು ವಿಳಂಬ ಮಾಡದೆ, ಗರಿಷ್ಠ ಅವಧಿ ಎರಡು ತಿಂಗಳೊಳಗೆ ಇತ್ಯರ್ಥ ಪಡಿಸುವುದು. ಸಹ ಸದಸ್ಯತ್ವದ ಮಿತಿ ಒಟ್ಟು ಸಾಮಾನ್ಯ ಸದಸ್ಯತ್ವದ ಶೇ.15% ಮೀರತಕ್ಕದ್ದಲ್ಲ. ಬ್ಯಾಂಕಿನ ಕಾರ್ಯವ್ಯಾಪ್ತಿಯಲ್ಲಿನ ಅರ್ಹರಿಗೆ ಸದಸ್ಯತ್ವ ನೋಂದಾಯಿಸುವ ಮೂಲಕ ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ಕೊಡುವ ಮೂಲಕ ಯಾವುದೇ ವೆಚ್ಚವಿಲ್ಲದ ಷೇರು ಸಂಗ್ರಹಣೆಗೆ ಗಮನ ಹರಿಸಿದಂತಾಗುತ್ತದೆ.

ಸಂಪನ್ಮೂಲ ಸಂಗ್ರಹಣೆ:

ಬ್ಯಾಂಕಿನ ಸಂಪನ್ಮೂಲ ಸಂಗ್ರಹಣೆ ಬಾಬ್ತುಗಳಾದ ಷೇರು, ಠೇವಣಿ, ಸಾಲ, ನಿಧಿಗಳು, ದೇಣಿಗೆ ಹಾಗೂ ಆರ್ಥಿಕ ನೆರವುಗಳ ಬಗ್ಗೆ ಆಡಳಿತ ಮಂಡಳಿ ಪೂರ್ಣಅಧಿಕಾರ ಹೊಂದಿರುತ್ತದೆ. ಠೇವಣಿ ಸಂಗ್ರಹಣೆಯಲ್ಲಿ ಠೇವಣಿ ಮಿಶ್ರಣವಿರಬೇಕು. (Deposit Mix) ಅಂದರೆ ವಿವಿಧ ರೀತಿಯ ಠೇವಣಿಗಳು, ಅದರಲ್ಲೂ ದೀರ್ಘಾವಧಿ ಠೇವಣಿಗಿಂತ ಅಲ್ಪಾವಧಿ ಠೇವಣಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ವಿಶೇಷವಾಗಿ ಕಡಿಮೆ ಬಡ್ಡಿ ದರದ ಠೇವಣಿಯ ಪ್ರಮಾಣದ ಅನುಪಾತ ಕನಿಷ್ಠ ಶೇ.35 ರಿಂದ 40 ಹಾಗೂ ಹೆಚ್ಚು ಬಡ್ಡಿದರದ ಅನುಪಾತ ಶೇ.60ರ ನಿರ್ವಹಣೆ, ಸರಾಸರಿ ಠೇವಣಿ ವೆಚ್ಚ (Cost of Deposit) ನಿಯಂತ್ರಿಸಲು ಪೂರಕವಾಗುತ್ತದೆ. ಇದು ಆಡಳಿತ ಮಂಡಳಿಯು ನಿಗದಿಪಡಿಸುವ

ವಿವೇಚನಾಯುಕ್ತ ಬಡ್ಡಿ ದರದ ತೀರ್ಮಾನಕ್ಕೆ ಸಹಕಾರಿಯಾಗಿದೆ. ಬ್ಯಾಂಕಿನ ಸ್ವಂತ ಬಂಡವಾಳ ಕೊರತೆ ಇದ್ದು, ಸದಸ್ಯರಿಂದ ಸಾಲ ಬೇಡಿಕೆ ಜಾಸ್ತಿ ಇದ್ದಲ್ಲಿ ಮಾತ್ರ ಅಗತ್ಯಕ್ಕೆ ತಕ್ಕಂತೆ ತಾತ್ಕಾಲಿಕ ಅವಧಿಗೆ ಮಾತ್ರ ಬೇರೆ ಬ್ಯಾಂಕಿನಿಂದ ಸಾಲ ಪಡೆದು ವಿತರಿಸಬೇಕಾಗಿದೆ. ಆದರೆ ಖಾಯಂ ರೂಡಿಯಲ್ಲಿರಬಾರದು.

ಸಾಲ ಮಂಜೂರಾತಿ :

ಆಡಳಿತ ಮಂಡಳಿಯಿಂದ ಮತ್ತೊಂದು ಪ್ರಧಾನ ಅಧಿಕಾರ ಮತ್ತು ಕರ್ತವ್ಯವೆಂದರೆ ವಿವಿಧ ರೀತಿಯ ಸಾಲ ಮಂಜೂರಾತಿ ಮಾಡುವುದು. ಒಂದೇ ರೀತಿಯ ಸಾಲ ಮಂಜೂರಾತಿಗೆ ಸೀಮಿತವಾಗದೆ ಸಾಲ ಮಿಶ್ರಣ ನೀತಿ(Loan Mixing Policy) ಅನುಸರಿಸುವುದು. ಮೇಲಾಗಿ ವಿವಿಧ ಸಾಲ ನಿಯಮಾವಳಿಗಳನ್ನು ಬೈಲಾ, ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ವಯ ರೂಪಿಸಿ ಅನುಷ್ಠಾನಕ್ಕೆ ತರುವುದು. ಸಾಲದ ಮೊತ್ತಕ್ಕೆ ಸೂಕ್ತ ಭದ್ರತೆ, ಮರುಪಾವತಿ ಸಾಮರ್ಥ್ಯ, ವಿಮೆ, ಪೂರ್ವ ಸಮೀಕ್ಷೆ ವರದಿ, ಮರುಪಾವತಿ ಅವಧಿ, ದಸ್ತಾವೇಜುಗಳು, ಬಡ್ಡಿದರ ಮುಂತಾದ ವಿವರಗಳ ಸಾಲ ನಿಯಮಾವಳಿಗಳನ್ನು ಸ್ಪಷ್ಟವಾಗಿ ರೂಪಿಸಿ ಜಾರಿಗೆ ಕೊಡುವುದು ಮುಖ್ಯವಾಗಿದೆ. ಮೇಲಾಗಿ, ವಿವೇಚನಾಯುಕ್ತ ಸಾಲ ಮಂಜೂರಾತಿ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ನಿರ್ದೇಶಕರು ಮತ್ತು ಅವರು ಹೊಂದಿರುವ ಕಂಪನಿಗಳಿಗೆ ಹಾಗೂ ಸಂಬಂಧಿಕರಿಗೆ ಸಾಲ ನೀಡಲು ಅವಕಾಶವಿರುವುದಿಲ್ಲ.

ಹೂಡಿಕೆ (Investment):

ಬ್ಯಾಂಕಿನ ಆಡಳಿತ ಮಂಡಳಿ ರಿಸರ್ವ್ ಬ್ಯಾಂಕಿನ ಸುತ್ತೋಲೆ ಹಾಗೂ ನಿರ್ದೇಶನದ ರೀತ್ಯಾ ಹೂಡಿಕೆ ಸಮಿತಿಯನ್ನು ಕಡ್ಡಾಯವಾಗಿ ರಚಿಸಿಕೊಂಡು ಕಾರ್ಯನಿರ್ವಹಿಸುವುದು. ಯಾವುದೇ ಹೂಡಿಕೆ ಮಾಡಬೇಕಾದಲ್ಲಿ ಪ್ರಥಮ ಆದ್ಯತೆ ಕೇಂದ್ರ, ರಾಜ್ಯ ಸರ್ಕಾರ ಹಾಗೂ ನೇರವಾಗಿ ರಿಜರ್ವ್ ಬ್ಯಾಂಕ್ ಸೂಚಿಸಿದ ಬಾಂಡ್‌ಗಳಲ್ಲಿ ಹೂಡಿಕೆ ಮಾಡುವುದು ಸೂಕ್ತವಾಗಿದೆ. ಹಲವಾರು ಬ್ಯಾಂಕ್‌ಗಳು ಹೂಡಿಕೆಯಿಂದ ನಷ್ಟ ಅನುಭವಿಸಿರುವುದು ಸ್ಪಷ್ಟವಾಗಿದೆ. ಹೂಡಿಕೆಗೆ ಅನುಸರಿಸಬೇಕಾದ ಅಂಶಗಳೆಂದರೇ, ಕಾನೂನು ಸಮ್ಮತವೇ, ಸಾಕಷ್ಟು ಸುರಕ್ಷಿತವೇ (Secured) ಆದಾಯ ತರುತ್ತದೆಯೇ (Income) ಸುಲಭವಾಗಿ ನಗದೀಕರಣ ಸಾಧ್ಯವೇ (Liquidity) ಹಾಗೂ ಮಧ್ಯವರ್ತಿಗಳ ಮೂಲಕ ವ್ಯವಹರಿಸುವುದನ್ನು ತಪ್ಪಿಸುವುದು. ಹೂಡಿಕೆ ನಿಯಮಾವಳಿಗಳ ರೀತ್ಯಾ ಹೂಡಿಕೆ ಸಮಿತಿ ಸಭೆ ನಡೆಸಿ ವಿಮರ್ಶಿಸುವುದು. ಅನಧೀಕೃತ ಮತ್ತು ಅಸುರಕ್ಷಿತ ಸಂಸ್ಥೆಗಳಲ್ಲಿ ಯಾವುದೇ ಕಾರಣಕ್ಕೂ ಹೂಡಿಕೆ ಮಾಡಬಾರದು.

ನಿಧಿಗಳ ರಚನೆ ಹಾಗೂ ನಿರ್ವಹಣೆ:

ಬ್ಯಾಂಕಿನ ಬೈಲಾ ಹಾಗೂ ರಿಸರ್ವ್ ಬ್ಯಾಂಕಿನ ನಿರ್ದೇಶನದ ಪ್ರಕಾರ ನಿಧಿಗಳ ರಚನೆ ಮತ್ತು ನಿರ್ವಹಣೆ ಕಡ್ಡಾಯ. ಆಯಾ ಸಂಬಂಧಿತ ನಿಧಿಗಳಲ್ಲಿನ ಮೊತ್ತವನ್ನು ಆಯಾ ನಿರ್ದಿಷ್ಟ ಉದ್ದೇಶಕ್ಕೆ ಮಾತ್ರ ಬಳಸುವುದು. ಬ್ಯಾಂಕಿನ ದುಡಿಯುವ ಬಂಡವಾಳದ ಷೇರು, ಗ್ರಾಹಕರ ಠೇವಣಿ, ಬ್ಯಾಂಕಿನಿಂದ ಪಡೆದ ಸಾಲಗಳನ್ನು ಯಾವುದೇ ಕಾರಣಕ್ಕೂ ಚರ ಮತ್ತು ಸ್ಥಿರಾಸ್ತಿಗಳ ಖರೀದಿ ಮತ್ತು ಕಟ್ಟಡ ನಿರ್ಮಾಣಕ್ಕೆ ಬಳಸದೆ ಸಂಬಂಧಿಸಿದ ನಿಧಿಯಲ್ಲಿ ಲಭ್ಯವಿರುವ ಮೊತ್ತವನ್ನು ಉಪಯೋಗಿಸುವುದು. ಮೇಲಾಗಿ ಬ್ಯಾಂಕಿನ ಬೆಳ್ಳಿಹಬ್ಬ, ಸುವರ್ಣ ಮಹೋತ್ಸವ, ಅಮೃತ ಮಹೋತ್ಸವ, ಶತಮಾನೋತ್ಸವ ಇತರೆ ಆಚರಣೆಗಳಿಗೆ ಬೈಲಾದಲ್ಲಿ ಪ್ರತ್ಯೇಕ ನಿಧಿಗೆ ಲಾಭದಿಂದ ವರ್ಗಾಯಿಸಿ ಅದರಿಂದ ಖರ್ಚು ಮಾಡಬಹುದೇ ಹೊರತು ದಿನನಿತ್ಯದ ಬಂಡವಾಳಕ್ಕೆ ಕೈಹಾಕಬಾರದು. ಇದರಿಂದ ದಿನನಿತ್ಯದ ವಹಿವಾಟು ಹಾಗೂ ಠೇವಣಿದಾರರ ಹಿತಾಸಕ್ತಿಗೆ ಧಕ್ಕೆವುಂಟಾಗುತ್ತದೆ. ಈ ಬಗ್ಗೆ ಆಡಳಿತ ಮಂಡಳಿಯವರ ತೀರ್ಮಾನಗಳು ವಿವೇಚನಾಯುಕ್ತವಾಗಿರಬೇಕು.

ಆಡಳಿತ ಮಂಡಳಿ ಸಭೆ ಹಾಗೂ ಉಪಸಮಿತಿಗಳ ಸಭೆಗಳಲ್ಲಿ ನಿರ್ದೇಶಕರ ಸಕ್ರಿಯ ಭಾಗವಹಿಸುವಿಕೆ:

ಬ್ಯಾಂಕಿನ ಬೈಲಾ ಹಾಗೂ ರಿಸರ್ವ್ ಬ್ಯಾಂಕಿನ ಸುತ್ತೋಲೆ ಮತ್ತು ನಿರ್ದೇಶನಗಳ ರೀತ್ಯಾ ನಿಯತ ಕಾಲಿಕೆ ಪ್ರಕಾರ ಸಭೆಗಳನ್ನು ತಪ್ಪದೆ ನಡೆಸತಕ್ಕದ್ದು. ಸಭೆಯಲ್ಲಿ ಚರ್ಚಿಸಿ ತೆಗೆದುಕೊಳ್ಳಬೇಕಾದ ವಿಷಯಗಳು / ಕಾರ್ಯಸೂಚಿಗಳ ಬಗ್ಗೆ ಮುಖ್ಯನಿರ್ವಾಹಕನು ವಿಷಯವಾರು ಪೂರಕ ಟಿಪ್ಪಣಿಯನ್ನು ಸಾಕಷ್ಟು ಮುಂಚಿತವಾಗಿ ಕಳಿಸುವುದು. ಈ ಬಗ್ಗೆ ನಿರ್ದೇಶಕರು ಪೂರ್ವ ತಯಾರಿಯೊಂದಿಗೆ ಹಾಜರಾಗಿ, ವಿವರವಾಗಿ ಚರ್ಚಿಸಿ, ಬೈಲಾ ಕಾಯ್ದೆ, ನಿಯಮಗಳು ಹಾಗೂ ಬ್ಯಾಂಕಿನ ಸದಸ್ಯರು ಮತ್ತು ಠೇವಣಿದಾರರ ಹಿತವನ್ನು ಕಾಪಾಡುವುದರ ಮೂಲಕ ತೀರ್ಮಾನಗಳನ್ನು ಮಾಡುವುದು. ಯಾವುದೇ ಸ್ವಹಿತಾಸಕ್ತಿ ವಿಷಯಗಳು ಚರ್ಚೆಗೆ ಬಂದಾಗ ಸಂಬಂಧಿಸಿದ ನಿರ್ದೇಶಕರು ಭಾಗಿಯಾಗದೇ, ಕಾನೂನಾತ್ಮಕ ನಿರ್ಣಯಗಳು ಹೊರಹೊಮ್ಮಲು ಸಹಕರಿಸುವುದು ಸೂಕ್ತವಾಗಿದೆ. ನಿರ್ದೇಶಕರು ವೃತ್ತಿಪರ ಮತ್ತು ನೈಪುಣ್ಯತೆಯಿಂದ ಪಕ್ಕ ಬ್ಯಾಂಕುಗಳಾಗಿ ಅಧ್ಯಯನ ಮತ್ತು ಅನುಭವದಿಂದ ತಂಡವಾಗಿ ಕಾರ್ಯನಿರ್ವಹಿಸುವುದು ಇಂದಿನ ಸ್ಪರ್ಧಾತ್ಮಕ ಬ್ಯಾಂಕಿಂಗ್ ಕ್ಷೇತ್ರದ ಅಗತ್ಯವಾಗಿದೆ. ಪ್ರತಿಯೊಂದು ಉಪಸಮಿತಿಯ ನಿರ್ಣಯಗಳು. ಆಡಳಿತ ಮಂಡಳಿಯಿಂದ ಅನುಮೋದನೆ ಸ್ಥಿರಿಕರಿಸಬೇಕು. ಆಡಳಿತ ಮಂಡಳಿಯಲ್ಲಿ ತೆಗೆದುಕೊಂಡ ತೀರ್ಮಾನಗಳು ಕಾಲ ಬದ್ಧವಾಗಿ ಜಾರಿಯಾಗಬೇಕು. ಇದನ್ನು ಮೇಲ್ವಿಚಾರಣೆ ಮತ್ತು ಪರಿಶೀಲಿಸುವ ಅಧಿಕಾರ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ಆಡಳಿತ ಮಂಡಳಿಯಲ್ಲಿ ವೃತ್ತಿಪರ ನಿರ್ದೇಶಕರು ತಮ್ಮ ಜ್ಞಾನ ಮತ್ತು ಅನುಭವದಿಂದ ಯಾವುದೇ ಬೈಲಾ, ಕಾಯ್ದೆ, ನಿಯಮ ಹಾಗೂ ನಿರ್ದೇಶನಗಳು ಉಲ್ಲಂಘನೆಯಾಗದಂತೆ ಮಾರ್ಗದರ್ಶನ ಮತ್ತು ಸಲಹೆ ಮಂಡಿಸುವುದು. ಬ್ಯಾಂಕಿನ ಆಡಳಿತ ಮಂಡಳಿ ತೀರ್ಮಾನಗಳಿಂದ

ನಷ್ಟಕ್ಕೆ ಕಾರಣವಾಗದಂತೆ ಎಚ್ಚರಿಕೆಯಿಂದ ವಿವೇಚನಾಯುಕ್ತವಾಗಿ ಕಾರ್ಯ ನಿರ್ವಹಿಸುವುದು ವೈಯಕ್ತಿಕ ಹಾಗೂ ಸಾಮೂಹಿಕ ಜವಾಬ್ದಾರಿಯಾಗಿದೆ.

▸▸ **ಗಣಕೀಕರಣ ಮತ್ತು ಮಾಹಿತಿ ತಂತ್ರಜ್ಞಾನ ಅಳವಡಿಸುವುದು:**

ಬ್ಯಾಂಕ್ ಗ್ರಾಹಕರಿಗೆ ಶೀಘ್ರ ಮತ್ತು ನಿಖರ ಸೇವೆಯನ್ನು ನೀಡಲು ಬ್ಯಾಂಕಿನ ಲೆಕ್ಕ ಪುಸ್ತಕಗಳು ಮತ್ತು ವಹಿವಾಟು ಪೂರ್ಣ ಪ್ರಮಾಣದಲ್ಲಿ ಗಣಕೀಕರಣಕ್ಕೆ ಅಳವಡಿಸಿ ಅನುಷ್ಠಾನಗೊಳಿಸುವುದು ಇಂದಿನ ಅಗತ್ಯವಾಗಿದೆ. ಈ ಬಗ್ಗೆ ಆಡಳಿತ ಮಂಡಳಿ ಆದ್ಯತೆ ಮೇರೆಗೆ ಕ್ರಮವಹಿಸುವುದು. ಇದರಿಂದ ಸದೃಢ ವ್ಯವಸ್ಥಾಪನೆ ಹಾಗೂ ಅಭಿವೃದ್ಧಿಗೆ ನಾಂದಿಯಾಗುತ್ತದೆ.

▸▸ **ಲೆಕ್ಕಪರಿಶೋಧನೆ ಮತ್ತು ಆಂತರಿಕ ನಿಯಂತ್ರಣ ಕ್ರಮಗಳು :**

ಬ್ಯಾಂಕಿನ ಲೆಕ್ಕಪುಸ್ತಕಗಳು ಮತ್ತು ವಹಿವಾಟು ಚಟುವಟಿಕೆಗಳು ಆಂತರಿಕ ಲೆಕ್ಕಪರಿಶೋಧನೆ, ಪರಿವೀಕ್ಷಣೆ, ಲೆಕ್ಕಗಳ ಸಮನ್ವಯತೆ, ಇ–ಆಡಿಟ್, ಶಾಸನ ಬದ್ಧ ಲೆಕ್ಕಪರಿಶೋಧನೆ ನಿಗಧಿತ ಕಾಲಮೀತಿಯೊಳಗೆ ಮುಕ್ತಾಯಗೊಂಡು, ವಾರ್ಷಿಕ ಮಹಾಸಭೆಯಲ್ಲಿ ಚರ್ಚಿತವಾಗಿ ಅಂಗೀಕಾರವಾಗಬೇಕು ಹಾಗೂ ಆಡಿಟ್ ವರದಿ ಪ್ರಕಟಣೆಯಾಗಿ, ಭಾರತೀಯ ರಿಜರ್ವ್ ಬ್ಯಾಂಕ್‌ಗೆ ಸಲ್ಲಿಕೆಯಾಗಬೇಕು. ಬ್ಯಾಂಕಿನಲ್ಲಿ ಪ್ರತ್ಯೇಕ ಆಡಿಟ್ ಸಮಿತಿ ನೇಮಕ ಮಾಡುವುದಲ್ಲದೆ, ನಿಯತಕಾಲಿಕವಾಗಿ ಸಭೆ ನಡೆಸಿ, ಅದರಲ್ಲಿ ನಮೂದಿಸಿರುವ ನ್ಯೂನ್ಯತೆಗಳ ಬಗ್ಗೆ ಸ್ಪಷ್ಟ ಹಾಗೂ ನಿಖರ ಅನುಪಾಲನ ವರದಿಯನ್ನು ರಿಜರ್ವ್ ಬ್ಯಾಂಕ್ ಹಾಗೂ ಇಲಾಖೆಗಳಿಗೆ ಸಲ್ಲಿಸುವುದು.

ಅನುಪಾಲನ ಕ್ರಮ ಅಸ್ಪಷ್ಟ ಹಾಗೂ ಹಾರಿಕೆ, ಉದಾಸಿನ ಉತ್ತರಗಳಿಂದ ಕೂಡಿರದಂತೆ ಕ್ರಮ ವಿಡುವುದು. ಇದರ ಜೊತೆಗೆ ಇದೇ ಸಮಿತಿಯಲ್ಲಿ ಆರ್.ಬಿ.ಐ. ಪರಿವೀಕ್ಷಣಾ ವರದಿಗೆ ಆಂತರಿಕ ಸಮವರ್ತಿ ಲೆಕ್ಕ ಪರಿಶೋಧನಾ ವರದಿ ವಿಮರ್ಶೆ, ಸಹಕಾರ ಕಾಯ್ದೆ ಕಲಂ 64ರಡಿ ವಿಚಾರಣಾ ವರದಿ, 65ರಡಿ ಪರಿವೀಕ್ಷಣಾ ವರದಿಗಳಲ್ಲಿನ ನ್ಯೂನ್ಯತೆಗಳ ಬಗ್ಗೆ ಸಮಂಜಸ ಹಾಗೂ ಸೂಕ್ತ ಅನುಪಾಲನ ವರದಿ ಸಲ್ಲಿಸುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ.

ಸಹಕಾರ ಕಾಯ್ದೆ, ನಿಯಮ ಹಾಗೂ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯಡಿಯಲ್ಲಿ ನಿರ್ವಹಿಸಬೇಕಾದ ಶಾಸನ ಬದ್ಧ ಕರ್ತವ್ಯ ಮತ್ತು ಜವಾಬ್ದಾರಿಗಳು

▸▸ ಬ್ಯಾಂಕಿನ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಪ್ರತಿ ವರ್ಷ ಸೆಪ್ಟಂಬರ್ 25ರೊಳಗಾಗಿ ಕಡ್ಡಾಯವಾಗಿ ನಡೆಸುವುದು.

▸▸ ಬ್ಯಾಂಕ್‌ಗಳು ಜೂನ್ 30ರೊಳಗೆ ಶಾಸನ ಬದ್ಧ ಲೆಕ್ಕ ಪರಿಶೋಧನೆ ವರದಿಯನ್ನು ಅಂಗೀಕರಿಸಿ, ಹಣಕಾಸು ತಃಖ್ತೆಗಳನ್ನು ದಿನ ಪತ್ರಿಕೆಯಲ್ಲಿ ಪ್ರಕಟಿಸಿ, ರಿಜರ್ವ್ ಬ್ಯಾಂಕಿಗೆ ಸಲ್ಲಿಸುವುದು ಕಡ್ಡಾಯವಾಗಿದೆ.

▸▸ ಬ್ಯಾಂಕಿನ ಆಡಳಿತ ಮಂಡಳಿ ಅವಧಿ ಮುಕ್ತಾಯದ ಆರು ತಿಂಗಳು ಪೂರ್ವದಲ್ಲಿ ಹೊಸ ಆಡಳಿತ ಮಂಡಳಿಗೆ ಚುನಾವಣೆಗೆ ಪೂರ್ವ ಸಿದ್ಧತೆ ನಡೆಸುವುದು.

▸▸ ಸಹಕಾರ ಕಾಯ್ದೆ ಕಲಂ 27ಬಿ ರೀತ್ಯಾ ಸೆಪ್ಟೆಂಬರ್ 30ರೊಳಗೆ ಏಳು ತಃಖ್ತೆಗಳನ್ನು ಕಡ್ಡಾಯವಾಗಿ ಬ್ಯಾಂಕುಗಳು ನಿಬಂಧಕರಿಗೆ ಸಲ್ಲಿಸುವುದು.

▸▸ ಬ್ಯಾಂಕುಗಳು ನಗದು ಮೀಸಲು ಅನುಪಾತ C.R.R ಮತ್ತು S.L.R ದ್ರವ್ಯಾಸ್ತಿ ನಿರ್ವಹಣೆಯನ್ನು ಕೊರತೆಯಾಗದಂತೆ ನಿರ್ವಹಿಸುವುದನ್ನು ಆಡಳಿತ ಮಂಡಳಿ ನಿಗಾವಹಿಸುವುದು.

▸▸ ಆದ್ಯತಾ ವಲಯ ಮತ್ತು ದುರ್ಬಲ ವರ್ಗದವರಿಗೆ ಸಾಲ ಹಂಚಿಕೆಯಲ್ಲಿ ಗುರಿ ಸಾಧಿಸುವುದು.

▸▸ ಬ್ಯಾಂಕಿನಲ್ಲಿ ಸಂಭವಿಸಿರುವ ಹಣ ದುರುಪಯೋಗ, ಮೋಸ, ವಂಚನೆ ಮತ್ತು ಅವ್ಯವಹಾರಗಳ ಬಗ್ಗೆ ರಿಸರ್ವ್ ಬ್ಯಾಂಕಿಗೆ ತಕ್ಷಣ ವರದಿ ಸಲ್ಲಿಸುವುದು ಮತ್ತು ಅಂತಹ ಪ್ರಕರಣಗಳ ಮೇಲೆ ಸಿವಿಲ್, ಕ್ರಿಮಿನಲ್ ಹಾಗೂ ಶಿಸ್ತು ಕ್ರಮ ಜರುಗಿಸಿ, ವರದಿ ಮಾಡುವುದು ವಿಚಕ್ಷಣಾ ದಳ (Vigilence Committee) ರಚನೆ ಮಾಡುವುದು.

▸▸ ಸಾಲ ವಸೂಲಾತಿಗೆ ಕಾನೂನು ಮತ್ತು ಕಾನೂನುಯೇತರ (Legal & Non-legal) ಕ್ರಮಜರುಗಿಸಲು ಸಿಬ್ಬಂದಿಗೆ ಸೂಕ್ತ ಸೂಚನೆ ಮತ್ತು ಮಾರ್ಗದರ್ಶನ ನೀಡುವುದಲ್ಲದೆ, ಹಿಂಬಾಲಿಕೆ ಕ್ರಮ ಜರುಗಿಸುವುದು. ಇದರಿಂದ ಸುಸ್ತಿ ಸಾಲದ ಪ್ರಮಾಣ ಕಡಿಮೆ ಮಾಡುವುದಲ್ಲದೆ ಅನುತ್ಪಾದಕ ಆಸ್ತಿ (N.P.A) ಯನ್ನು ನಿಯಂತ್ರಿಸುವುದು ಆಡಳಿತ ಮಂಡಳಿ ಕರ್ತವ್ಯವಾಗಿದೆ.

▸▸ ಬ್ಯಾಂಕಿನ ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿ ಆದಾಯ ಗುರುತಿಸುವುದು ಹಾಗೂ ಆಸ್ತಿ ವರ್ಗೀಕರಣ (IRAC) ಮತ್ತು ಅನುತ್ಪಾದಕ ಆಸ್ತಿ ಪ್ರಮಾಣಕ್ಕೆ ಅನುಗುಣವಾಗಿ ಲಾಭದಲ್ಲಿ ಅವಕಾಶ ಕಲ್ಪಿಸುವುದು ಆಡಳಿತ ಮಂಡಳಿಯ ಅದ್ಯ ಕರ್ತವ್ಯವಾಗಿದೆ.

▸▸ ಆಡಳಿತ ಮಂಡಳಿ ಪ್ರತಿ ಮಾಹೆಯ ಸಭೆಯಲ್ಲಿ ಅಭಿವೃದ್ಧಿ ಕ್ರಿಯಾಯೋಜನೆ (Development Action Plan) ಪ್ರಗತಿ ವಿಮರ್ಶೆ, ಸಿಬ್ಬಂದಿಗಳ ಕರ್ತವ್ಯ ಲೋಪ, ಕರ್ತವ್ಯ ಚ್ಯುತಿ, ನಿರ್ಲಕ್ಷತೆ ಬಗ್ಗೆ ಶಿಸ್ತು ಕ್ರಮ ಜರುಗಿಸುವುದು.

▸▸ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ರೀತ್ಯಾ ಆಡಳಿತ ಮಂಡಳಿ ನಿರ್ದೇಶಕರು ಮಾಡುವ ಮತ್ತು ಮಾಡದಿರುವ (Dos & Don'ts) ಗಳ ಬಗ್ಗೆ ಗಮನ ವಹಿಸಿ ಅನುಪಾಲನೆ ಮಾಡುವುದು ಸಮಂಜಸ ಹಾಗೂ ಸೂಕ್ತವಾಗಿದೆ.

▸▸ ಬ್ಯಾಂಕಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡುವುದು ಹಾಗೂ ಅವರ ವಿರುದ್ಧ ಅವಿಶ್ವಾಸ ತಂದು ಅಧಿಕಾರದಿಂದ ಕೆಳಗಿಳಿಸುವ ಅಧಿಕಾರ ಆಡಳಿತ ಮಂಡಳಿ ಕಾಯ್ದೆ ರೀತ್ಯಾ ದತ್ತವಾಗಿರುತ್ತದೆ.



ಚೆಕ್‌ನ ಹಿಂದೆ ಸ್ವೀಕರಿಸುವವರ ಸಹಿ ಇದ್ದರೆ, ಅದರ ಮೂಲಕ ಯಾರು ಹಣವನ್ನು ಸ್ವೀಕರಿಸಿದ್ದಾರೆ ಎಂಬ ದಾಖಲೆಯನ್ನು ಬ್ಯಾಂಕ್ ಹೊಂದಿರುತ್ತದೆ. ತಪ್ಪು ವ್ಯಕ್ತಿಯು ಚೆಕ್ ಬಳಸಿ ಹಣವನ್ನು ಹಿಂತೆಗೆದುಕೊಂಡರೆ, ಅವರು ಕಾರ್ಯವಿಧಾನವನ್ನು ಅನುಸರಿಸಿದ್ದಾರೆ ಎಂದು ಬ್ಯಾಂಕ್ ಸಾಬೀತುಪಡಿಸಬಹುದು. ಇದರ ಜವಾಬ್ದಾರಿಯು ಚೆಕ್‌ನ ಹಿಂದಿನ ಸಹಿದಾರರ ಮೇಲಿದೆ.

ಚೆಕ್ಕಿನ ಹಿಂಭಾಗ ನಾವು ಯಾಕೆ ಸಹಿ ಮಾಡಬೇಕು ಗೊತ್ತಾ..? ತಿಳಿಯಿರಿ

ಬ್ಯಾಂಕಿನಿಂದ ಹಣವನ್ನು ತೆಗೆದುಕೊಂಡು ಅದನ್ನು ಯಾರಿಗಾದರೂ ನೀಡಲು ಪ್ರಸ್ತುತ ಅನೇಕ ಮಾರ್ಗಗಳಿವೆ. ಹೊಸ ಇಂಟರ್ನೆಟ್ ಬ್ಯಾಂಕಿಂಗ್ ಮತ್ತು ಯುಪಿಐ ಸೇವೆಗಳನ್ನು ಪರಿಚಯಿಸಲಾಗಿದೆ. ಆದರೆ ಚೆಕ್‌ಗಳನ್ನು ಬಹಳ ಹಿಂದಿನಿಂದಲೂ ಹಣದ ವಹಿವಾಟಿಗೆ ಬಳಸಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ, ಚೆಕ್‌ನ ಹಿಂಭಾಗದಲ್ಲಿ ಸಹಿ ಮಾಡುವುದನ್ನು ನೀವು ನೋಡಿರಬಹುದು.

ಇದನ್ನು ಏಕೆ ಮಾಡುಲಾಗುತ್ತದೆ ಹಾಗೂ ಅದಕ್ಕಿರುವ ನಿಯಮ ಯಾವ ರೀತಿಯ ವಿಷಯಗಳಿಗೆ ಅನ್ವಯಿಸುತ್ತದೆ?

ಚೆಕ್‌ನ ಹಿಂದೆ ಸ್ವೀಕರಿಸುವವರ ಸಹಿ ಇದ್ದರೆ, ಅದರ ಮೂಲಕ ಯಾರು ಹಣವನ್ನು ಸ್ವೀಕರಿಸಿದ್ದಾರೆ ಎಂಬ ದಾಖಲೆಯನ್ನು ಬ್ಯಾಂಕ್ ಹೊಂದಿರುತ್ತದೆ. ತಪ್ಪು ವ್ಯಕ್ತಿಯು ಚೆಕ್ ಬಳಸಿ ಹಣವನ್ನು ಹಿಂತೆಗೆದುಕೊಂಡರೆ, ಅವರು ಕಾರ್ಯವಿಧಾನವನ್ನು ಅನುಸರಿಸಿದ್ದಾರೆ ಎಂದು ಬ್ಯಾಂಕ್ ಸಾಬೀತುಪಡಿಸಬಹುದು. ಇದರ ಜವಾಬ್ದಾರಿಯು ಚೆಕ್‌ನ ಹಿಂದಿನ ಸಹಿದಾರರ ಮೇಲಿದೆ.

ಬೇರರ್ ಚೆಕ್ ಎಂದರೇನು? : ಬೇರರ್ ಚೆಕ್ ಎಂದರೆ ಅದನ್ನು ಬ್ಯಾಂಕಿಗೆ ಸಲ್ಲಿಸಿದ ಯಾರಾದರೂ ಹಣವನ್ನು ಹಿಂಪಡೆಯಬಹುದು. ಚೆಕ್‌ನಲ್ಲಿ ಒಬ್ಬರ ಹೆಸರು ಇದ್ದರೂ ಸಹ, ಇನ್ನೊಬ್ಬ ವ್ಯಕ್ತಿಯು ಹಣವನ್ನು ಪಡೆಯಲು ಅದನ್ನು ಬಳಸಬಹುದು. ಈ ಕಾರಣದಿಂದಾಗಿ, ಚೆಕ್ ಅನ್ನು ಹಣವಾಗಿ ಪರಿವರ್ತಿಸುವ ವ್ಯಕ್ತಿಯ ಸಹಿಯನ್ನು ತೆಗೆದುಕೊಳ್ಳುವ ಮೂಲಕ ವಂಚನೆಯನ್ನು ತಡೆಗಟ್ಟಲು ಬ್ಯಾಂಕ್ ಹೆಚ್ಚುವರಿ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುತ್ತದೆ. ಕೆಲವೊಮ್ಮೆ, ವಿಶೇಷವಾಗಿ ದೊಡ್ಡ ಪ್ರಮಾಣದ ಹಣವನ್ನು ಡ್ರಾ ಮಾಡುತ್ತಿದ್ದರೆ, ಚೆಕ್ ತರುವ ವ್ಯಕ್ತಿಯಿಂದ ನೀವು ಬ್ಯಾಂಕ್ ವಿಳಾಸ ಪುರಾವೆಯನ್ನು ಸಹ ಕೇಳಬಹುದು. ಇದು ನಂತರ ಯಾವುದೇ ವಂಚನೆಯ ಸಂದರ್ಭದಲ್ಲಿ ವ್ಯಕ್ತಿಯನ್ನು ಪತ್ತೆಹಚ್ಚಲು ಬ್ಯಾಂಕಿಗೆ ಸಹಾಯ ಮಾಡುತ್ತದೆ.

ಆರ್ಡರ್ ಚೆಕ್ ಎಂದರೇನು? : ಆರ್ಡರ್ ಚೆಕ್ ಸಂದರ್ಭದಲ್ಲಿ, ಚೆಕ್‌ನ ಹಿಂಭಾಗದಲ್ಲಿ ಸಹಿ ಅಗತ್ಯವಿಲ್ಲ. ಆರ್ಡರ್ ಚೆಕ್ನಲ್ಲಿ, ಬ್ಯಾಂಕ್ ಸಿಬ್ಬಂದಿ ಹೆಸರನ್ನು ಬರೆದಿರುವ ವ್ಯಕ್ತಿಗೆ ಮಾತ್ರ ಹಣವನ್ನು ಪಾವತಿಸುತ್ತಾರೆ. ಚೆಕ್ ನಲ್ಲಿ ಹೆಸರು ಹೊಂದಿರುವ ವ್ಯಕ್ತಿಯು ಹಣವನ್ನು ಹಿಂಪಡೆಯಲು ಬ್ಯಾಂಕಿನೊಂದಿಗೆ ಇರಬೇಕು. ಈ ಕಾರಣದಿಂದಾಗಿ, ಬ್ಯಾಂಕಿಗೆ ಹಿಂಭಾಗದಲ್ಲಿರುವ ವ್ಯಕ್ತಿಯ ಸಹಿ ಅಗತ್ಯವಿಲ್ಲ. ಏಕೆಂದರೆ ಹಣವನ್ನು ಪಡೆಯುವ ವ್ಯಕ್ತಿಯ ಗುರುತನ್ನು ಅವರು ತಿಳಿದಿರುತ್ತಾರೆ.

ಆರ್ಡರ್ ಚೆಕ್ನಲ್ಲಿ ಹಣವನ್ನು ನೀಡುವ ಮೊದಲು, ಬ್ಯಾಂಕ್ ನೌಕರರು ಸಂಪೂರ್ಣವಾಗಿ ತನಿಖೆ ನಡೆಸಿ ತೃಪ್ತಿಪಟ್ಟ ನಂತರವೇ ಹಣವನ್ನು ನೀಡುತ್ತಾರೆ. ಚೆಕ್‌ನಲ್ಲಿರುವ ಹೆಸರು ಅದನ್ನು ತಂದ ವ್ಯಕ್ತಿಯೇ? ಅಲ್ಲವೇ? ಅದನ್ನು ಕಂಡುಹಿಡಿಯಲು ಬ್ಯಾಂಕ್ ಎಚ್ಚರಿಕೆಯಿಂದ ಪರಿಶೀಲಿಸುತ್ತದೆ.

ತಂತ್ರಜ್ಞಾನ ಆಧಾರಿತ ಸೇವೆ; ವಿನೂತನ ಯೋಜನೆಗಳ ಅನುಷ್ಠಾನದಿಂದ ಪ್ರಗತಿ ಪಥದಲ್ಲಿ ಸಾಗಿದೆ ದಿ ದಾವಣಗೆರೆ – ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸುವರ್ಣ ಮಹೋತ್ಸವ ಸಂಭ್ರಮ

ಬ್ಯಾಂಕಿನ ಆರಂಭ : ದಾವಣಗೆರೆ ನಗರದಲ್ಲಿ ನಾಗರಿಕರ ಅನುಕೂಲಕ್ಕೆ ಸಹಕಾರ ತತ್ವದಡಿಯಲ್ಲಿ ಸಹಕಾರ ಬ್ಯಾಂಕ್ ಸ್ಥಾಪಿಸಬೇಕೆಂದು ಉತ್ತೇಜಿತರಾಗಿ ದೃಢ ಮನಸ್ಸಿನಿಂದ ಬ್ಯಾಂಕು ಸ್ಥಾಪನೆ ಮಾಡಲು 46 ಸದಸ್ಯರೊಂದಿಗೆ, ಕೀರ್ತಿಶೇಷರಾದ ಎಸ್. ಕೊಟ್ರಬಸಪ್ಪನವರ ಮಾರ್ಗದರ್ಶನದಲ್ಲಿ ಕೀರ್ತಿಶೇಷರಾದ ಎನ್.ಎಂ.ಜೆ.ಬಿ. ಆರಾಧ್ಯರವರು ಹುಮ್ಮಸ್ಸಿನಿಂದ ಕಾರ್ಯಪ್ರವೃತ್ತರಾಗಿ ತಮ್ಮ ಸಮಾನ ಮನಸ್ಕ ಮಿತ್ರರೊಡಗೂಡಿ ದಿನಾಂಕ: 02–02–1973 ರಂದು "ದಿ ದಾವಣಗೆರೆ–ಹರಿಹರ ಅರ್ಬನ್ ಇಂಡಸ್ಟ್ರಿಯಲ್ ಎಂಟರ್‌ಪ್ರೆನೂರ್ಸ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ" ಎಂಬ ನಾಮಾಂಕಿತದಿಂದ ನಗರದ ನರಸರಾಜ ರಸ್ತೆಯಲ್ಲಿ ಸಹಕಾರಿ ಸಂಸ್ಥೆಯನ್ನು ಆರಂಭಿಸಿದರು. ವಿಶೇಷ ಅಂದರೆ ಪ್ರಾರಂಭ ವರ್ಷದಿಂದ ನಿರಂತರವಾಗಿ ಲಾಭಗಳಿಸುತ್ತಾ ಬಂದಿದೆ. ಮುಂದೆ ಇದೇ ಬ್ಯಾಂಕಿನ ಹೆಸರನ್ನು ದಿನಾಂಕ: 26–04–1976 ರಲ್ಲಿ "ದಿ ದಾವಣಗೆರೆ – ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ ಎಂದು ಬದಲಾಯಿಸಲಾಯಿತು.

ದಿ ದಾವಣಗೆರೆ – ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸ್ಥಾಪನೆಯ ಚಿಂತನೆಗೆ ಇನ್ನೊಂದು ಮೂಲ ಕಾರಣವೆಂದರೆ, ಈ ಹಿಂದೆಯೇ ಅಸ್ತಿತ್ವದಲ್ಲಿದ್ದ ಕೆಲವು ಬ್ಯಾಂಕುಗಳು ವ್ಯಾಪಾರಿಗಳ ಬ್ಯಾಂಕುಗಳಾಗಿದ್ದವು. ಸಾಮಾನ್ಯ ಕೆಳವರ್ಗದ ಜನತೆಗೆ ನಿಲುಕಲಾರದ, ಹತ್ತಿರವೂ ಸುಳಿಯದ ಬ್ಯಾಂಕುಗಳಾಗಿದ್ದವು. ಜೀವನ ದುಡಿಮೆಯ ಅಭಿವೃದ್ಧಿಯ ಆಕಾಂಕ್ಷೆಯನ್ನು ಹೊಂದಿದ್ದ ಸಾಮಾನ್ಯ ವರ್ಗದ, ಕೆಳವರ್ಗದ ಸಣ್ಣ ಕೈಗಾರಿಕೋದ್ಯಮಿಗಳ, ಸಣ್ಣ, ಅತಿ ಸಣ್ಣ ವ್ಯಾಪಾರಿಗಳ, ಆಸ್ತಿರಹಿತ, ಭದ್ರತೆರಹಿತ ವ್ಯಾಪಾರ ಉದ್ದಿಮೆದಾರರು ಮುಂತಾದ ಜನ ಸಾಮಾನ್ಯ ವರ್ಗದವರಿಗೆ ಬ್ಯಾಂಕಿನ ಸೇವಾ ಸೌಲಭ್ಯಗಳು ಅಷ್ಟಾಗಿ ದೊರಕುತ್ತಿರಲಿಲ್ಲ. ಇಂತಹ ಆಸಕ್ತ ಸಾರ್ವಜನರಿಗೆ ಆರ್ಥಿಕ ಭದ್ರತೆ ನೀಡಬೇಕೆನ್ನುವ ಘನ ಉದ್ದೇಶ ಹಾಗೂ ಹೊಸ ಆಶಾಕಿರಣದೊಂದಿಗೆ ದಿ ದಾವಣಗೆರೆ – ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸ್ಥಾಪಿಸಲು ನಿರ್ಧರಿಸಲಾಯಿತು.

ಬ್ಯಾಂಕಿನ ಶಾಖೆಗಳು : ಬ್ಯಾಂಕು ನಿರಂತರ ಅಭಿವೃದ್ಧಿ ಹೊಂದುತ್ತಾ ತನ್ನ ಎರಡನೇ ಶಾಖೆಯನ್ನು ಕೈಗಾರಿಕಾ ನಗರ ಮತ್ತು ದಕ್ಷಿಣ ಕಾಶಿ ಎಂದು ಹೆಸರು ಪಡೆದಿರುವ ಹರಿಹರದಲ್ಲಿ, ದಾವಣಗೆರೆಯ ವಿನೋಬನಗರ ಪಿ.ಬಿ. ರಸ್ತೆಯಲ್ಲಿ ಮೂರನೇ ಶಾಖೆಯನ್ನು, ಬ್ಯಾಂಕಿನ ನಾಲ್ಕನೇ ಶಾಖೆಯನ್ನು ದಿನಾಂಕ:18–

12–1992 ರಂದು ನಗರದ ತೆಂಗಿನಕಾಯಿ ಈರುಳ್ಳಿ ಮಾರುಕಟ್ಟೆ ಪ್ರದೇಶದಲ್ಲಿ ಸದಸ್ಯರ ನಾಗರೀಕರ ಪ್ರೋತ್ಸಾಹದಿಂದ ದಿನಾಂಕ:28–12–1994 ರಂದು ಐದನೇ ಶಾಖೆಯನ್ನು ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿ ತದನಂತರದಲ್ಲಿ 2005 ರಲ್ಲಿ ಸದರಿ ಶಾಖೆಯನ್ನು ಹರಿಹರದಲ್ಲಿನ ಮುಖ್ಯ ಶಾಖೆಯೊಂದಿಗೆ ವಿಲೀನಗೊಳಿಸಲಾಯಿತು. ದಾವಣಗೆರೆಯ ಕೆ.ಟಿ.ಜೆ. ನಗರ ನಾಗರೀಕರ ನಗರ ಶಾಖೆಯನ್ನು ಇದೇ ರೀತಿ

ಬ್ಯಾಂಕಿನ ಪ್ರಗತಿಯ ಅಂಕಿ-ಅಂಶ (ರೂ. ಲಕ್ಷಗಳಲ್ಲಿ)	
ವಿವರಗಳು	31-03-2024
ಸದಸ್ಯರುಗಳು	11396
ಷೇರು ಬಂಡವಾಳ	615.44
ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು	6025.67
ಠೇವಣಿಗಳು	35203.81
ಸಾಲ ಮತ್ತು ಮುಂಗಡಗಳು	28761.67
ಸಂಚಯಗಳು	9487.21
ದುಡಿಯುವ ಬಂಡವಾಳ	42775.01
ಲಾಭ	586.17
ಲೆಕ್ಕಪರಿಶೋಧನಾ ವರ್ಗ	ಎ

ಬ್ಯಾಂಕಿನ ಎಂಟನೇ ಶಾಖೆಯನ್ನು ದಾವಣಗೆರೆ ನಗರದ ಎಂ.ಸಿ.ಸಿ. 'ಎ' ಬ್ಲಾಕ್ ರಾಮಕೃಷ್ಣ ಆಶ್ರಮದ ಎದುರಿನಲ್ಲಿ. ಬ್ಯಾಂಕಿನ ಒಂಬತ್ತನೇ ಶಾಖೆಯನ್ನು ನಗರದ ವಿದ್ಯಾನಗರದ ನೂತನ ಕಾಲೇಜ್ ರಸ್ತೆಯಲ್ಲಿ ಬ್ಯಾಂಕಿನ ಹತ್ತನೇ ಶಾಖೆಯನ್ನು ನಗರದ ಸರಸ್ವತಿ ಬಡಾವಣೆಯ ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆಯಲ್ಲಿ ದಾವಣಗೆರೆಯ ಶಾಮನೂರು, ಶಿವಪಾರ್ವತಿ ಬಡಾವಣೆ, ಜೆ.ಹೆಚ್. ಪಟೇಲ್ ಬಡಾವಣೆ, ಡಾಲರ್ಸ್ ಕಾಲೋನಿ ಮುಂತಾದ ಭಾಗದ ನಾಗರೀಕರಿಗೆ ಬ್ಯಾಂಕಿಂಗ್ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಅತೀ ಶೀಘ್ರದಲ್ಲಿಯೇ ಬ್ಯಾಂಕಿನ 11ನೇ ಶಾಖೆಯನ್ನು ಪ್ರಾರಂಭಿಸಲು ಬ್ಯಾಂಕು ಕಾರ್ಯೋನ್ಮುಖವಾಗಿದೆ.

ಬ್ಯಾಂಕಿನ ಸೇವೆಗಳು : ಯು.ಪಿ.ಐ. ಪ್ಲಾಟ್ ಫಾರಂ ಅನ್ನು ಜಾರಿಗೆ ತಂದ ದಾವಣಗೆರೆ ಜಿಲ್ಲೆಯ ಪ್ರಪ್ರಥಮ ಪಟ್ಟಣ ಸಹಕಾರಿ ಬ್ಯಾಂಕ್ ಎಂಬ ಹೆಗ್ಗಳಿಕೆ ಬ್ಯಾಂಕಿನದ್ದು, .ಸುವರ್ಣ ಮಹೋತ್ಸವ ಆಚರಣೆಯಲ್ಲಿರುವ ಬ್ಯಾಂಕಿಗೆ ಹೆಚ್ಚಿನ ಆರ್ಥಿಕ ದೃಢತೆ ಮತ್ತು ಬಲ ನೀಡಲು ಆಡಳಿತ ಮಂಡಲಿ ಸರ್ವ ಪ್ರಯತ್ನ ಮಾಡುತ್ತಿದೆ. ಹೊಸ ಅವಿಷ್ಕಾರದ ಬ್ಯಾಂಕಿಂಗ್ ಸೇವೆಯ ಜೊತೆಗೆ ತಾಂತ್ರಿಕತೆಯ ಅಳವಡಿಕೆಯಲ್ಲಿ ಬ್ಯಾಂಕು ಮುಂಚೂಣಿಯಲ್ಲಿದೆ. ಗ್ರಾಹಕರಿಗೆ ಇನ್ನೂ ಉತ್ತಮ ಸೇವೆಗಳನ್ನು ನೀಡುವ ನಿಟ್ಟಿನಲ್ಲಿ ನಿರಂತರ ಪರಿಶ್ರಮದಲ್ಲಿದೆ. ಬ್ಯಾಂಕು ದಾವಣಗೆರೆ – ಹರಿಹರ ನಾಗರೀಕರ ಪ್ರೋತ್ಸಾಹದಿಂದ ದಿನೇ ದಿನೇ ಅಭಿವೃದ್ಧಿ ಹೊಂದಲು ಅಂದಿನ ಆಡಳಿತ ಮಂಡಳಿ ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಶ್ರೇಯೋಭಿವೃದ್ಧಿಗಾಗಿ ಅವಿರತವಾಗಿ ಸೇವೆ ಸಲ್ಲಿಸಿದ ಕೆಲವರಲ್ಲಿ ಕೀರ್ತಿಶೇಷರಾದ ಎನ್.ಎಂ.ಜೆ.ಬಿ. ಆರಾಧ್ಯರವರು ಮತ್ತು ತಂಡ ಅಂದಿನಿಂದ 2017ರವರೆಗೆ ಕಠಿಣ ಹಾಗೂ ದೃಢ ಸಂಕಲ್ಪದಿಂದ ಬ್ಯಾಂಕಿನ ಪ್ರಗತಿಗಾಗಿ ದುಡಿದಿದ್ದಾರೆ. ಇವರ ಅವಿಸ್ಮರಣೀಯ ಸೇವೆಯನ್ನು ಬ್ಯಾಂಕಿನ ಆಡಳಿತ ಮಂಡಳಿ ನೆನೆಸುತ್ತದೆ.

ದಾವಣಗೆರೆ ನಗರದ ಪ್ರತಿಷ್ಠಿತ ಪಟ್ಟಣ ಸಹಕಾರಿ ಬ್ಯಾಂಕಾಗಿ ಸದಸ್ಯರ ಹಾಗೂ ಗ್ರಾಹಕರ ಪ್ರೀತಿ ಗೌರವಕ್ಕೆ ಪಾತ್ರವಾಗಿದೆ. ಸದಸ್ಯರ ಮತ್ತು ಗ್ರಾಹಕರ ಅವಶ್ಯಕತೆಗಳು ಹಾಗೂ ಅನುಕೂಲಕ್ಕೆ ತಕ್ಕಂತೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವ ಜವಾಬ್ದಾರಿ ಬ್ಯಾಂಕಿನ ಮೇಲಿದೆ.

ವ್ಯವಹಾರಿಕ ಅಂಕಿ-ಅಂಶಗಳ ಆಧಾರದ ಸಾಮರ್ಥ್ಯ, ಸಧೃಡತೆ ಹಾಗೂ ಬೆಳವಣಿಗೆಯ ಮಾಪನದಿಂದ ಆರ್ಥಿಕ ಕ್ಷೇತ್ರ ಅದರಲ್ಲೂ ಬ್ಯಾಂಕಿಂಗ್ ಕ್ಷೇತ್ರ ಬಹುದೂರ ಸಾಗಿದೆ. ತಾಂತ್ರಿಕ ಸಾಮರ್ಥ್ಯ, ಡಿಜಿಟಲ್ ಸುರಕ್ಷತೆ, ಅನುತ್ಪಾದಕ ಆಸ್ತಿಗಳ ವರ್ಗೀಕರಣ, ಸಿಬ್ಬಂದಿಗಳ ಕೌಶಲ್ಯ, ಆಡಳಿತ ಮಂಡಳಿಯ ಸಂಯೋಜನೆ, ವ್ಯವಸ್ಥಾಪನಾ ಮಂಡಲಿ ರಚನೆ ಹೀಗೆ ಹಲವು ಬಗೆಯ ಹೊಸ ಮಾಪಕಗಳ ಮೂಲಕ ಇಂದು ಬ್ಯಾಂಕುಗಳ ಸಾಮರ್ಥ್ಯವನ್ನು ಅಳೆಯಲಾಗುತ್ತದೆ. 1972-73ರಲ್ಲಿ ಪ್ರಾರಂಭವಾದ ಬ್ಯಾಂಕ್ ಅದೇ ಸಾಲಿನಲ್ಲಿ 274 ರೂ.ಗಳ ಲಾಭ ಸಂಪಾದಿಸಿತ್ತು. ಪ್ರಸ್ತುತ 2023-2024 ರ ಸಾಲಿಗೆ 5.86 ಕೋಟಿ ರೂ.ಗಳ ಲಾಭ ಗಳಿಕೆಯ ಮೂಲಕ ಮುನ್ನಡೆದಿದೆ ಎಂದರೆ ಬ್ಯಾಂಕಿನ ಪ್ರಗತಿ ಅಭಿವೃದ್ಧಿಯ ಹಾದಿ ಆರೋಗ್ಯಪೂರ್ಣವಾಗಿದೆ ಎಂಬ ಅಂಶ ಗೊತ್ತಾಗುತ್ತದೆ. ಅದರಂತೆ ಸದಸ್ಯರ ಸಂಖ್ಯೆಯು ಸಹ 11396ಕ್ಕೆ ಹೆಚ್ಚಿರುವುದು ಬ್ಯಾಂಕಿನ ಜನಪ್ರಿಯತೆ, ವಿಶ್ವಾಸ ಸಹಕಾರವನ್ನು ಪ್ರತಿಬಿಂಬಿಸುತ್ತದೆ. ಈ ಮೂಲಕ 'ಸಹಕಾರವೇ ಶಕ್ತಿ- ಸಹಕಾರವೇ ಪ್ರಗತಿ' ತತ್ವವನ್ನು ಬ್ಯಾಂಕ್ ತನ್ನ ಕಾರ್ಯವೈಖರಿಯೊಂದಿಗೆ ಪಾಲಿಸಿಕೊಂಡು ಬಂದಿರುವುದು ಬ್ಯಾಂಕಿನ 50 ವರ್ಷಗಳ ಹಾದಿಯನ್ನು ವೀಕ್ಷಿಸಿದಾಗ ಕಂಡುಬರುತ್ತದೆ. ಸದಸ್ಯರುಗಳೇ ಬ್ಯಾಂಕಿನ ರೂವಾರಿಗಳು ಎಂಬುದನ್ನು ಮನಗಂಡ ದಿ|| ಎನ್.ಎಂ.ಜೆ.ಬಿ. ಆರಾಧ್ಯರ ಕನಸು ನನಸಾಗಿಸುವತ್ತಾ ಬ್ಯಾಂಕಿನ ಅಭಿವೃದ್ಧಿಗಾಗಿ ಆಡಳಿತ ಮಂಡಳಿ ಸದಸ್ಯರುಗಳು ಬದ್ಧತೆಯ ಮಾರ್ಗದರ್ಶನ ಮತ್ತು ಅಧಿಕಾರಿ/ಸಿಬ್ಬಂದಿಗಳು ದಕ್ಷತೆಯೊಂದಿಗೆ ಬ್ಯಾಂಕಿನ ಅಭಿವೃದ್ಧಿಗೆ ಅವಿರತವಾಗಿ ಶ್ರಮಿಸುತ್ತಿದ್ದಾರೆ.

ಆರಾಧ್ಯರ ಬ್ಯಾಂಕ್ ಎಂದೇ ಜನಪ್ರಿಯ

ದಾವಣಗೆರೆಗೆ ಆಗಮಿಸುವ ಸಾರ್ವಜನಿಕರಾಗಲಿ, ಸಹಕಾರಿಗಳಾಗಲಿ ದಿ ದಾವಣಗೆರೆ-ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಗೆ ತೆರಳಬೇಕಾದವರು ಬ್ಯಾಂಕಿನ ವಿಳಾಸಕ್ಕಿಂತ ಆರಾಧ್ಯರ ಬ್ಯಾಂಕ್ ಎಲ್ಲಿದೆ ಎಂದು ಕೇಳಿದರೆ ಆಟೋ ರಿಕ್ಷಾದವರಾಗಲೀ, ಜನರಾಗಲೀ ಸೀದಾ ಬ್ಯಾಂಕಿನ ದಾರಿ ತೋರಿಸುತ್ತಾರೆ. ರಿಕ್ಷಾದವರು ನೇರ ಬ್ಯಾಂಕಿನ ಬಳಿಗೆ ಕರೆದೊಯ್ಯುತ್ತಾರೆ. ಅಷ್ಟರಮಟ್ಟಿಗೆ ಈ ಬ್ಯಾಂಕು ಆರಾಧ್ಯರ ಬ್ಯಾಂಕ್ ಎಂದು ಜನಪ್ರಿಯತೆಯನ್ನು ಗಳಿಸಿದೆ ಬ್ಯಾಂಕಿನ ಕಾರ್ಯವೈಖರಿಯ ಬಗ್ಗೆ ಸಂತಸವೆನಿಸುತ್ತದೆ.

ಬ್ಯಾಂಕಿನ ಶ್ರೇಯೋಭಿವೃದ್ಧಿಗೆ ಕೈಗೊಂಡ ಕೆಲಸ ಕಾರ್ಯಗಳು

- **ಮಾಹಿತಿ ತಂತ್ರಜ್ಞಾನ :** ಬ್ಯಾಂಕಿಂಗ್ ಸೇವೆಗಳಲ್ಲಿ ಸಂಭವಿಸಬಹುದಾದ ಸೈಬರ್ ದಾಳಿಯನ್ನು ತಡೆಗಟ್ಟುವ ತಂತ್ರಜ್ಞಾನ ಸುಧಾರಣೆ, ಉತ್ತಮ ಕಾರ್ಯದಕ್ಷತೆ, ಹೆಚ್ಚಿನ ನಿಯಂತ್ರಣ ಹಾಗೂ ಸವಾಲುಗಳನ್ನು ಎದುರಿಸುವ ಸಲುವಾಗಿ ಕೋರ್ ಬ್ಯಾಂಕಿಂಗ್ ಮೇಲ್ದರ್ಜೆಗೆ ಏರಿಸಲಾಗಿದೆ.
- **ಡಿಜಿಟಲ್ ಪೇಮೆಂಟ್ ಮಾಹಿತಿ :** ತಾಂತ್ರಿಕತೆಯ ಅಳವಡಿಕೆಯಲ್ಲಿ ಬ್ಯಾಂಕು ಮಂಚೂಣಿಯಲ್ಲಿದ್ದು, ಯು.ಪಿ.ಐ. ಪ್ಲಾಟ್ ಫಾರಂ ಅನ್ನು ಜಾರಿಗೆ ತಂದ ದಾವಣಗೆರೆ ಜಿಲ್ಲೆಯ ಪ್ರಪ್ರಥಮ ಅರ್ಬನ್ ಸಹಕಾರಿ ಬ್ಯಾಂಕ್ ಎಂಬ ಹೆಗ್ಗಳಿಕೆ ನಮ್ಮದು. ಇದರ ಜೊತೆಗೆ ಮೊಬೈಲ್ ಬ್ಯಾಂಕಿಂಗ್, ಎನ್.ಎ.ಸಿ.ಹೆಚ್., ಬಿ.ಬಿ.ಪಿ.ಎಸ್., ಐ.ಎಂ.ಪಿ.ಎಸ್., ಎ.ಟಿ.ಎಂ. (ನಗದು ತುಂಬುವ & ಪಡೆಯುವ ಸೌಲಭ್ಯ) ಪಿ.ಓ.ಎಸ್., ಇ-ಕಾಮರ್ಸ್, ಮುಂತಾದ ಡಿಜಿಟಲ್ ಸೇವೆಗಳನ್ನು ಗ್ರಾಹಕರಿಗೆ ಒದಗಿಸಲಾಗಿದೆ.
- ಸದಸ್ಯರ ಮರಣೋತ್ತರ ನಿಧಿಯಿಂದ ಮರಣ ಹೊಂದಿದಂತಹ ಸದಸ್ಯರುಗಳ ವಾರಸುದಾರರಿಗೆ ರೂ. 10,000/-ಗಳನ್ನು ನೀಡಲಾಗುತ್ತಿದೆ. ಕಳೆದ ಏಳು ವರ್ಷಗಳ ಅವಧಿಯಲ್ಲಿ ಒಟ್ಟು 734 ಜನ ಮೃತರ ವಾರಸುದಾರರಿಗೆ ರೂ.70,19,700 ಹಣವನ್ನು ನೀಡಲಾಗಿದೆ.
- ಬ್ಯಾಂಕಿನ ಎಲ್ಲಾ ಸದಸ್ಯರುಗಳಿಗೆ ರೂ. 1,00,000 ಗಳವರೆಗೆ ಅಪಘಾತ ವಿಮೆಯನ್ನು ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿಯಲ್ಲಿ ಮಾಡಿಸಲಾಗಿದೆ. ಕಳೆದ ಏಳು ವರ್ಷಗಳಲ್ಲಿ ಅಫಘಾತದಲ್ಲಿ ಮರಣ ಹೊಂದಿದ 6 ಜನ ಸದಸ್ಯರ ವಾರಸುದಾರರಿಗೆ ರೂ.6,00,000 ವಿಮಾ ಹಣ ನೀಡಲಾಗಿದೆ.

ಆಡಳಿತ ಮಂಡಳಿ ಸದಸ್ಯರುಗಳು

SREE SUBRAMANYESWARA CO-OPERATIVE BANK LIMITED

Estd : 1971 (R.B.I. Licence No.UBD KA 550 P)
H.O. & A.O., "Rajatha Bhavana" No.106, R.V.Road, V.V.Puram, Bangalore-560 004
e-mail: sscbank@yahoo.com, website: www.subcobank.com, PH: 080-22422464/1/3

50 2024 GOLDEN JUBILEE Celebration

BRANCHES		
1.	V.V.PURAM BRANCH B-04	Ph: 26622462, 22422461/63
2.	AVENUE ROAD (K G Road) BRANCH B-09	Ph: 22262722, 22281261, 22260043
3.	VIJAYANAGAR BRANCH B-40	Ph: 23400993, 23206878, 23147896
4.	SUBRAMANYANAGAR BRANCH B-21	Ph: 23321252, 23426677, 23322570
5.	PADMANABHANAGAR BRANCH, B-85	Ph: 26694660, 26797274
6.	KACHARAKANAHALLI BRANCH, B-84	Ph: 25490999, 25487147
7.	YESHWANTHAPURA BRANCH, B-54	Ph: 23378136 / 37
8.	NAGARABHAVI BRANCH, B-72	Ph: 23183787 / 88
9.	KONANKUNTE BRANCH, B-62	Ph: 26320086 / 87

FINANCIAL HIGHLIGHTS AS ON 31-03-2024	
Number of Members	34325
Own Funds	Rs.94.62 Crores
Total Business	Rs.514.65 Crores
Deposits	Rs.325.22 Crores
Advances	Rs.189.43 Crores
Credit Facilities	Max. Rs.3.00 Crores per Individual
Net profit after Tax	Rs.8.83 Crores
Capital Adequacy	26.61%
NPA	3.05%

INTEREST RATES w.e.f 01-05-2024

DEPOSITS			LOANS	p.a. *
PERIOD	GENERAL	Sr. Citizen	Personal Loans	12% & 16%
			Housing Loans	9.00% to 9.50%
30 days to 180 days	5.50%	5.50%	Vehicle Loans	11.00% to 12.00%
181 days to 365 days	6.50%	6.50%	Gold Loan (22 carat)	8.90%
Above 1 year and upto 2 years	8.10%	8.60%	S.S.I. Loans (SME Loan)	11.00%
			Business	11.00%
Above 2 year and upto 3 years	7.50%	8.00%	Self-Employment	10.50%
			Education	11.50%
above 3 years	7.25%	7.75%	Mortgage Loan	11.50% to 12.00%
Savings Bank A/c	3% on daily balance		Loan on LIC/NSC/KVP	10.00%
* Senior Citizen (person completed 60 years in age)			MMP Loans	13.00%

SALIENT FEATURES:

- RTGS / NEFT/NACH and E-stamping facility available.
- * Lockers facilities available
- * Deposit up to Rs. 5.00 Lakhs is Guaranteed under the Deposit Insurance Scheme
- * Attractive Deposit schemes to the choice of all classes of people
- * CLEAN & Secured Financial assistance to MEMBERS of all classes for Legitimate credit needs
- * Prompt Personal & Efficient services always.
- Free Personal Accident Insurance Coverage for Personal Loanees.

BOARD OF DIRECTORS

Sri.Dr.K.M.Rangadhama Setty - Founder President
Sri.Vijaya Sarathi D.R. - Vice President

Sri.CA Venkatachalapathy B.L.
Sri.Rudramurthy P
Sri.Sathyamurthy
Sri.Nanjegowda
Sri.Suresh Babu M.K.

Smt.Mahalakshmi
Smt.Annnapurnamma
Smt.Jayalakshmi G Totager
Sri.Raveendra P.K.
Sri.Ravi K

Sri.Maruthi H
Sri.Nagabhushan S.A.
Sri.Palanetrappa M.C.

Sri. K.N.Krishnaiah Setty - I/c General Manager

ಸದಸ್ಯರ ಆರ್ಥಿಕ ಸ್ವಾವಲಂಬನೆಗೆ ನೆರವು

109 ವರ್ಷಗಳ ಸಂತೃಪ್ತ ಸೇವೆಯಲ್ಲಿ ದಿ. ಹೊಸಪೇಟೆ ಕೋ–ಆಪರೇಟಿವ್ ಸಿಟಿ ಬ್ಯಾಂಕ್ ನಿ.,

ಸಮಾಜದ ಎಲ್ಲಾ ವರ್ಗದ ಜನರಿಗೆ ಇಂದು ಆರ್ಥಿಕ ವ್ಯವಹಾರ ಹೊರತುಪಡಿಸಿ ಜೀವಿಸುವುದು ಅಸಾಧ್ಯವಾದ ವಿಚಾರವಾಗಿದೆ. ಬ್ಯಾಂಕ್ ವ್ಯವಹಾರ ಪ್ರತಿಯೊಬ್ಬ ವ್ಯಕ್ತಿಯ ಅವಿಭಾಜ್ಯ ಎಂದರೆ ತಪ್ಪಾಗಲಾರದು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಹಕಾರಿ ಬ್ಯಾಂಕುಗಳ ಪಾತ್ರ ಕೂಡ ಬಹಳ ಪ್ರಮುಖವಾಗಿದೆ. ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳು ಹಾಗೂ ಸಹಕಾರಿ ಬ್ಯಾಂಕುಗಳು ಒಂದೇ ನಾಣ್ಯದ ಎರಡು ಮುಖಗಳು. ಸಹಕಾರ ಎನ್ನುವ ಪದದ ಮೂಲತತ್ವದ ಮೇಲೆ ಪ್ರಾಚೀನ ಕಾಲದಿಂದಲೂ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಗಳ ಮೂಲಕ ಮಾನವನ ಜೀವನದಲ್ಲಿ ಎಲ್ಲಾ ರೀತಿಯಲ್ಲೂ ನಿರಂತರವಾಗಿ ಸಾಗಿಬಂದಿದೆ.

"ಹನಿ ಹನಿ ಕೂಡಿದರೆ ಹಳ್ಳ, ತೆನೆ ತೆನೆ ಕೂಡಿದರೆ ಬಳ್ಳ" ಎಂಬ ಗಾದೆ ಮಾತಿನಂತೆ ಸಹಕಾರವೆಂಬುದು ಮಾನವ ಸಮಾಜಕ್ಕೆ ಅತ್ಯಂತ ಮಹತ್ವದಾಗಿದೆ. ಸಮಾನ ಮನಸ್ಕರು ಒಂದು ಗೂಡಿ "ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ" ಎಂಬ ಸಹಕಾರ ತತ್ವವನ್ನು ಆದರ್ಶವಾಗಿಟ್ಟುಕೊಂಡು ಆರ್ಥಿಕವಾಗಿ ಸಂಕಷ್ಟದಲ್ಲಿದ್ದ ಜನರಿಗೆ ಸಹಕಾರ ಕ್ಷೇತ್ರದ ಮೂಲಕ ನೆರವು ನೀಡಿ, ಅವರನ್ನು ಸ್ವಾವಲಂಬಿಗಳನ್ನಾಗಿಸುವಲ್ಲಿಯೂ ಸಹ ಅತ್ಯಂತ ಪ್ರಭಾವಶಾಲಿ ಮತ್ತು ಪರಿಣಾಮಕಾರಿಯಾದ ಕ್ಷೇತ್ರ "ಸಹಕಾರ"ಎಂಬುದನ್ನು ನಿರೂಪಿಸಿದೆ.

ಕರ್ನಾಟಕವು ಸಹಕಾರ ಚಳವಳಿ ರಾಷ್ಟ್ರದಲ್ಲೇ ಮುಂಚೂಣಿಯಲ್ಲಿದ್ದು, ಸುಮಾರು 47 ಸಾವಿರ ವಿವಿಧ ರೀತಿಯ ಸಹಕಾರ ಸಂಸ್ಥೆಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಚಳವಳಿಯ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿವೆ. ಪಟ್ಟಣ ಸಹಕಾರ ಬ್ಯಾಂಕುಗಳ ವಲಯ ಪಟ್ಟಣ ಪ್ರದೇಶದ ಜನರಿಗೆ ಆರ್ಥಿಕವಾಗಿ ಅಗತ್ಯವಿರುವ ಹಣಕಾಸಿನ ನೆರವನ್ನು ನೀಡುವುದಾಗಿದೆ. ಈಗಾಗಲೇ ಪಟ್ಟಣ ಬ್ಯಾಂಕುಗಳು ಕೋಟ್ಯಾಂತರ ಜನರ ಸ್ವಾವಲಂಬನೆಗೂ ಕಾರಣವಾಗಿದೆ ಎಂಬುವುದು ಸಂತಸದ ವಿಷಯ.

ನಮ್ಮ ರಾಜ್ಯದಲ್ಲಿ ಈಗಾಗಲೇ 252 ಪಟ್ಟಣ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ಇದರಿಂದ ಸಾರ್ವಜನಿಕ ವಲಯ ಮತ್ತು ಖಾಸಗಿ ಕ್ಷೇತ್ರ ಹಾಗೂ ಸಹಕಾರಿ ಕ್ಷೇತ್ರದ ಪೈಪೋಟಿಯನ್ನು ಎದುರಿಸಲು ಸಾಧ್ಯವಾಗುತ್ತದೆ ಹಾಗೂ ಅತಿ ಸಣ್ಣ ಹಿಡುವಳಿದಾರರು, ಸಣ್ಣ ವ್ಯಾಪಾರಿಗಳು, ಬೀದಿ ಬದಿ ವ್ಯಾಪಾರಿಗಳು, ಚಿಲ್ಲರೆ ಮಾರಾಟಗಾರರು ಸಾಮಾಜಿಕವಾಗಿ, ಆರ್ಥಿಕವಾಗಿ, ಔದ್ಯೋಗಿಕವಾಗಿ ಮುಂದುವರೆಯಲು ಸಾಧ್ಯವಾಗುತ್ತದೆ. ಇಂತಹ ಆಶಯಗಳನ್ನೊಳಗೊಂಡು ಸಮಾಜದ ಜನರಿಗೆ ನೆರವಾಗಲೆಂದೇ ಸ್ಥಾಪನೆಯಾದುದು. ಇಂದಿನ ವಿಜಯನಗರ ಜಿಲ್ಲೆಯ ಹೊಸಪೇಟೆ ನಗರದ "ದಿ.ಹೊಸಪೇಟೆ ಕೋ–ಆಪರೇಟಿವ್ ಸಿಟಿ ಬ್ಯಾಂಕ್" ಆಗಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ.

ಬ್ಯಾಂಕ್ ಸಾಗಿ ಬಂದ ದಾರಿ : ಅಂದಿನ ಆಡಳಿತ ಮಂಡಳಿಯ ಎಲ್ಲ ಸಮಾನ ಮನಸ್ಕ ಸದಸ್ಯರ ದೂರದೃಷ್ಟಿಯ ಪ್ರತೀಕವಾಗಿ ಎಲ್ಲರ ಒತ್ತಾಸೆಯಿಂದ ಬ್ಯಾಂಕ್ ಸ್ಥಾಪನೆಗೊಂಡಿತು. ಹೊಸಪೇಟೆಯ ಹಿರಿಯರಾದ ಬೂದಿಹಾಳ ಗೋಪಾಲಾಚಾರ್ಯರು ಇದರ ಸಂಸ್ಥಾಪಕ ಅಧ್ಯಕ್ಷರಾಗಿ ಬ್ಯಾಂಕಿಗೊಂದು ಭದ್ರ ತಳಹದಿಯನ್ನು ಹಾಕಿದರು. ಆಗ ಬ್ಯಾಂಕಿನ ಪ್ರತಿ ಶೇರಿನ ಮುಖಬೆಲೆಯು ಎರಡಾಣೆಯಿಂದ ಪ್ರಾರಂಭಗೊಂಡು, ಇಂದು ಒಂದು ಶೇರಿನ ಮುಖ ಬೆಲೆಯು 1000 ರೂಪಾಯಿಗಳಿಗೆ ಬಂದು ತಲುಪಿದೆ. ದಿ.ಹೊಸಪೇಟೆ ಕೋ–ಆಪರೇಟಿವ್

ಸಿಟಿ ಬ್ಯಾಂಕ್ ಲಿ. 1915ರಲ್ಲಿ ಹೊಸಪೇಟೆ ನಗರದಲ್ಲಿ ಸ್ಥಾಪಿತಗೊಂಡು ಇದೀಗ ಯಶಸ್ವಿ 109 ವಸಂತಗಳನ್ನು ಕಂಡು ಶತಮಾನೋತ್ಸವವನ್ನು ಆಚರಿಸಿಕೊಂಡು ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿದೆ.

ಬ್ಯಾಂಕ್ ಪ್ರಾರಂಭಗೊಂಡಾಗ ಖಾಸಗಿ ಕಟ್ಟಡದಲ್ಲಿ ಪ್ರತಿ ತಿಂಗಳು 5 ರೂಪಾಯಿಗೆ ಬಾಡಿಗೆ ನೀಡಿ ಕಾರ್ಯಾರಂಭವನ್ನು ಮಾಡಿತು. ಮುಂದೆ ಬಂದ ಆಡಳಿತ ಮಂಡಳಿಯ ಅಧ್ಯಕ್ಷರಾದ ಎಮ್. ಸುಬ್ರಮಣಿಯನ್ ಹಾಗೂ ಸದಸ್ಯರ ದೃಢಸಂಕಲ್ಪದಿಂದ ಪಟೇಲ ನಗರದಲ್ಲಿ ತನ್ನದೇ ಆದ ಒಂದು ಭವ್ಯ ಕಟ್ಟಡವನ್ನು ಹೊಂದಿ ದಿನಾಂಕ: 15–04–1954 ರಲ್ಲಿ ಸ್ಥಳಾಂತರಗೊಂಡಿತು.

ಸಮಯ ಪಾಲನೆ, ಕೆಲಸದ ಆದ್ಯತೆ ಮತ್ತು ಸಕಾರಾತ್ಮಕ ಚಿಂತನೆ ಇವು ಸಹಕಾರ ಸಂಘ–ಸಂಸ್ಥೆಗಳ ಆರ್ಥಿಕ ಬೆಳವಣಿಗೆಗೆ ಮೂಲ ಪ್ರೇರಕ. ಇವುಗಳ ಪಾಲನೆಯಿಂದ ಸಾಧಿಸಬಹುದೆಂಬುದನ್ನು ತನ್ನ ಸುದೀರ್ಘ 109 ವರ್ಷಗಳನ್ನು ಪೂರೈಸಿ ಸಾಧನೆಯ ಹಾದಿಯಲ್ಲಿದೆ. ಇಲ್ಲಿಯವರೆಗೂ ಸೇವೆ ಸಲ್ಲಿಸಿದ 36 ಜನ ಅಧ್ಯಕ್ಷರು ಹಾಗೂ ಸರ್ವ ಸದಸ್ಯರುಗಳ ಸಹಾಯ ಸಹಕಾರ ಹಾಗೂ ಸಿಬ್ಬಂದಿ ವರ್ಗದವರ ನಿರಂತರ ಪ್ರಾಮಾಣಿಕ, ನಿಸ್ವಾರ್ಥ ಸೇವೆಯಿಂದ ಬ್ಯಾಂಕ್ ಯಶಸ್ಸು ಸಾಧಿಸಿದೆ.

ಬ್ಯಾಂಕಿನಲ್ಲಿ ಪ್ರಸ್ತುತ ಒಟ್ಟು 4001 ಸದಸ್ಯರೊಂದಿಗೆ 2023–24 ವಾರ್ಷಿಕ ವರದಿಯ ಪ್ರಕಾರ ರೂ.253.91 ಲಕ್ಷ ಶೇರು ಬಂಡವಾಳ ಹೊಂದಿದೆ. ನಿಧಿಗಳು 792.93 ಲಕ್ಷ ರೂ.ಗಳಿದ್ದು, 8123.26 ಲಕ್ಷ ರೂ.ಗಳು ಠೇವಣಿಯನ್ನು ಹೊಂದುವ ಮೂಲಕ 5064.56 ಲಕ್ಷ ರೂ.ಗಳು ಸಾಲ ನೀಡುವುದರ ಮುಖಾಂತರ 89.70 ಲಕ್ಷ ರೂ.ಗಳ ಲಾಭ ಗಳಿಸಿ ಪ್ರಗತಿಯಲ್ಲಿ ಸಾಗುತ್ತಿರುವುದು ಸ್ವಾಗತಾರ್ಹವಾದ ಸಂಗತಿಯಾಗಿದೆ.

ಬ್ಯಾಂಕಿನ ಮೂರು ವರ್ಷಗಳ ಪ್ರಗತಿ ಪಕ್ಷಿ ನೋಟ (ರೂ.ಲಕ್ಷಗಳಲ್ಲಿ)

ವರ್ಷ	2021–2022	2022–23	2023–24
ಸದಸ್ಯರು	3670	3691	4001
ಬಂಡವಾಳ ರೂ.	253.80	253.80	253.91
ಠೇವಣಿ ರೂ.	6483.71	7286.27	8123.26
ಸಾಲ ರೂ.	4123.62	4783.59	5064.56
ಲಾಭ ರೂ.	82.22	82.89	89.70
ಆಡಿಟ್ ವರ್ಗೀಕರಣ ಶ್ರೇಣಿ	ಅ	ಅ	ಅ

ಬ್ಯಾಂಕಿನಿಂದ ನೀಡುವ ಸಾಲ ಸೌಲಭ್ಯ : ವೇತನದಾರರಿಗೆ ಸಂಬಳಾದಾರಿತ, ಸಣ್ಣ/ಅತಿ ಸಣ್ಣ ಉದ್ದಿಮೆದಾರರಿಗೆ ವ್ಯವಹಾರಾಭಿವೃದ್ಧಿಗಾಗಿ ಜಾಮೀನು ಸಾಲ, ವ್ಯಾಪಾರಸ್ಥರು/ಉದ್ದಿಮೆದಾರರಿಗೆ ವ್ಯವಹಾರದ ಸ್ಥಾಪನೆಗಾಗಿ ಮಾಧ್ಯಮಾವಧಿ (ಭದ್ರತೆ) ಸಾಲ, ವಾಹನ ಖರೀದಿಗಾಗಿ ಸಾಲ, ಗೃಹಬಳಕೆ ವಸ್ತುಗಳ ಖರೀದಿಗೆ ಸಾಲ, ಕ್ಯಾಶ್ ಕ್ರೆಡಿಟ್/ ಓವರ್‌ಡ್ರಾಫ್ಟ್ ಸಾಲ, ಬಂಗಾರ ಆಭರಣಗಳ ಮೇಲೆ ಸಾಲ, ನಿವೇಶನ/ಕಟ್ಟಡ ಖರೀದಿಗಾಗಿ ಸಾಲ, ಗೃಹ ನಿರ್ಮಾಣ/ ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕಾಗಿ ಸಾಲ, ಯಂತ್ರೋಪಕರಣಗಳ ಖರೀದಿಗಾಗಿ ಸಾಲ. ಹೀಗೆ ತನ್ನ ಒಂದು ನೂರು ವರ್ಷಗಳ ಅವಧಿಯಲ್ಲಿ ಬ್ಯಾಂಕ್ ಹಲವಾರು ಏಳು–ಬೀಳುಗಳನ್ನು ಕಂಡು, ಇಲ್ಲಿಯವರೆಗೂ ಸೇವೆ ಸಲ್ಲಿಸಿರುವ ಎಲ್ಲ ಅಧ್ಯಕ್ಷರ ಬದ್ಧತೆಯುಳ್ಳ ಮಾರ್ಗದರ್ಶನದ ಕಾರ್ಯನಿರ್ವಹಣೆಯ ಫಲವಾಗಿ ಬ್ಯಾಂಕ್ ಸದಸ್ಯರ, ಗ್ರಾಹಕ ಸ್ನೇಹಿಯಾಗಿ ಬೆಳೆದು ನಿಂತಿದೆ. ಕಂಪ್ಲಿ ಪಟ್ಟಣದಲ್ಲಿ ಶಾಖೆಯನ್ನು ತೆರೆದು ತನ್ನ ಕಾರ್ಯವ್ಯಾಪ್ತಿಯನ್ನು ಕೂಡ ವಿಸ್ತರಿಸಿಕೊಂಡಿದೆ.

ಆಡಳಿತ ಮಂಡಳಿ ಸದಸ್ಯರು

ಡಿ.ಮಹಾಬಲೇಶ್ವರಯ್ಯ – ಅಧ್ಯಕ್ಷರು; ಡಿ.ಕನಕಾಚಲ – ಉಪಾಧ್ಯಕ್ಷರು; ಬಂಡೆ ರಂಗಪ್ಪ – ನಿರ್ದೇಶಕರು; ಎ.ಎಮ್.ಶ್ರೀನಿವಾಸ್ – ನಿರ್ದೇಶಕರು; ಬಿ.ಫಜಲ್ ಅಲಿ – ನಿರ್ದೇಶಕರು; ಜೆ.ಸೂರಪ್ಪ – ನಿರ್ದೇಶಕರು; ಗುಂಡಿ ಪ್ರಶಾಂತ್ – ನಿರ್ದೇಶಕರು

ಎನ್.ಪುಂಡಲೀಕ ಪ್ರಭು – ನಿರ್ದೇಶಕರು; ಸಿ.ದೊಡ್ಡ ಬಸಪ್ಪ – ನಿರ್ದೇಶಕರು; ಸಿ.ಆಶಂ – ನಿರ್ದೇಶಕರು; ಚಂದ್ರಶೇಖರ್.ಬಿ.ಎ – ನಿರ್ದೇಶಕರು; ಟಿ.ಜ್ಞಾನೇಶ್ವರ – ನಿರ್ದೇಶಕರು; ನೇತ್ರಾವತಿ ಸಂತೋಷ್ ಗೋಸಿ – ನಿರ್ದೇಶಕರು; ಅಗಳಿ ಸವಿತ – ನಿರ್ದೇಶಕರು; ಪ್ರಿಯಾಂಕ.ಪಿ.ಹೊಸಮನಿ – ನಿರ್ದೇಶಕರು

ಸುವರ್ಣ ಮಹೋತ್ಸವ ಸಂಭ್ರಮ
ದಿ ಗಾಂಧಿ ಗಂಜ ಕೋ-ಆಪರೇಟಿವ್ ಬ್ಯಾಂಕ್ ಲಿ, ಬೀದರ

ದಿ ಗಾಂಧಿ ಗಂಜ ಕೋ-ಆಪರೇಟಿವ ಬ್ಯಾಂಕ್ ಲಿ, ಬೀದರ ಇದು 50 ವರ್ಷಗಳಿಂದ ಸಹಕಾರ ತತ್ವದ ತಳಹದಿಯಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದು ಇದರ ಎಲ್ಲಾ ಶಾಖೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡುವ ಗುರಿಯನ್ನು ಹೊಂದಲಾಗಿದೆ, ಅದರಂತೆ ಈಗಾಗಲೇ ಭಾಲ್ಕಿ ಪಟ್ಟಣದಲ್ಲಿ ಬ್ಯಾಂಕು ಸ್ವಂತ ನಿವೇಶನ ಖರೀದಿಸಿ ಇದರ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

ದಿನಾಂಕ : 30–04–1974ರಂದು ಬೀದರ ನಗರದ ಗಾಂಧಿ ಗಂಜನ ವ್ಯಾಪಾರಸ್ಥರೆಲ್ಲ ಸೇರಿಕೊಂಡು ದಿ. ಮಹಾಂತಪ್ಪಾ ಮಡಕಿಯವರ ಅಧ್ಯಕ್ಷತೆಯಲ್ಲಿ ಕೇವಲ 189ಜನ ಸದಸ್ಯರಿಂದ ರೂ.1.82 ಲಕ್ಷ ಷೇರು ಬಂಡವಾಳ ಸಂಗ್ರಹಿಸಿ 30–08–1974ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1957ರ ಅನ್ವಯ ಸಹಕಾರ ಇಲಾಖೆಯಲ್ಲಿ ನೊಂದಾಯಿಸಲಾಯಿತು. ದಿನಾಂಕ : 14–02–1975ರಂದು ಭಾರತಿಯ ರಿಜರ್ವ ಬ್ಯಾಂಕಿನ ಅನುಮತಿ ಪಡೆದು ದಿ.ವೀರಶೆಟ್ಟಿ ಕುಶನೂರ ಅವರ ಅಮೃತ ಹಸ್ತದಿಂದಲೇ ಗಾಂಧಿ ಗಂಜನ ಬಸವೇಶ್ವರ ಮಂದಿರ ಕಟ್ಟಡದಲ್ಲಿ ಬ್ಯಾಂಕ್ ಉದ್ಘಾಟಿಸಲಾಯಿತು. ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾಗಿ ದಿ. ಮಹಾಂತಪ್ಪಾ ಮಡಕಿ ಉಪಾಧ್ಯಕ್ಷರಾಗಿ ಶ್ರೀ ಹರಿಶ್ಚಂದ್ರ ಗೋಯಲ್ ಹಾಗೂ 9ಜನ ನಿರ್ದೇಶಕರು ಆಡಳಿತ ಮಂಡಳಿ ಕಾರ್ಯಮುಖರಾದರು.

ಪ್ರಗತಿ ಚಿತ್ರ

ವಿಜಯಕುಮಾರ ಪಾಟೀಲ ಗಾದಗಿ
ಅಧ್ಯಕ್ಷರು

ಮಡಿವಾಳಪ್ಪಾ ಗಂಗಶೆಟ್ಟಿ
ಉಪಾಧ್ಯಕ್ಷರು

ಮಹಾನಂದಾ ಪಾಟೀಲ
ಮುಖ್ಯಕಾರ್ಯ ನಿರ್ವಹಣಾಧಿಕಾರಿ

ಕ್ರ.ಸಂ.	ವಿವರಗಳು	1974 – ಪ್ರಾರಂಭದ ವರ್ಷದಲ್ಲಿ	2023–24
1	ಸದಸ್ಯರು	189 ಜನ	8796 ಜನ
2	ಷೇರು ಧನ	1.82 ಲಕ್ಷ	5.19 ಕೋಟಿ
3	ಠೇವಣಿಗಳು	4.23 ಲಕ್ಷ	226.41 ಕೋಟಿ
4	ದುಡಿಯುವ ಬಂಡವಾಳ	7.36 ಲಕ್ಷ	260.02 ಕೋಟಿ
5	ಸಾಲ ಮತ್ತು ಮುಂಗಡಗಳು	6.02 ಲಕ್ಷ	151.25 ಕೋಟಿ
6	ಲಾಭ	0.25 ಲಕ್ಷ	1.26 ಕೋಟಿ
7	ಅಡಿಟ್ ವರ್ಗ	'ಬಿ'	'ಎ'

1983ರಲ್ಲಿ ಬ್ಯಾಂಕಿನ ಅಧ್ಯಕ್ಷರಾಗಿದ್ದ ದಿ ಶರಣಪ್ಪಾ ಪೋಲಕಪಳ್ಳಿ ಅಧ್ಯಕ್ಷತೆಯ ಆಡಳಿತ ಮಂಡಳಿಯವರು ಬ್ಯಾಂಕ್ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸಬೇಕೆಂದು ನಿರ್ಣಯಿಸಿ ಅಂದಿನ ನಗರಾಭಿವೃದ್ಧಿ ಸಚಿವರಾಗಿದ್ದ ದಿ. ಧರ್ಮಸಿಂಗ್, ಜಿಲ್ಲೆಯ ಸಚಿರುಗಳಾಗಿದ್ದ ದಿ. ಶ್ರೀವೀರಶೆಟ್ಟಿ ಕುಶನೂರ ಮತ್ತು ದಿ.ಮಾಣಿಕರಾವ ಪಾಟೀಲ ಸಹಕಾರದೊಂದಿಗೆ ಗಾಂಧಿ ಗಂಜನಲ್ಲಿ 140x40 ಅಡಿ ಅಳತೆಯ ಖಾಲಿ ನಿವೇಶನ ಮಂಜೂರು ಮಾಡಿಸಿಕೊಂಡರು. ದಿನಾಂಕ : 29–08–1983ರಲ್ಲಿ ಬ್ಯಾಂಕಿಗೆ ಮಂಜೂರಾಗಿದ್ದ ಖಾಲಿ ನಿವೇಶನದಲ್ಲಿ ಕಟ್ಟಡ ಕಾಮಗಾರಿ ಪ್ರಾರಂಭಿಸಿದರು ದಿ. ವೀರಶೆಟ್ಟಿ ಕುಶನೂರ ಕಟ್ಟಡದ ಶಂಕುಸ್ಥಾಪನೆ ನೇರವೇರಿಸಿದರು. ಅಂದಿನ ಬ್ಯಾಂಕಿನ ನಿರ್ದೇಶಕರಾಗಿದ್ದ ಶ್ರೀ ಮಲ್ಲಪ್ಪಾ ಗಿರಿಯವರು ಕಟ್ಟಡ ನಿರ್ಮಾಣದ ಉಸ್ತುವಾರಿಯನ್ನು ನೋಡಿಕೊಂಡಿದ್ದರು.

ಶ್ರೀ ನಾಗಶೆಟ್ಟೆಪ್ಪಾ ಬಿರಾದರ ಗುನ್ನಳ್ಳಿ ಇವರು ಬ್ಯಾಂಕಿನ ಅಧ್ಯಕ್ಷರಾಗಿದ್ದಾಗ ಬ್ಯಾಂಕಿನ ಕಟ್ಟಡ ಮೊದಲನೆ ಮಹಡಿಯ ಕಾರ್ಯ 1989ರಲ್ಲಿ ಪ್ರಾರಂಭಗೊಂಡು 1991ರಲ್ಲಿ ಪೂರ್ಣಗೊಂಡಿತು. 2010ರಲ್ಲಿ ಶ್ರೀ ವಿಜಯಕುಮಾರ ಪಾಟೀಲ ಗಾದಗಿರವರು ಮೊದಲನೇ ಬಾರಿಗೆ ಅಧ್ಯಕ್ಷರಾಗಿದ್ದಾಗ ಮೇಲ್ಮಹಡಿಯಲ್ಲಿ ಸುಸಜ್ಜಿತ ಸಭಾಂಗಣ ಹಾಗೂ ವ್ಯವಸ್ಥಿತವಾದ ಅತಿಥಿ ಗೃಹ ಕಟ್ಟಡ ನಿರ್ಮಾಣ ಮಾಡಿಸಿದರು ಹಾಗೂ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಿಗೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಈ ಸಭಾಂಗಣಕ್ಕೆ 'ಮಹಾಂತಪ್ಪಾ ಮಡಕಿ ಸಭಾಂಗಣ' ಎಂದು ನಾಮಕರಣ ಮಾಡಿದ್ದು, ಪ್ರತಿ ವರ್ಷ ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ಈ ಸಭಾಂಗಣದಲ್ಲೇ ನಡೆಸಲಾಗುತ್ತದೆ.

ಬ್ಯಾಂಕು ಸ್ಥಾಪನೆಗೊಂಡು 50ವರ್ಷ ಪೂರೈಸುತ್ತಿದ್ದರು ಯಾವುದೇ ಶಾಖೆಯನ್ನು ಹೊಂದಿರುವುದಿಲ್ಲ ಇದನ್ನು ಮನಗಂಡ ಶ್ರೀ ವಿಜಯಕುಮಾರ ಪಾಟೀಲ ಗಾದಗಿರವರ ಆಡಳಿತ ಮಂಡಳಿವರು ಸತತ ಪ್ರಯತ್ನದಿಂದ 2018ರಲ್ಲಿ ಭಾರತಿಯ ರಿಜರ್ವ್ ಬ್ಯಾಂಕಿನಿಂದ 4 ಶಾಖೆಗಳನ್ನು ಆರಂಭಿಸುವ ಅನುಮತಿ ಪಡೆದು ಬೀದರ ನಗರದ–ಶಿವನಗರ, ಭಾಲ್ಕಿ, ಹುಮನಾಬಾದ, ಬಸವಕಲ್ಯಾಣದಲ್ಲಿ ಶಾಖೆಗಳನ್ನು ಆರಂಭಿಸಿ 6 ವರ್ಷಗಳಿಂದ ಲಾಭದಲ್ಲಿ ಕಾರ್ಯನಿರ್ವಹಿಸುತ್ತಿವೆ.

ರಾಷ್ಟ್ರೀಕೃತ ಬ್ಯಾಂಕುಗಳು ಗ್ರಾಹಕರಿಗೆ ನೀಡುವ ಎಲ್ಲಾ ಆನ್‌ಲೈನ್ ಡಿಜಿಟಲ್ ಸೇವೆಗಳನ್ನು ನಮ್ಮ ಬ್ಯಾಂಕ್ ಕೂಡಾ ನೀಡಬೇಕೆಂದು ಡಿಜಿಟಲ್ ಸೇವೆಗಳನ್ನು ನೀಡುವ ನಿಟ್ಟಿನಲ್ಲಿ ಎ.ಟಿ.ಎಮ್. (ATM) ಸೇವೆಯನ್ನು ಪಾರಂಭಿಸಿ ಈಗಾಗಲೇ ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಬ್ಯಾಂಕಿನ ಸ್ವಂತ ಎ.ಟಿ.ಎಮ್ ಯಂತ್ರವನ್ನು ಅಳವಡಿಸಿ ಸದಸ್ಯರಿಗೆ/ಗ್ರಾಹಕರಿಗೆ ವ್ಯವಹರಿಸಲು ಅನುಕೂಲ ಮಾಡಿಕೊಡಲಾಗಿದೆ.

ದಿ ಗಾಂಧಿ ಗಂಜ ಕೋ–ಆಪರೇಟಿವ ಬ್ಯಾಂಕ್ ಲಿ, ಬೀದರ ಇದು 50 ವರ್ಷಗಳಿಂದ ಸಹಕಾರ ತತ್ವದ ತಳಹದಿಯಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದು ಇದರ ಎಲ್ಲಾ ಶಾಖೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡುವ ಗುರಿಯನ್ನು ಹೊಂದಲಾಗಿದೆ, ಅದರಂತೆ ಈಗಾಗಲೇ ಭಾಲ್ಕಿ ಪಟ್ಟಣದಲ್ಲಿ ಬ್ಯಾಂಕು ಸ್ವಂತ ನಿವೇಶನ ಖರೀದಿಸಿ ಇದರ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

2024ರಲ್ಲಿ ಮಾರ್ಚ್‌ನಲ್ಲಿ ಔರಾದ (ಬಿ) ಭಾರತೀಯ ರಿಜರ್ವ್ ಬ್ಯಾಂಕಿನ ಅನುಮತಿಯೊಂದಿಗೆ ಹೊಸ ಶಾಖೆಯನ್ನು ಪ್ರಾರಂಭಿಸಲಾಗಿದೆ. 2025ರಲ್ಲಿ ಜಿಲ್ಲೆಯ ಚಿಟಗುಪ್ಪಾ ತಾಲೂಕಿನಲ್ಲಿ ಹೊಸ ಶಾಖೆಯನ್ನು ಪ್ರಾರಂಭಿಸುವ ಯೋಜನೆ ಹಾಕಿಕೊಳ್ಳಲಾಗಿದೆ.

SIDDESHWAR STEEL INDUSTRIES
"Where trust meets techonology"
IDDESHWAR
We Also Deal in
Note Counting Machine
MANUFACTURER OF
- Fire Resistant Safe
- Safe Deposit Locker
- Strong Room Door
- Double Door Safes
- Cash Boxes...etc
Also Deal in
Samarth Meditech Pvt Ltd
Software Development
& Consultancy Services
siddeshwarsteels.in
Siddeshwar Mahal,
opp kalyan jewellers Station Road Hubballi -580020
omkammar@gmail.com Ph: 8123012365, 9513136911

ಸಾರ್ಥಕ 100 ವಸಂತಗಳನ್ನು ಪೂರೈಸಿ ಪ್ರಗತಿ ಪಥದಲ್ಲಿ ಸಾಗಿರುವ ಗ್ರಾಹಕ ಸ್ನೇಹಿ

ವೈಶ್ಯ ಕೋ-ಆಪರೇಟಿವ್ ಬ್ಯಾಂಕ್, ತುಮಕೂರು



ಸಹಕಾರ ಬಹು ವಿಶಾಲವಾದ ಕ್ಷೇತ್ರ. ಇದರ ಹೊರತಾಗಿ ಮನುಷ್ಯನ ಜೀವನವನ್ನು ಊಹಿಸಲು ಸಾಧ್ಯವಿಲ್ಲ. ಮೂಲತಃ ಸಂಘ ಜೀವಿಯಾದ ಮನುಷ್ಯನ ವೈಯಕ್ತಿಕ ಪ್ರಗತಿ ಅಡಗಿರುವುದು ಸಹಾ ಪರಸ್ಪರರ ಸಹಕಾರದಲ್ಲಿ. ಈ ಹಿನ್ನೆಲೆಯಲ್ಲಿಯೇ ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರವ್ಯಾಪಿ ಸಹಕಾರಿ ಆಂದೋಲನವೇ ನಡೆಯಿತು. ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಪ್ರಗತಿ, ಸಮುದಾಯದ ಅಭಿವೃದ್ಧಿ ಮೂಲ ಧ್ಯೇಯೋದ್ದೇಶವಾಗಿತ್ತು. ಅದರ ಅಂಗವಾಗಿ ಅನೇಕ ಸಹಕಾರಿ ಸಂಸ್ಥೆಗಳು ಪ್ರಾರಂಭಗೊಂಡವು. ಸಹಕಾರ ಚಳುವಳಿಯ ಆಂದೋಲನದ ಸ್ಫೂರ್ತಿ ಪಡೆದ ವೈಶ್ಯ ಜನಾಂಗದ ಹಿರಿಯರಾಗಿದ್ದ ಕೀರ್ತಿಶೇಷ ಎ.ವಿ.ನಂಜುಂಡ ಶೆಟ್ಟರು ತುಮಕೂರಿನಲ್ಲಿ ಸಹಕಾರಿ ಆಂದೋಲನವನ್ನು ಸಾಕಾರಗೊಳಿಸಲು ತೀರ್ಮಾನಿಸಿ ಕಾರ್ಯಪ್ರವೃತ್ತರಾದರು. ಅವರ ವಿಶಾಲ ಚಿಂತನೆ ಹಾಗೂ ಭವಿಷ್ಯದ ಮುಂದಾಲೋಚನೆಯ ಪರಿಣಾಮವಾಗಿ ಅಂದಿನ ಮೈಸೂರು ರಾಜ್ಯ ಸಹಕಾರಿ ಇಲಾಖೆಯ ಕಾಯಿದೆ ಅಡಿ ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರವ್ಯಾಪಿ ನಡೆದ ಸಹಕಾರಿ ಆಂದೋಲನದ ಪರಿಣಾಮವಾಗಿ 1925ರಲ್ಲಿ ತುಮಕೂರು ನಗರದಲ್ಲಿ ವೈಶ್ಯ ಕೋ-ಆಪರೇಟಿವ್ ಸೊಸೈಟಿಯಾಗಿ ಸ್ಥಾಪನೆಗೊಂಡು ಇದೀಗ ಸಾರ್ಥಕ 100 ವಸಂತಗಳನ್ನು ಪೂರೈಸಿ ಇದೇ ನವೆಂಬರ್ 10, 2024ರಂದು ಶತಮಾನೋತ್ಸವವನ್ನು ಆಚರಿಸಿಕೊಂಡಿದೆ.

ಪ್ರಾರಂಭದಲ್ಲಿ ಕೇವಲ ರೂ.1.86 ಲಕ್ಷ ಠೇವಣಿಗಳಿದ್ದು, ಇಂದು ರೂ.412.72ಕೋಟಿ ಠೇವಣಿಯನ್ನು ಹೊಂದಿ ಅದ್ಭುತ ಯಶಸ್ವಿ ಪಥದಲ್ಲಿ ಮುನ್ನುಗ್ಗುತ್ತಿರುವ ಸಹಕಾರಿ ಬ್ಯಾಂಕಾಗಿದ್ದು, ಹಾಲಿ 14448 ಕೋಟಿ ರೂ. ವಾರ್ಷಿಕ ವಹಿವಾಟು ಹೊಂದಿದೆ.

'ಸಹಕರಿಸಲು ಬೆಳೆಯುತ್ತಿದೆ, ಬೆಳೆಯಲು ಸಹಕರಿಸುತ್ತಿದೆ ಎಂಬ ಸಹಕಾರಿ ಧ್ಯೇಯದೊಂದಿಗೆ ಮುನ್ನುಗ್ಗುತ್ತಿರುವ ಬ್ಯಾಂಕು ವೈಶ್ಯ ಜನಾಂಗದ ಅಭಿವೃದ್ಧಿ ಮಾತ್ರವಲ್ಲದೆ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ಎಲ್ಲಾ ಸಮೂದಾಯಗಳ ಅಭಿವೃದ್ಧಿಗೆ ಆರ್ಥಿಕ ನೆರವು ನೀಡುತ್ತಿರುವ ಸಹಕಾರಿ ಬ್ಯಾಂಕ್.

ಬ್ಯಾಂಕಿನ ಕಾರ್ಯ ವ್ಯಾಪ್ತಿ : ವೈಶ್ಯ ಕೋ-ಆಪರೇಟಿವ್ ಬ್ಯಾಂಕಿನ ಕಾರ್ಯವ್ಯಾಪ್ತಿಯು ಮೊದಲಿಗೆ ತುಮಕೂರು ನಗರಸಭೆಯ ವ್ಯಾಪ್ತಿಗೆ ಮಾತ್ರ

ಸೀಮಿತವಾಗಿತ್ತು. ಬ್ಯಾಂಕಿನ ಅಭಿವೃದ್ಧಿ ಹಾಗೂ ವ್ಯವಹಾರ ವಹಿವಾಟಗಳನ್ನು ಗಮನಿಸಿ ತುಮಕೂರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಹಾಸನ, ಮಂಡ್ಯ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳಿಗೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತಿರಿಸಲಾಯಿತು. ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಸಹಕಾರಿ ಇಲಾಖೆಯ ಅನುಮತಿಯ ಮೇರೆಗೆ 1978ರಲ್ಲಿ ಪ್ರಧಾನ ಕಛೇರಿ ಸೇರಿದಂತೆ, 1988 ರಲ್ಲಿ ಪ್ರಪ್ರಥಮ ಶಾಖೆಯನ್ನು ತುಮಕೂರು ನಗರದ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಆವರಣದಲ್ಲಿ ಪ್ರಾರಂಭಿಸಲಾಯಿತು. ನಂತರ 1993ರಲ್ಲಿ ದ್ವಿತೀಯ ಶಾಖೆಯಾಗಿ ತುಮಕೂರು ನಗರದ ಎಸ್.ಐ.ಟಿ. (ವಿಜಯನಗರ) ಬಡಾವಣೆಯಲ್ಲಿ ಮಹಿಳಾ ಶಾಖೆಯನ್ನು ತೆರೆಯಲಾಯಿತು. 1995ರಲ್ಲಿ ತೃತೀಯ ಶಾಖೆಯಾಗಿ ಪಾವಗಡ ಶಾಖೆ ಮತ್ತು 1998ರಲ್ಲಿ ನಾಲ್ಕನೇ ಶಾಖೆಯಾಗಿ ಮಧುಗಿರಿ ಶಾಖೆಯನ್ನು ಹಾಗೂ ಬೆಂಗಳೂರು ನಗರದಲ್ಲಿ 2000ರಲ್ಲಿ ಯಂಶವಂತಪುರ ಶಾಖೆ ಮತ್ತು 2001ರಲ್ಲಿ ಸಂಪೂರ್ಣ ಗಣಕೀಕೃತ ಹಾಗೂ ಹವಾನಿಯಂತ್ರಿತ ಮತ್ತು ಅತ್ಯಾಧುನಿಕ ಸೇವಾಸೌಲಭ್ಯವುಳ್ಳ ಬೆಂಗಳೂರಿನ ಬಿವಿಕೆ ಅಯ್ಯಂಗಾರ್ ರಸ್ತೆ ಶಾಖೆ ಮತ್ತು ಮೈಸೂರಿನಲ್ಲಿ 8ನೇ ಶಾಖೆಯು ಪ್ರಾರಂಭಗೊಂಡು ಕಾರ್ಯನಿರ್ವಹಿಸುತ್ತಿದೆ.

ಸದಸ್ಯತ್ವ ಮತ್ತು ಷೇರು ಬಂಡವಾಳ : ಪ್ರಾರಂಭಿಕ ಹಂತದಲ್ಲಿ ಬ್ಯಾಂಕಿನ ಸದಸ್ಯರ ಸಂಖ್ಯೆ: 503 ಇದ್ದು, ರೂ.2.20 ಲಕ್ಷ ಷೇರು ಬಂಡವಾಳವಿತ್ತು. 2023–24ನೇ ಸಾಲಿನ ಅಂತ್ಯಕ್ಕೆ 7343 ಸದಸ್ಯರಿದ್ದು, ರೂ.14.54 ಕೋಟಿ ಷೇರು ಬಂಡವಾಳ ಇರುತ್ತದೆ.

ನಮ್ಮ ಬ್ಯಾಂಕ್ ಗ್ರಾಹಕರಿಗೆ ನೀಡುತ್ತಿರುವ ಸೌಲಭ್ಯಗಳು

- ಸದಸ್ಯರು ಮತ್ತು ಗ್ರಾಹಕರು ತಮ್ಮ ಹಣಕಾಸಿನ ನಿರ್ವಹಣೆಗಾಗಿ ಅನುಕೂಲವಾಗುವ ರೀತಿಯಲ್ಲಿ ದಿನದಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ರಾಷ್ಟ್ರೀಯ ಮಟ್ಟದಲ್ಲಿ ಹಣಕಾಸಿನ ವ್ಯವಹಾರವನ್ನು ನಡೆಸಲು ಸೌಲಭ್ಯವನ್ನು ಕಲ್ಪಿಸಲಾಗಿದೆ.
- ಬ್ಯಾಂಕಿನ ಎಲ್ಲಾ ಶಾಖೆಗಳಲ್ಲೂ ಲಾಕರ್ ಸೌಲಭ್ಯವನ್ನು ಒದಗಿಸಲಾಗಿದೆ.
- ಅತ್ಯಾಧುನಿಕ ತಂತ್ರಜ್ಞಾನದ ಗಣಕೀಕರಣ ವ್ಯವಸ್ಥೆಯಾದ ಕೋರ್ ಬ್ಯಾಂಕಿಂಗ್ ಸಲ್ಯೂಷನ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಇದರಿಂದ ಒಂದು ಶಾಖೆಯ ಗ್ರಾಹಕ ಎಲ್ಲಾ ಶಾಖೆಯ ಗ್ರಾಹಕನಾಗಿರುತ್ತಾನೆ. ಯಾವುದೇ ಶಾಖೆಯಲ್ಲಿ ತಮ್ಮ ಹಣಕಾಸಿನ ವ್ಯವಹಾರವನ್ನು ನಿರ್ವಹಣೆ ಮಾಡಬಹುದಾಗಿದೆ.
- ಗ್ರಾಹಕರು ತಮ್ಮ ಖಾತೆಗಳ ವಿವರಗಳನ್ನು ತಿಳಿದುಕೊಳ್ಳಲು SMS Alart ಮೂಲಕ ಪಡೆಯಬಹುದಾಗಿದೆ.
- ಅದೇ ಕ್ಷಣದ ಸಗಟು ಇತ್ಯರ್ಥ (RTGS) ಮತ್ತು ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ (NEFT) ಈ ಸೌಲಭ್ಯವನ್ನು ಗ್ರಾಹಕರು ಯಾವುದೇ ಬ್ಯಾಂಕಿನ ಯಾವುದೇ ಖಾತೆಗೆ ಹಣ ವರ್ಗಾವಣೆ ಮಾಡಲು ಉಪಯೋಗಿಸಬಹುದಾಗಿದೆ ಹಾಗೂ GST ತೆರಿಗೆಗಳನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.
- ಗ್ರಾಹಕರು ತಮ್ಮ ಹಣಕಾಸಿನ ವ್ಯವಹಾರಗಳನ್ನು ನಮ್ಮ ಬ್ಯಾಂಕಿನ Statement by e-mail ವಿಳಾಸದ ಮೂಲಕ ಪಡೆಯುವ ಸೌಲಭ್ಯವನ್ನು ಕಲ್ಪಿಸಲಾಗಿದೆ.
- ಬ್ಯಾಂಕಿನ ಗ್ರಾಹಕ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ಉಚಿತ ವೈದ್ಯಕೀಯ ತಪಾಸಣಾ ಕೇಂದ್ರವನ್ನು ತುಮಕೂರು ನಗರದ ವಿವೇಕಾನಂದ ರಸ್ತೆಯಲ್ಲಿರುವ ಪ್ರಧಾನ ಕಛೇರಿ ಶಾಖೆಯ ಆವರಣದಲ್ಲಿ ತೆರೆಯಲಾಗಿದೆ.
- ಮೈಸೂರು ಶಾಖೆಯಲ್ಲಿ ಗ್ರಾಹಕರ ಅನುಕೂಲಕ್ಕಾಗಿ ಇ–ಸ್ಟಾಂಪಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- ಬ್ಯಾಂಕಿನ ಸದಸ್ಯರಿಗೆ 1 ಲಕ್ಷ ರೂ. ಅಪಘಾತ ವಿಮಾ ಸೌಲಭ್ಯವನ್ನು ಕಲ್ಪಿಸಲಾಗಿದೆ.
- ನಮ್ಮ ಜನಾಂಗದವರ ಅಂಗಸಂಸ್ಥೆಗಳಿಗೆ ಹಾಗೂ ಇತರೆ ಸಂಘ ಸಂಸ್ಥೆಗಳಿಗೆ ಉದಾರವಾದ ಕೊಡುಗೆಯನ್ನು ನೀಡುತ್ತಾ ಬಂದಿದೆ.
- ತಮಗೆ ತಿಳಿದಿರುವಂತೆ ಬ್ಯಾಂಕು ಆಡಳಿತ ಕಚೇರಿ ಹಾಗೂ 8 ಶಾಖೆಗಳನ್ನು ಹೊಂದಿದ್ದು, ಬ್ಯಾಂಕಿನ ವ್ಯವಹಾರಕ್ಕಾಗಿ ಕೋರ್ ಬ್ಯಾಂಕಿಂಗ್ ಸಲ್ಯೂಷನ್ ಅಳವಡಿಸಿಕೊಂಡಿದೆ.
- ನಮ್ಮ ಬ್ಯಾಂಕು ಆಧುನಿಕ ತಂತ್ರಜ್ಞಾನದ ಹೊಸ ಹೊಸ ಅವಿಷ್ಕಾರಗಳನ್ನು ಅಳವಡಿಸಿಕೊಂಡು ಗ್ರಾಹಕರ ಮನೆ ಬಾಗಿಲಿಗೆ ಹೋಗಿ ಸೇವೆ ನೀಡುವ ನಿಟ್ಟಿನಲ್ಲಿ ನಾವು ಅನೇಕ ಹೊಸ ಪ್ರಯೋಗಗಳಿಗೆ ಸಿಬ್ಬಂದಿಯ ಸಹಕಾರದಿಂದ ಕಾರ್ಯ ಪ್ರವೃತ್ತರಾಗಿದ್ದೇವೆ. ಅದರಲ್ಲಿ ಮುಖ್ಯವಾಗಿ QR ಕೋಡ್ ಮೂಲಕ ಹಣವನ್ನು ಸ್ವೀಕರಿಸುವುದು, Mobile Banking (View Mode) ಮೂಲಕ ಖಾತೆಯ ವಹಿವಾಟಿನ ವಿವರಗಳನ್ನು ಪಡೆಯಲು ಅನುಕೂಲ ಮಾಡಿದ್ದೇವೆ.

ಕೆ.ಎನ್. ಗೋವಿಂದರಾಜು
ಅಧ್ಯಕ್ಷರು

ಕೆ.ಎಸ್. ರಾಮಮೂರ್ತಿ
ಉಪಾಧ್ಯಕ್ಷರು

ಎಸ್. ಸುಮಾ
ಮುಖ್ಯಕಾರ್ಯನಿರ್ವಹಣಾಧಿಕಾರಿ

ಇದು ನಮ್ಮ ಬ್ಯಾಂಕಿನ ಪ್ರಗತಿಯ ಆಶಾದಾಯಕ ಬೆಳವಣಿಗೆಯಾಗಿದೆ.

ಸಾಲ ಮತ್ತು ಮುಂಗಡಗಳು : ನಮ್ಮ ಬ್ಯಾಂಕು ಸಂಗ್ರಹಿಸಿದ ಠೇವಣಿಯಲ್ಲಿ ಪ್ರಾರಂಭಿಕ ಹಂತವಾಗಿ ಗ್ರಾಹಕರಿಗೆ ರೂ.1.62 ಲಕ್ಷ ವಿವಿಧ ಸಾಲದ ರೂಪದಲ್ಲಿ ನೀಡಲಾಗಿತ್ತು. ದಿನದಿಂದ ದಿನಕ್ಕೆ ಸದಸ್ಯರು ಹಾಗೂ ಗ್ರಾಹಕರ ಸಂಖ್ಯೆ ಹೆಚ್ಚಾದಂತೆ ಅವರ ಬೇಡಿಕೆಗೆ ಅನುಗುಣವಾಗಿ ಸಾಲದ ಪ್ರಮಾಣವನ್ನು ಹೆಚ್ಚಿಸಲಾಯಿತು. ಬ್ಯಾಂಕು ತನ್ನ ಸಂಪನ್ಮೂಲಗಳನ್ನು ಸ್ವಂತ ಶಕ್ತಿಯಿಂದ ಕ್ರೋಢೀಕರಿಸಿಕೊಂಡು ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ವಿವಿಧ ಸಾಲಗಳನ್ನು ನೀಡುತ್ತಾ ಬಂದಿದೆ. ಅವುಗಳೆಂದರೆ ಕಂತಿನ ಸಾಲ, ನಗದುದ್ದರಿ ಸಾಲ, ಯಂತ್ರೋಪಕರಣ ಸಾಲ, ವಾಹನ ಸಾಲ, ಚಿನ್ನಾಭರಣ ಸಾಲ, ಸಾಮಾನ್ಯ ಗೃಹ ನಿರ್ಮಾಣ ಯೋಜನೆಯಡಿಯಲ್ಲಿ ನಿವೇಶನ/ಮನೆ ಖರೀದಿ, ಮನೆ ನಿರ್ಮಾಣ ಮತ್ತು ಮನೆ ರಿಪೇರಿಗೆ ಸಾಲ, ಸದಸ್ಯರಿಗೆ ಜಂಟಿ/ವಾಯಿದೆ ಸಾಲ, ವೇರ್ ಹೌಸ್ ರಸೀತಿ ಆಧಾರ ಸಾಲ, ಉಗ್ರಾಣ ದಾಸ್ತಾನು ಸಾಲ, ರಾಷ್ಟ್ರೀಯ ಉಳಿತಾಯ ಪತ್ರಗಳ ಮೇಲಿನ ಸಾಲ, ಜೀವ ವಿಮಾ ಪತ್ರಗಳ ಮೇಲಿನ ಸಾಲ, ಠೇವಣಾತಿಗಳ ಮೇಲಿನ ಸಾಲಗಳ ನೀಡಲಾಗುತ್ತಿದೆ. ಆದ್ಯತಾ ವಲಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದರ ಜೊತೆಗೆ ಅಭಿವೃದ್ಧಿ ಪಥದಲ್ಲಿರುವ ಬೃಹತ್ ಕೈಗಾರಿಕೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಲಸೌಲಭ್ಯ ಒದಗಿಸಲಾಗುತ್ತಿದೆ.

ಪ್ರಸ್ತುತ 2023–24ನೇ ಆರ್ಥಿಕ ವರ್ಷದ ಅಂತ್ಯಕ್ಕೆ ರೂ.293.36 ಕೋಟಿ ಸಾಲ ಮತ್ತು ಮುಂಗಡ ರೂಪದಲ್ಲಿ ನೀಡಲಾಗಿದೆ. ಅದೇ ರೀತಿ ಗ್ರಾಹಕರು ತಾವು ಪಡೆದ ಸಾಲಗಳನ್ನು ನಿರ್ದಿಷ್ಟ ಅವಧಿಯಲ್ಲಿ ಮರುಪಾವತಿ ಮಾಡುವುದರಿಂದ ವರ್ಷದಿಂದ ವರ್ಷಕ್ಕೆ ನಿವ್ವಳ ಲಾಭವು ಏರುಮುಖವಾಗುತ್ತಾ ಸಾಗಿದೆ. ಪ್ರಸ್ತುತ ರೂ.5.90 ಕೋಟಿ ನಿವ್ವಳ ಲಾಭವನ್ನು ಗಳಿಸಿರುವುದು ಶ್ಲಾಘನೀಯ ವಿಷಯವಾಗಿದೆ.

ಅನುತ್ಪಾದಕ ಆಸ್ತಿ, ಸುಸ್ತಿ ಸಾಲ ಮತ್ತು ಸಾಲ ವಸೂಲಾತಿ ವಿವರಗಳು : ವರದಿ ಸಾಲಿನಲ್ಲಿ ಅನುತ್ಪಾದಕ ಆಸ್ತಿ ಪ್ರಮಾಣ ಶೇ.1.95 ಇದ್ದು, ಬ್ಯಾಂಕು ಸಕಾಲದಲ್ಲಿ ಕೈಗೊಂಡ ಪರಿಣಾಮಕಾರಿ ವಸೂಲಾತಿ ಕ್ರಮಗಳಿಂದಾಗಿ ಅನುತ್ಪಾದಕ ಆಸ್ತಿಯ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿರುತ್ತದೆ. ಮುಂದಿನ ದಿನಗಳಲ್ಲಿ ಅನುತ್ಪಾದಕ ಆಸ್ತಿಯ ಮಟ್ಟವು ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ.

ಸಾಲ ವಸೂಲಾತಿ ಸಮಿತಿ ಹಾಗೂ ಶಾಖಾ ಸಮಿತಿ ಸದಸ್ಯರುಗಳ ಮಾರ್ಗದರ್ಶನದಂತೆ ಅನುತ್ಪಾದಕ ಆಸ್ತಿ ವಸೂಲಾತಿ ಕಾರ್ಯವನ್ನು ಮಾಡಲಾಗಿದೆ. ದೊಡ್ಡ ಮೊತ್ತದ ಸುಸ್ತಿ ಸಾಲದ ವಸೂಲಾತಿಗೆ ಹೆಚ್ಚಿನ ಆದ್ಯತೆ ನೀಡಿ, ಪರಿಣಾಮಕಾರಿ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ.

ತುಮಕೂರು ನಗರದಲ್ಲಿ ಅಕ್ಕಿ ಗಿರಣಿಗಳು ವ್ಯಾಪಕವಾಗಿ ಕಾರ್ಯಾರಂಭಗೊಳ್ಳಲು ನಮ್ಮ ವೈಶ್ಯ ಕೋ–ಆಪರೇಟಿವ್ ಬ್ಯಾಂಕಿನ ಆರ್ಥಿಕ ಸಹಾಯವೇ ಪ್ರಮುಖ ಕಾರಣವಾಗಿದೆ. ಅನೇಕ ಶೈಕ್ಷಣಿಕ ಸಂಸ್ಥೆಗಳ ಕಟ್ಟಡ ನಿರ್ಮಾಣಕ್ಕೆ ನವೀಕರಣಕ್ಕೆ ಸಹಾಯ ಹಸ್ತ ನೀಡಿದೆ. ನಮ್ಮ ಬ್ಯಾಂಕಿನ ಕಾರ್ಯವೈಖರಿ ಹಾಗೂ ಜನಪ್ರಿಯತೆಯನ್ನು ಗುರುತಿಸಿ 1993ರಲ್ಲಿ ತುಮಕೂರು ಜಿಲ್ಲೆಯ ಅತ್ಯುತ್ತಮ ಸಹಕಾರಿ ಬ್ಯಾಂಕ್ ಎಂದು ತುಮಕೂರು ಜಿಲ್ಲಾ ಸಹಕಾರಿ ಯೂನಿಯನ್ ಮಾನ್ಯತೆ ಮಾಡಿ ಗೌರವಿಸಿದೆ. ಅದೇ ರೀತಿ ರಾಜ್ಯದ ಅತ್ಯಂತ ಯಶಸ್ವಿ ಆರ್ಯವೈಶ್ಯ ಬ್ಯಾಂಕೆಂದು ಮಹಾಮಂಡಳದಿಂದ ಪ್ರಶಂಸೆ ಗಳಿಸಿದೆ.

ವೈಶ್ಯ ಕೋ–ಆಪರೇಟಿವ್ ಬ್ಯಾಂಕಾಗಿ ಪರಿವರ್ತನೆಗೊಂಡ 25ನೇ ವರ್ಷದ ಸವಿನೆನಪಿಗಾಗಿ ರಜತ ಮಹೋತ್ಸವವನ್ನು ಆಚರಿಸಿಕೊಂಡು ತುಮಕೂರು ನಗರದ ಹೃದಯ ಭಾಗದ ಡಾ॥ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತದ ಬಳಿ ಸುಸಜ್ಜಿತವಾದ ಹಾಗೂ ಅತ್ಯಾಧುನಿಕ ಸೌಲಭ್ಯವುಳ್ಳ ಆಡಳಿತ ಕಛೇರಿಯನ್ನು ನಿರ್ಮಿಸಿ ಸದರಿ ಕಟ್ಟಡದಲ್ಲಿ ಆಡಳಿತಾತ್ಮಕ ಕೆಲಸ ಕಾರ್ಯಗಳು ನಡೆಯುತ್ತಿವೆ. ಹೀಗೆ ಬ್ಯಾಂಕು ಗ್ರಾಹಕರ ಸೇವೆಯ ಸಂತೃಪ್ತಿಗಾಗಿ ಅವಿರತವಾಗಿ ಶ್ರಮಿಸುತ್ತಿದ್ದು, ಮುಂಬರುವ ದಿನಗಳಲ್ಲಿ ಮತ್ತಷ್ಟು ಸೌಲಭ್ಯಗಳನ್ನು ಒದಗಿಸಿ 'ಗ್ರಾಹಕ ಸ್ನೇಹಿ' ಬ್ಯಾಂಕ್ ಎಂಬ ಹಿರಿಮೆ ಕಾಯ್ದುಕೊಳ್ಳಲು ನಿರ್ದೇಶಕ ಮಂಡಳಿ ದೃಢ ನಿರ್ಧಾರ ತಾಳಿದೆ.

ವೀರಶೈವ ಸಹಕಾರಿ ಬ್ಯಾಂಕ್ ಲಿ.,

ನಂ.1732/32, ಎಂ.ಸಿ.ರಸ್ತೆ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು-560040

ದಿನಾಂಕ : 31-03-2024ರ ಅಂತ್ಯಕ್ಕಿದ್ದಂತೆ ಬ್ಯಾಂಕಿನ ಹಣಕಾಸಿನ ಅಂಕಿ-ಅಂಶಗಳ ವಿವರ (ರೂ.ಲಕ್ಷಗಳಲ್ಲಿ)

ಕ್ರ.ಸಂ.	ವಿವರಗಳು	31-03-2024
1.	ಷೇರು ಬಂಡವಾಳ	1052.10
2.	ಆಪದ್ಧನ ಮತ್ತು ಇತರೆ ನಿಧಿಗಳು	3024.23
3.	ಅವಕಾಶಗಳು	847.13
4.	ಠೇವಣಿಗಳು	35018.60
5.	ಸಾಲ ಮತ್ತು ಮುಂಗಡಗಳು	18300.96
6.	ಹೂಡಿಕೆಗಳು	18000.22
7.	ದುಡಿಯುವ ಬಂಡವಾಳ	40711.74
8.	ತೆರಿಗೆಗೆ ಮುನ್ನ ಲಾಭ	348.40
9.	ತೆರಿಗೆಯ ನಂತರ ನಿವ್ವಳ ಲಾಭ	265.70
10.	ಎನ್.ಪಿ.ಎ ಮೊತ್ತ ಒಟ್ಟು (Gross) ಎನ್.ಪಿ.ಎ (%) ನಿವ್ವಳ (Net) ಎನ್.ಪಿ.ಎ (%)	791.45 4.32% 0%
11.	ಒಟ್ಟು ವ್ಯವಹಾರ	53319.56
12.	ಬಂಡವಾಳ ಪರ್ಯಾಪ್ತ ಅನುಪಾತ CRAR)	19.13

ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರು

1.	ಶ್ರೀ ಬಿ.ಎಸ್.ಪರಮಶಿವಯ್ಯ	ಅಧ್ಯಕ್ಷರು	12.	ಶ್ರೀ ಸದಾಶಿವಯ್ಯ	ನಿರ್ದೇಶಕರು
2.	ಶ್ರೀ ಮಹದೇವಪ್ರಸಾದ್ ಬಿ.ಪಿ.	ಉಪಾಧ್ಯಕ್ಷರು / ವ್ಯವಸ್ಥಾಪನ ಮಂಡಲಿ ನಿರ್ದೇಶಕರು	13.	ಶ್ರೀ ಸಿ. ಸಿದ್ಧಲಿಂಗಯ್ಯ	ವ್ಯವಸ್ಥಾಪನ ಮಂಡಲಿ ನಿರ್ದೇಶಕರು
3.	ಶ್ರೀ ಆರ್.ಚಂದ್ರಶೇಖರಯ್ಯ	ನಿರ್ದೇಶಕರು	14.	ಶ್ರೀಮತಿ ಎನ್. ಗಿರಿಜ	ನಿರ್ದೇಶಕರು
4.	ಶ್ರೀಮತಿ ಗಂಗಮ್ಮ ಎಸ್.	ನಿರ್ದೇಶಕರು	15.	ಶ್ರೀ ರಾಜು ಹೆಚ್.	ನಿರ್ದೇಶಕರು
5.	ಶ್ರೀ ಟಿ.ಎಸ್.ಗಂಗಾಧರ್	ನಿರ್ದೇಶಕರು	16.	ಶ್ರೀ ಶಿವಣ್ಣ ಸಿ.ಬಿ.	ನಿರ್ದೇಶಕರು
6.	ಶ್ರೀ ನಟರಾಜ್ ಎಂ.ಎಸ್.	ನಿರ್ದೇಶಕರು	17.	ಶ್ರೀಮತಿ ರುದ್ರಾಂಬ	ನಿರ್ದೇಶಕರು
7.	ಶ್ರೀ ಬಿ.ಎಸ್.ಪ್ರಭುದೇವರು	ನಿರ್ದೇಶಕರು	18.	ಶ್ರೀ ಬಿ.ಪಿ. ಶಿವಕುಮಾರಸ್ವಾಮಿ	ನಿರ್ದೇಶಕರು
8.	ಶ್ರೀ ಬಿ.ಎಸ್.ಪುಟ್ಟಸ್ವಾಮಯ್ಯ	ವ್ಯವಸ್ಥಾಪನ ಮಂಡಲಿ ಅಧ್ಯಕ್ಷರು	19.	ಶ್ರೀ CA, ಪ್ರದೀಪ್‌ಕುಮಾರ್ ಜಿ.	ವೃತ್ತಿಪರ ನಿರ್ದೇಶಕರು
9.	ಶ್ರೀ ಪುಟ್ಟಗಂಗಯ್ಯ.ಎಸ್.ಹೆಚ್	ನಿರ್ದೇಶಕರು	20.	ಶ್ರೀ ಬಿ.ಎನ್. ಈಶ್ವರಯ್ಯ	ವೃತ್ತಿಪರ ನಿರ್ದೇಶಕರು
10.	ಶ್ರೀ ಸಿದ್ದೇಶ್ ಬಿ.ಟಿ.ಉಮೇಶ್	ನಿರ್ದೇಶಕರು	21.	ಶ್ರೀ ವಿಶ್ವೇಶ್ವರ ಜೆ.ಸಿ.	ವ್ಯವಸ್ಥಾಪನ ಮಂಡಲಿ ನಿರ್ದೇಶಕರು
11.	ಶ್ರೀ ಸಿ.ವಿ.ವಿಶ್ವನಾಥ್	ನಿರ್ದೇಶಕರು	22.	ಶ್ರೀ CA, ಬಸವರಾಜ,	ವ್ಯವಸ್ಥಾಪನ ಮಂಡಲಿ ನಿರ್ದೇಶಕರು

ಠೇವಣಿಗಳ ಮೇಲೆ ನೀಡುವ ಬಡ್ಡಿ ದರದ ವಿವರ

ಠೇವಣಿ ಅವಧಿ	ಬಡ್ಡಿದರ	
15 ದಿನದಿಂದ 30 ದಿನಗಳವರೆಗೆ	3.75%	ಆರು ತಿಂಗಳು ಮೇಲ್ಪಟ್ಟ ಅವಧಿಯ ಠೇವಣಿ ಖಾತೆ ಹೊಂದಿರುವ ಹಿರಿಯ ನಾಗರೀಕರಿಗೆ ಶೇ.0.50% ಹೆಚ್ಚಿನ ಬಡ್ಡಿದರ ನೀಡಲಾಗುವುದು
31 ದಿನದಿಂದ 45 ದಿನಗಳವರೆಗೆ	4.50%	
46 ದಿನದಿಂದ 90 ದಿನಗಳವರೆಗೆ	4.75%	
91 ದಿನದಿಂದ 180 ದಿನಗಳವರೆಗೆ	5.50%	
181 ದಿನದಿಂದ 1 ವರ್ಷದವರೆಗೆ	6.50%	
1 ವರ್ಷ ಮೇಲ್ಪಟ್ಟು 4 ವರ್ಷದವರೆಗೆ	7.75%	
4 ವರ್ಷ ಮೇಲ್ಪಟ್ಟು 10 ವರ್ಷದವರೆಗೆ	7.50%	

ಬೃಹತ್ ಠೇವಣಿಗಳು	ಬಡ್ಡಿದರ
1 ವರ್ಷ ಮೇಲ್ಪಟ್ಟು 3 ವರ್ಷದವರೆಗೆ ರೂ.15.00ಲಕ್ಷ ಮತ್ತು ಮೇಲ್ಪಟ್ಟು ಹೂಡಿಕೆ ಮಾಡುವ ಅವಧಿ ಠೇವಣಿಗಳಿಗೆ	8.00%
1 ವರ್ಷ ಮೇಲ್ಪಟ್ಟು 3 ವರ್ಷಗಳವರೆಗೆ ರೂ.25.00ಲಕ್ಷ ಮತ್ತು ಮೇಲ್ಪಟ್ಟು ಹೂಡಿಕೆ ಮಾಡುವ ಅವಧಿ ಠೇವಣಿಗಳಿಗೆ	8.10%

ಹಿರಿಯ ನಾಗರಿಕರಿಗೆ ನೀಡುವ ಹೆಚ್ಚಿನ ಬಡ್ಡಿದರ ಈ ಮೇಲ್ಕಂಡ ಬೃಹತ್ ಠೇವಣಿಗಳಿಗೆ ಅನ್ವಯಿಸುವುದಿಲ್ಲ.

ಶ್ರೀಮತಿ ಬಿ.ಸಿ. ವಿಜಯಕುಮಾರಿ, ಪ್ರಧಾನ ವ್ಯವಸ್ಥಾಪಕರು

ಸಹಕಾರದ ಬಗ್ಗೆ ಗಣ್ಯರ ಅನಿಸಿಕೆ

ಸಹಕಾರ ಚಳವಳಿ, ಸಹಕಾರ ವ್ಯವಸ್ಥೆ ಇಂದು ಎಲ್ಲ ನಾಗರೀಕರಿಗೂ ಅವಶ್ಯ, ಅನಿವಾರ್ಯ ಎನಿಸಿದೆ. ಸಹಕಾರದ ಬಗ್ಗೆ ಸಮಾಜದ ವಿವಿಧ ಸ್ಥರಗಳ ಪ್ರಮುಖರು ಆಸ್ತೆ ತೋರುತ್ತಿರುವುದು ವಿಶೇಷವೇ ಸರಿ. ಸಹಕಾರದ ಬಗ್ಗೆ ಇಲ್ಲಿ ಕೆಲವು ಗಣ್ಯರ ಅನಿಸಿಕೆಯನ್ನು ಕೊಡಲಾಗಿದೆ.

ಸಮಾಜದಲ್ಲಿ ಸಮ ಸಮಾಜ ನಿರ್ಮಿಸಿ, ನ್ಯಾಯಯುತ ಜೀವನ, ಏಕತೆ ಮತ್ತು ಭ್ರಾತೃತ್ವದ ತತ್ವಗಳನ್ನು ಬಿತ್ತರಿಸುವ ಗುಣಗಳನ್ನು ಸಹಕಾರ ವಲಯ ಒಳಗೊಂಡಿದೆ. ಇದು ಸಾಮಾಜಿಕ ನ್ಯಾಯದ ತಳಹದಿಯಲ್ಲಿ ವಿವಿಧ ವರ್ಗಗಳ ಜನರು ಒಟ್ಟಾಗಿ ಸೇರಿ ಆರ್ಥಿಕ ಸ್ವಾಲಂಬಿಗಳಾಗಲು ಪೂರಕವಾಗಿದೆ.

▶▶ **ದ್ರೌಪದಿ ಮುರ್ಮು**
ರಾಷ್ಟ್ರಪತಿಗಳು

ಪಟಣ ಸಹಕಾರ ಬ್ಯಾಂಕುಗಳು ವಾಣಿಜ್ಯ ಬ್ಯಾಂಕುಗಳ ಮಟ್ಟಕ್ಕೆ ಬೆಳೆಯುವುದು ಸುಲಭದ ಮಾತಲ್ಲ. ಇಂದು ಸಹಕಾರ ಬ್ಯಾಂಕುಗಳು ವಾಣಿಜ್ಯ ಬ್ಯಾಂಕುಗಳ ಜತೆಗೆ ಪೈಪೋಟಿ ನೀಡುವ ನಿಟ್ಟಿನಲ್ಲಿ ಬೆಳೆದಿವೆ. ಇದರಿಂದಾಗಿ ಸಮಾಜದಲ್ಲಿ ಸಾಕಷ್ಟು ಅಭಿವೃದ್ಧಿ ಕಾಣಲು ಸಾಧ್ಯವಾಗಿದೆ.

▶▶ **ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ನಮ್ಮ ರೈತರನ್ನು ಆರ್ಥಿಕವಾಗಿ ಇನ್ನಷ್ಟು ಸದೃಢವಾಗಿಸುವ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳನ್ನು ಜನಸ್ನೇಹಿಯನ್ನಾಗಿ ಮಾಡಲಾಗುವುದು. ರೈತರ ಮನವಿಯಂತೆ ಸಹಕಾರಿ ಸಂಘಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಸಾಲ ಸೌಲಭ್ಯ ಒದಗಿಸಲು ಯೋಜನೆಗಳನ್ನು ರೂಪಿಸಲಾಗುವುದು.

▶▶ **ಕೆ.ಎನ್. ರಾಜಣ್ಣ,**
ಸಹಕಾರ ಸಚಿವರು

ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಮಹಿಳಾ ಸಬಲೀಕರಣದಲ್ಲಿ, ರೈತರ ಸಬಲೀಕರಣದಲ್ಲಿ, ಯುವಕರ ಸಬಲೀಕರಣದಲ್ಲಿ, ಕಾರ್ಮಿಕರ ಸಬಲೀಕರಣದಲ್ಲಿ ಇಡೀ ದೇಶದಲ್ಲಿ ಸಹಕಾರಿ ಕ್ಷೇತ್ರ ಅಪೂರ್ವವಾದಂತಹ ಅಮೋಘವಾದಂತ ಒಂದು ಕೊಡುಗೆಯನ್ನು ಕೊಟ್ಟಿದೆ ಎಂದರೆ ಅತೀಶಯೋಕ್ತಿಯಾಗುವುದಿಲ್ಲ.

▶▶ **ಈಶ್ವರ ಬಿ. ಖಂಡ್ರೆ**
ಅರಣ್ಯ, ಜೈವಿಕ ಮತ್ತು ಪರಿಸರ ಸಚಿವರು

ಮೃತ ವ್ಯಕ್ತಿಯ ಎಟಿಎಂ ಕಾರ್ಡ್‌ನಿಂದ ಹಣ ಡ್ರಾ ಮಾಡುವುದು ಅಪರಾಧ

ಬ್ಯಾಂಕ್ ಎಟಿಎಂ ಕಾರ್ಡ್ ಇದ್ದರೂ ಸಹ, ಅದರ ಪಿನ್ ಬಗ್ಗೆ ನಿಮಗೆ ತಿಳಿದಿಲ್ಲ. ಸ್ಥಿರ ಠೇವಣಿಗಳು, ಷೇರು ಮಾರುಕಟ್ಟೆ ಮತ್ತು ಸ್ಥಿರಾಸ್ತಿಗಳಲ್ಲಿ ಹೂಡಿಕೆಗಳಿವೆಯೇ ಎಂದು ತಿಳಿಯುವುದು ಸಹ ಕಷ್ಟವಾಗುತ್ತದೆ. ಒಂದೆಡೆ, ಮನುಷ್ಯನ ಅನುಪಸ್ಥಿತಿಯ ನೋವು, ಮತ್ತೊಂದೆಡೆ, ಹಣಕಾಸಿನ ವಹಿವಾಟಿನ ಬಗ್ಗೆ ಕೂಡ ಆತಂಕವಿರುತ್ತದೆ. ಮೃತ ವ್ಯಕ್ತಿಗೆ ಸೇರಿದ ಎಟಿಎಂ ಕಾರ್ಡ್ ಇದ್ದರೆ, ಆ ಕಾರ್ಡ್ ನಿಂದ ಹಣವನ್ನು ಹಿಂಪಡೆಯಬಹುದೇ ಅಥವಾ ಇಲ್ಲವೇ ಎಂದು ಅನೇಕ ಜನರು ಅನುಮಾನಿಸಿರಬಹುದು. ಉಳಿದವು ಅಗತ್ಯವಿಲ್ಲವಾದರೂ, ಸಂತ್ರಸ್ತೆಯ ಕುಟುಂಬ ಸದಸ್ಯರಿಗೆ ಈ ವಿಷಯದಲ್ಲಿ ಸ್ಪಷ್ಟತೆಯ ಅಗತ್ಯವಿದೆ.

ಕುಟುಂಬದ ಸದಸ್ಯರು ಇದ್ದಕ್ಕಿದ್ದಂತೆ ಮೃತಪಟ್ಟರೆ ಆ ಆಘಾತವನ್ನು ಸಹಿಸುವುದು ತುಂಬಾ ಕಷ್ಟ. ಮೃತ ವ್ಯಕ್ತಿಗೆ ಸೇರಿದ ಬ್ಯಾಂಕ್ ಖಾತೆಗಳು, ಹೂಡಿಕೆಗಳು ಮತ್ತು ಹೊಣೆಗಾರಿಕೆಗಳಂತಹ ಹಣಕಾಸಿನ ವ್ಯವಹಾರಗಳ ಬಗ್ಗೆ ತಿಳಿದುಕೊಳ್ಳುವುದು, ಅವುಗಳನ್ನು ನಿರ್ವಹಿಸುವುದು ಸಹ ಕುಟುಂಬ ಸದಸ್ಯರಿಗೆ ತುಂಬಾ ಕಷ್ಟಕರವಾಗಿರುತ್ತದೆ.

ಬ್ಯಾಂಕ್ ಎಟಿಎಂ ಕಾರ್ಡ್ ಇದ್ದರೂ ಸಹ, ಅದರ ಪಿನ್ ಬಗ್ಗೆ ನಿಮಗೆ ತಿಳಿದಿಲ್ಲ. ಸ್ಥಿರ ಠೇವಣಿಗಳು, ಷೇರು ಮಾರುಕಟ್ಟೆ ಮತ್ತು ಸ್ಥಿರಾಸ್ತಿಗಳಲ್ಲಿ ಹೂಡಿಕೆಗಳಿವೆಯೇ ಎಂದು ತಿಳಿಯುವುದು ಸಹ ಕಷ್ಟವಾಗುತ್ತದೆ. ಒಂದೆಡೆ, ಮನುಷ್ಯನ ಅನುಪಸ್ಥಿತಿಯ ನೋವು, ಮತ್ತೊಂದೆಡೆ, ಹಣಕಾಸಿನ ವಹಿವಾಟಿನ ಬಗ್ಗೆ ಕೂಡ ಆತಂಕವಿರುತ್ತದೆ. ಮೃತ ವ್ಯಕ್ತಿಗೆ ಸೇರಿದ ಎಟಿಎಂ ಕಾರ್ಡ್ ಇದ್ದರೆ. ಆ ಕಾರ್ಡ್ ನಿಂದ ಹಣವನ್ನು ಹಿಂಪಡೆಯಬಹುದೇ ಅಥವಾ ಇಲ್ಲವೇ ಎಂದು ಅನೇಕ ಜನರು ಅನುಮಾನಿಸಿರಬಹುದು. ಉಳಿದವು ಅಗತ್ಯವಿಲ್ಲವಾದರೂ, ಸಂತ್ರಸ್ತೆಯ ಕುಟುಂಬ ಸದಸ್ಯರಿಗೆ ಈ ವಿಷಯದಲ್ಲಿ ಸ್ಪಷ್ಟತೆಯ ಅಗತ್ಯವಿದೆ.

ಮೃತ ವ್ಯಕ್ತಿಗೆ ಸೇರಿದ ಎಟಿಎಂ ಕಾರ್ಡಿನಿಂದ ಹಣವನ್ನು ಹಿಂಪಡೆಯುವುದು ಕಾನೂನುಬಾಹಿರ ಮತ್ತು ಅಪರಾಧವಾಗಿದೆ. ನೀವು ಆ ಕುಟುಂಬದ ಸದಸ್ಯ ಅಥವಾ ನಾಮನಿರ್ದೇಶಿತರಾಗಿದ್ದರೂ ಸಹ, ಮೃತರ ಖಾತೆಯಲ್ಲಿ ಹಣವನ್ನು ಪ್ರವೇಶಿಸಲು ನೀವು ಕಾನೂನು ಪ್ರಕ್ರಿಯೆಗಳನ್ನು ಅನುಸರಿಸಬೇಕು.

ಮೃತ ವ್ಯಕ್ತಿಗೆ ಸೇರಿದ ಹಣವನ್ನು ತೆಗೆದುಕೊಳ್ಳುವ ಕಾನೂನು ಪ್ರಕ್ರಿಯೆಗಳು

ಬ್ಯಾಂಕಿಗೆ ಆ ಬಗ್ಗೆ ತಿಳಿಸುವುದು, ಮೊದಲನೆಯದಾಗಿ, ಗ್ರಾಹಕರು ಸಾವಿನ ಬಗ್ಗೆ ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ತಿಳಿಸಬೇಕು. ನಾಮ ನಿರ್ದೇಶಿತರಾಗಿರಲಿ ಅಥವಾ ಇಲ್ಲದಿರಲಿ, ಅಂತಹ ಮಾಹಿತಿಯನ್ನು ನೀಡಬಹುದು.

ನಾಮ ನಿರ್ದೇಶಿತರಿದ್ದರೆ : ಮೃತರ ಖಾತೆ ವಿವರಗಳಲ್ಲಿ ನಾಮಿನಿಯ ಹೆಸರು ಇದ್ದರೆ, ನಾಮಿನಿಯು ಗ್ರಾಹಕರ ಸಾವಿನ ಬಗ್ಗೆ ಬ್ಯಾಂಕಿಗೆ ತಿಳಿಸಬೇಕು. ಅವರು ಸರಿಯಾದ ಗುರುತಿನ ದಾಖಲೆಗಳೊಂದಿಗೆ ನಾಮ ನಿರ್ದೇಶಿತರು ಎಂದು ಸಾಬೀತುಪಡಿಸಬೇಕು. ಹೆಚ್ಚು ನಾಮ ನಿರ್ದೇಶಿತರು ಇದ್ದರೆ, ಅವರೆಲ್ಲರೂ ತಮ್ಮನ್ನು ತಾವು ಸಾಬೀತುಪಡಿಸಬೇಕು.

ಮೃತ ವ್ಯಕ್ತಿಯ ಬ್ಯಾಂಕ್ ಖಾತೆಯನ್ನು ಪ್ರವೇಶಿಸಲು ಅಗತ್ಯವಿರುವ ದಾಖಲೆಗಳು : ಗ್ರಾಹಕರ ಮರಣ ಪ್ರಮಾಣಪತ್ರ, ಪಾಸ್ ಬುಕ್, ಚೆಕ್ ಬುಕ್, ಟಿಡಿಆರ್ ನಂತಹ ಇತರ ದಾಖಲೆಗಳು ಹಾಗೂ ನಾಮ ನಿರ್ದೇಶಿತರ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್. ಈ ದಾಖಲೆಗಳನ್ನು ಬ್ಯಾಂಕ್ ಶಾಖೆಗೆ ಹಸ್ತಾಂತರಿಸಿದ ನಂತರ, ಬ್ಯಾಂಕ್ ಅಧಿಕಾರಿಗಳು ಅವುಗಳನ್ನು ಪರಿಶೀಲಿಸುತ್ತಾರೆ. ಕಾಮಗಾರಿ ಪೂರ್ಣಗೊಂಡ ನಂತರ ಮೃತರ ಖಾತೆಗೆ ಹಣ ಹಿಂಪಡೆಯಲು ಅನುಮತಿ ನೀಡಲಾಗುವುದು.

ಆಸ್ತಿಗಳ ವರ್ಗಾವಣೆ : ಬ್ಯಾಂಕ್ ಖಾತೆಯಿಂದ ಹಣವನ್ನು ಹಿಂಪಡೆಯುವ ಮೊದಲು, ಆ ವ್ಯಕ್ತಿಗೆ ಸೇರಿದ ಸ್ವತ್ತುಗಳನ್ನು ಕಾನೂನುಬದ್ಧ ಉತ್ತರಾಧಿಕಾರಿ ಅಥವಾ ನಾಮ ನಿರ್ದೇಶಿತರಿಗೆ ವರ್ಗಾಯಿಸಿರಬೇಕು.

ಕಾನೂನು ಕ್ರಮಗಳು : ನಿಯಮಗಳನ್ನು ಅನುಸರಿಸದೆ ಮೃತ ವ್ಯಕ್ತಿಯ ಖಾತೆಯಿಂದ ಹಣವನ್ನು ಹಿಂಪಡೆಯುವುದು ಕಾನೂನು ಬಾಹಿರವೆಂದು ಪರಿಗಣಿಸಲಾಗುತ್ತದೆ. ಇದರ ಪರಿಣಾಮಗಳು ತೀವ್ರವಾಗಬಹುದು. ಭಾರಿ ದಂಡವನ್ನು ವಿಧಿಸಬಹುದು ಅಥವಾ ಜೈಲಿಗೆ ಕಳುಹಿಸಬಹುದು.

ನಿಮ್ಮ ಬ್ಯಾಂಕ್ ಖಾತೆಯನ್ನು ದೀರ್ಘಕಾಲದವರೆಗೆ ಬಳಸದಿದ್ದರೆ, ಅದನ್ನು ನಿಷ್ಕ್ರಿಯಗೊಳಿಸಲಾಗುತ್ತದೆ

ನಿಷ್ಕ್ರಿಯ ಬ್ಯಾಂಕ್ ಖಾತೆಯನ್ನು ಸಕ್ರಿಯಗೊಳಿಸಲು ಯಾವುದೇ ಶುಲ್ಕವನ್ನು ವಿಧಿಸಲಾಗುವುದಿಲ್ಲ. ಭಾರತೀಯ ರಿಸರ್ವ್ ಬ್ಯಾಂಕ್ (RBI) ನಿಯಮಗಳ ಪ್ರಕಾರ, ನಿಮ್ಮ ಖಾತೆಯು ನಿಷ್ಕ್ರಿಯಗೊಂಡಿದ್ದರೂ ಮತ್ತು ಅದರಲ್ಲಿ ನೀವು ಕನಿಷ್ಠ ಬ್ಯಾಲೆನ್ಸ್ ಅನ್ನು ನಿರ್ವಹಿಸದಿದ್ದರೂ ಸಹ, ಬ್ಯಾಂಕ್ ನಿಮಗೆ ಯಾವುದೇ ದಂಡವನ್ನು ವಿಧಿಸಲು ಸಾಧ್ಯವಿಲ್ಲ. ಇದರರ್ಥ ನಿಷ್ಕ್ರಿಯ ಖಾತೆಯನ್ನು ಪುನಃ ಸಕ್ರಿಯಗೊಳಿಸಲು ಯಾವುದೇ ಹೆಚ್ಚುವರಿ ಶುಲ್ಕಗಳು ಅಥವಾ ದಂಡವನ್ನು ವಿಧಿಸಲಾಗುವುದಿಲ್ಲ.

ಇತ್ತೀಚಿನ ದಿನಗಳಲ್ಲಿ, ಜನರು ಬಹು ಬ್ಯಾಂಕ್ ಖಾತೆಗಳನ್ನು ಬಳಸುತ್ತಾರೆ ಮತ್ತು ಆಗಾಗ್ಗೆ ಕೆಲವು ಖಾತೆಗಳು ಕಾಲಾನಂತರದಲ್ಲಿ ಬಳಸುವುದನ್ನು ನಿಲ್ಲಿಸುತ್ತವೆ. ಅಂತಹ ಪರಿಸ್ಥಿತಿಯಲ್ಲಿ, ಅವರು ತಮ್ಮ ಯಾವುದೇ ಬ್ಯಾಂಕ್ ಖಾತೆಯನ್ನು ದೀರ್ಘಕಾಲದವರೆಗೆ ಬಳಸದಿದ್ದರೆ, ಅದು ಯಾವಾಗ ನಿಷ್ಕ್ರಿಯವಾಗುತ್ತದೆ.

ಬ್ಯಾಂಕ್ ಖಾತೆಗಳಿಗೆ ನಿರ್ದಿಷ್ಟ ಸಮಯದ ಮಿತಿ ಇದೆ (ಬ್ಯಾಂಕ್ ಖಾತೆ ವಹಿವಾಟಿನ ಮಿತಿ), ಅದರ ನಂತರ ಯಾವುದೇ ವಹಿವಾಟು ನಡೆಯದಿದ್ದರೆ, ಖಾತೆಯು ನಿಷ್ಕ್ರಿಯವಾಗಬಹುದು. ಸಾಮಾನ್ಯವಾಗಿ, 12 ತಿಂಗಳವರೆಗೆ ಬ್ಯಾಂಕ್ ಖಾತೆಯಲ್ಲಿ ಯಾವುದೇ ವಹಿವಾಟು ಇಲ್ಲದಿದ್ದರೆ, ಬ್ಯಾಂಕ್ ತನ್ನ ಗ್ರಾಹಕರಿಗೆ ಅಧಿಸೂಚನೆಯನ್ನು ಕಳುಹಿಸುತ್ತದೆ ಮತ್ತು ಖಾತೆಯಲ್ಲಿ ಮುಂದಿನ 12 ತಿಂಗಳು ಯಾವುದೇ ಚಟುವಟಿಕೆ ಇಲ್ಲದಿದ್ದರೆ ಆ ಖಾತೆಯನ್ನು ನಿಷ್ಕ್ರಿಯಗೊಳಿಸಬಹುದು.

ಆದಾಗ್ಯೂ, ಈ ಸಮಯದ ಮಿತಿಯು ಪ್ರತಿ ಬ್ಯಾಂಕ್‌ಗೆ ವಿಭಿನ್ನವಾಗಿರಬಹುದು. ಕೆಲವು ಬ್ಯಾಂಕ್‌ಗಳು 6 ತಿಂಗಳೊಳಗೆ ಖಾತೆಯನ್ನು ನಿಷ್ಕ್ರಿಯಗೊಳಿಸಿದರೆ, ಕೆಲವು ಬ್ಯಾಂಕ್‌ಗಳು ಒಂದು ವರ್ಷದ ಸಮಯವನ್ನು ನೀಡುತ್ತವೆ. ಈ ಪರಿಸ್ಥಿತಿಯನ್ನು ತಪ್ಪಿಸಲು, ನೀವು ಹೆಚ್ಚುವರಿ ಶುಲ್ಕಗಳು ಅಥವಾ ಇತರ ಸಮಸ್ಯೆಗಳನ್ನು ಎದುರಿಸದಂತೆ ನೀವು ಖಾತೆಯನ್ನು ಬಳಸದಿದ್ದರೆ ಅದನ್ನು ಮುಚ್ಚುವುದು ಉತ್ತಮ.

ನಿಷ್ಕ್ರಿಯ ಖಾತೆಯನ್ನು ಕ್ರಮಬದ್ಧಗೊಳಿಸುವುದು ಹೇಗೆ? : ಯಾವುದೇ ನಿಷ್ಕ್ರಿಯ ಖಾತೆಯನ್ನು ಸುಲಭವಾಗಿ ಸಾಮಾನ್ಯ ಖಾತೆಯಾಗಿ ಪರಿವರ್ತಿಸಬಹುದು. ಇದಕ್ಕಾಗಿ ನೀವು ಬ್ಯಾಂಕಿಗೆ ಹೋಗಿ KYC ಮಾಡಿಸಿಕೊಳ್ಳಬೇಕು ಮತ್ತು ಇದಕ್ಕೆ PAN, Aadhaar ನಂತಹ ಪ್ರಮುಖ ದಾಖಲೆಗಳು ಬೇಕಾಗುತ್ತವೆ. ನೀವು ಜಂಟಿ ಖಾತೆಯನ್ನು ಹೊಂದಿದ್ದರೆ ಎರಡೂ ಖಾತೆದಾರರು KYC ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ.

ಖಾತೆಯನ್ನು ಪುನಃ ಸಕ್ರಿಯಗೊಳಿಸಲು ಏನು ಮಾಡಬೇಕು? : ನಿಷ್ಕ್ರಿಯ ಬ್ಯಾಂಕ್ ಖಾತೆಯನ್ನು ಸಕ್ರಿಯಗೊಳಿಸಲು ಯಾವುದೇ ಶುಲ್ಕವನ್ನು ವಿಧಿಸಲಾಗುವುದಿಲ್ಲ. ಭಾರತೀಯ ರಿಸರ್ವ್ ಬ್ಯಾಂಕ್ (RBI) ನಿಯಮಗಳ ಪ್ರಕಾರ, ನಿಮ್ಮ ಖಾತೆಯು ನಿಷ್ಕ್ರಿಯಗೊಂಡಿದ್ದರೂ ಮತ್ತು ಅದರಲ್ಲಿ ನೀವು ಕನಿಷ್ಠ ಬ್ಯಾಲೆನ್ಸ್ ಅನ್ನು ನಿರ್ವಹಿಸದಿದ್ದರೂ ಸಹ, ಬ್ಯಾಂಕ್ ನಿಮಗೆ ಯಾವುದೇ ದಂಡವನ್ನು ವಿಧಿಸಲು ಸಾಧ್ಯವಿಲ್ಲ. ಇದರರ್ಥ ನಿಷ್ಕ್ರಿಯ ಖಾತೆಯನ್ನು ಪುನಃ ಸಕ್ರಿಯಗೊಳಿಸಲು ಯಾವುದೇ ಹೆಚ್ಚುವರಿ ಶುಲ್ಕಗಳು ಅಥವಾ ದಂಡವನ್ನು ವಿಧಿಸಲಾಗುವುದಿಲ್ಲ. ಬ್ಯಾಂಕ್ ಖಾತೆಗಳನ್ನು ನಿಷ್ಕ್ರಿಯಗೊಳಿಸುವ ಉದ್ದೇಶವು ಗ್ರಾಹಕರಿಗೆ ತಮ್ಮ ಖಾತೆಯು ಬಳಕೆಯಲ್ಲಿಲ್ಲ ಎಂದು ತಿಳಿಸುವುದು ಮಾತ್ರ. ನೀವು ಈ ಖಾತೆಯನ್ನು ಮರುಸಕ್ರಿಯಗೊಳಿಸಲು ಬಯಸಿದರೆ, ನೀವು ಬ್ಯಾಂಕ್ ಅನ್ನು ಸಂಪರ್ಕಿಸಿ ಮತ್ತು ಕೆಲವು ಔಪಚಾರಿಕತೆಗಳನ್ನು ಪೂರ್ಣಗೊಳಿಸಬೇಕು. ಪ್ರಕ್ರಿಯೆಯು ಸರಳವಾಗಿದೆ ಮತ್ತು ಯಾವುದೇ ಹೆಚ್ಚುವರಿ ಶುಲ್ಕವಿಲ್ಲದೆ ಖಾತೆಯನ್ನು ಪುನಃ ಸಕ್ರಿಯಗೊಳಿಸಲಾಗುತ್ತದೆ.

ಆಡಳಿತ ಮಂಡಳಿ ನಿರ್ದೇಶಕರು

ಶ್ರೀ ಎಚ್.ಕೆ. ಪಾಟೀಲ
ಅಧ್ಯಕ್ಷರು

ಶ್ರೀ ಪರಮಶಿವಯ್ಯ ಬಿ.ಎಸ್.
ಉಪಾಧ್ಯಕ್ಷರು

ಶ್ರೀ ಡಿ.ಟಿ. ಪಾಟೀಲ
ನಿರ್ದೇಶಕರು

ಶ್ರೀ ರುದ್ರೇಗೌಡ
ನಿರ್ದೇಶಕರು

ಶ್ರೀ ಅಶೋಕ ಮಲ್ಲಪ್ಪ
ಮನಗೂಳಿ, ನಿರ್ದೇಶಕರು

ಶ್ರೀ ಕೃಷ್ಣ ಹೆಚ್.ಸಿ.
ನಿರ್ದೇಶಕರು

ಶ್ರೀ ಕೋಗುಂಡಿ ಬಕ್ಕೇಶಪ್ಪ
ನಿರ್ದೇಶಕರು

ಶ್ರೀ ಬಸವರಾಜ ಈಶ್ವರಪ್ಪಾ
ಕಲ್ಯಾಣಶೆಟ್ಟಿ, ನಿರ್ದೇಶಕರು

ಶ್ರೀ ಎಸ್.ಆರ್.ಹರೀಶ್ ಆಚಾರ್
ನಿರ್ದೇಶಕರು

ಶ್ರೀ ಕೃಷ್ಣಮೂರ್ತಿ ಭಂಡಾರಿ
ನಿರ್ದೇಶಕರು

ಶ್ರೀ ರಾಘವ ವಿಷ್ಣು ಬಾಳೇರಿ
ನಿರ್ದೇಶಕರು

ಶ್ರೀ ಮಲಕಣ್ಣ ಡಿ. ಪಾಟೀಲ
ನಿರ್ದೇಶಕರು

ಶ್ರೀ ರಾಜಕುಮಾರ ಬಸವರಾಜ
ಬಾದವಾಡಗಿ, ನಿರ್ದೇಶಕರು

ಶ್ರೀ ನಿರಂಜನ್ ಟಿ.ಎಸ್.
ನಿರ್ದೇಶಕರು

ಡಾ. ಎಂ.ಬಿ. ಮಂಜೇಗೌಡ
ನಿರ್ದೇಶಕರು

ಶ್ರೀ ಕೋದಂಡರಾಮ ಬಿ.
ನಿರ್ದೇಶಕರು

ಶ್ರೀಮತಿ ಮಲ್ಲಮ್ಮಾ ಶಿ.
ಯಾಳವಾರ ನಿರ್ದೇಶಕರು

ಶ್ರೀಮತಿ ವೀರಮ್ಮ ಪಿ.
ನಿರ್ದೇಶಕರು

ಶ್ರೀ ಟಿ.ಎಚ್.ಎಂ. ಕುಮಾರ್, ಭಾ.ಆ.ಸೇ.
ಸಹಕಾರ ಸಂಘಗಳ ನಿಬಂಧಕರು

ಶ್ರೀ ಎಂ.ಕೆ. ಪಟ್ಟಣಶೆಟ್ಟಿ
ವಿಶೇಷ ಆಹ್ವಾನಿತರು

ಆಡಳಿತ ಮಂಡಳಿ ನಿರ್ದೇಶಕರು

ಶ್ರೀ ಎಸ್.ಬಿ.ಎಂ. ಮಂಜು
ವಿಶೇಷ ಆಹ್ವಾನಿತರು

ಶ್ರೀ ರಘುನಾಥ್ ಸಿ.
ವಿಶೇಷ ಆಹ್ವಾನಿತರು

ಶ್ರೀ ವಿಜಯಾನಂದ ಬಿ. ಹೊಸಕೋಟಿ
ವಿಶೇಷ ಆಹ್ವಾನಿತರು

ಶ್ರೀ ಪುಂಡಲೀಕ ಎನ್. ಕೇರೂರೆ
ಮುಖ್ಯಕಾರ್ಯನಿರ್ವಹಣಾಧಿಕಾರಿ

ಸಹಕಾರ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು

ಶ್ರೀ ವಿಕ್ರಮ ಆರ್. ಸಿರೂರ

ಶ್ರೀ ಎಂ.ಎಂ. ಮೆಟಗುಡ್ಡ

ಶ್ರೀ ಬಿ.ಎನ್. ಲೋಕೇಶ್

ಶ್ರೀ ಚಂದ್ರಮೌಳಿ ಎಸ್.

ಶ್ರೀ ಆರ್.ಎಸ್. ಸುಬ್ರಹ್ಮಣ್ಯ

ಶ್ರೀ ಪಿ.ಎಲ್. ವೆಂಕಟರಾಮರೆಡ್ಡಿ

ಶ್ರೀ ಶರಣಪ್ಪ ಎಸ್. ವಾರದ

ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ

ಶ್ರೀ ಪಿ.ಎನ್. ಸುರೇಶ್

ಶ್ರೀ ಸುಧಾಕರ ಭಟ್
ಬ್ಯಾಂಕಿಂಗ್ ಸಲಹೆಗಾರರು

ಪ್ರಿಯದರ್ಶಿನಿ ಮಹಿಳಾ ಅರ್ಬನ್ ಸಹಕಾರ ಬ್ಯಾಂಕಿನ ಬೆಳ್ಳಿ ಮಹೋತ್ಸವ ಸಮಾರಂಭವನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಎಚ್.ಕೆ. ಪಾಟೀಲರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪರಮ ಪೂಜ್ಯ ಶ್ರೀ ಮ.ನಿ.ಪ್ರ. ಸದಾಶಿವ ಮಹಾಸ್ವಾಮಿಗಳು, ಹುಕ್ಕೇರಿಮಠ, ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ದಾಕ್ಷಾಯಣಿ ಬಿ. ಗಾಣಿಗೇರ, ಬೆಂಗಳೂರು ಆದಾಯ ತೆರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತರಾದ ಶ್ರೀಮತಿ ಪ್ರಿಯದರ್ಶಿನಿ ಎಲ್. ಬಸೇಗಣ್ಣಿ, ಹಾವೇರಿ ಜಿಲ್ಲಾ ಆಸ್ಪತ್ರೆಯ ಮುಖ್ಯ ದಂತ ಆರೋಗ್ಯಾಧಿಕಾರಿಗಳಾದ ಡಾ. ಕಲ್ಪನಾ ಎಂ.ಎಸ್., ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಷಣ್ಮುಖಪ್ಪ ಮುಚ್ಚಂಡಿ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್, ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ಆಲಮೇಲ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಬೆಳ್ಳಿ ಮಹೋತ್ಸವ ಸಮಾರಂಭವನ್ನು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವರಾದ ಶ್ರೀ ಶಿವಾನಂದ ಪಾಟೀಲ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪಟ್ಟಣದ ಗುರು ಸಂಸ್ಥಾನ ಹಿರೇಮಠದ ಚಂದ್ರಶೇಖರ್ ಶಿವಾಚಾರ್ಯರು, ಶಾಸಕರು ಹಾಗೂ ಮಹಾಮಂಡಳದ ನಿರ್ದೇಶಕರಾದ ಶ್ರೀ ಅಶೋಕ ಎಂ. ಮನಗೂಳಿ, ಬ್ಯಾಂಕಿನ ಅಧ್ಯಕ್ಷರಾದ ಶಿವುಕುಮಾರ ಗುಂದಗಿ, ಬ್ಯಾಂಕಿನ ಉಪಾಧ್ಯಕ್ಷ ರಾಜೇಶ ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರು ಮತ್ತು ವೃತ್ತಿಪರ ನಿರ್ದೇಶಕರುಗಳಿಗೆ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ದಿನಾಂಕ:20.10.2024ರಂದು ಹಾವೇರಿಯಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಮಹಾಮಂಡಳದ ಅಧ್ಯಕ್ಷರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಎಚ್.ಕೆ. ಪಾಟೀಲರು ಉದ್ಘಾಟಿಸಿದರು. ಕೆಸಿಸಿ ಬ್ಯಾಂಕ್ ನಿರ್ದೇಶಕರಾದ ಶ್ರೀ ಕೊಟ್ರೇಶಪ್ಪ ಬಸೇಗಣ್ಣಿ, ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ವೀರಮ್ಮ ಪಿ., ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಷಣ್ಮುಖಪ್ಪ ಮುಚ್ಚಂಡಿ, ವಿವಿಧ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರುಗಳಾದ ಶ್ರೀಮತಿ ದಾಕ್ಷಾಯಣಿ ಬಿ. ಗಾಣಿಗೇರ, ಶ್ರೀ ಜಿ.ಎಸ್. ಮಾಗಾವಿ, ಶ್ರೀ ಪಿ.ಎಮ್. ಗೌಳಿ, ಶ್ರೀ ಚನ್ನಪ್ಪ ಜಿ. ನಾರಾಯಣಪುರ, ಶ್ರೀ ಜಗದೀಶ್ ಸಿ. ತೊಂಡಿಹಾಳ, ಶ್ರೀ ಗಂಗಾಧರ ಬಿ. ಮಾಳಗಿ, ಶ್ರೀ ಎಮ್.ಎಸ್. ಅರಕೇರಿ, ಶ್ರೀ ಎಸ್.ಬಿ. ಪಾಟೀಲ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ದಿನಾಂಕ:28.08.2024ರಂದು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ದೇಶಕರುಗಳಿಗೆ ಮತ್ತು ಸಾಮಾನ್ಯ ಬ್ಯಾಂಕುಗಳ ಮಹಿಳಾ ನಿರ್ದೇಶಕರುಗಳಿಗೆ ಹಾಗೂ ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ದಾವಣಗೆರೆಯ ಬಾಪೂಜಿ ಎಂ.ಬಿ.ಎ ಕಾಲೇಜ್ ಸಭಾಂಗಣದಲ್ಲಿ ಏರ್ಪಡಿಸಿದ್ದ ರಾಜ್ಯ ಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಕೋಗುಂಡಿ ಬಕ್ಕೇಶಪ್ಪ, ಶ್ರೀಮತಿ ವೀರಮ್ಮ ಪಿ., ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ, ಹೊಸಪೇಟೆಯ ವಿಕಾಸ ಸೌಹಾರ್ದ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್ ಮತ್ತಿತರರು ಉಪಸ್ಥಿತರಿದ್ದರು.

ದಿನಾಂಕ:27.09.2024ರಂದು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಎಲ್.ಐ.ಸಿ ನೌಕರರ ಸಹಕಾರ ಬ್ಯಾಂಕಿನ ಸಹಯೋಗದೊಂದಿಗೆ ಪಟ್ಟಣ ಸಹಕಾರ ಆಡಳಿತ ಮಂಡಳಿ ಸದಸ್ಯರುಗಳು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಏರ್ಪಡಿಸಿದ್ದ ಒಂದು ದಿನದ ವಿಚಾರ ಸಂಕಿರಣವನ್ನು ಉಡುಪಿ ಶಾಸಕರು ಮತ್ತು ಮಹಾಲಕ್ಷ್ಮೀ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಯಶಪಾಲ್ ಎ. ಸುವರ್ಣ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಎಸ್.ಆರ್. ಹರೀಶ್ ಆಚಾರ್, ಶ್ರೀ ರಾಜಕುಮಾರ ಬಸವರಾಜ ಬಾದವಾಡಗಿ, ಮಹಾಮಂಡಳದ ವಿಶೇಷ ಆಹ್ವಾನಿತರಾದ ಶ್ರೀ ವಿಜಯಾನಂದ ಬ. ಹೊಸಕೋಟಿ, ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರಾದ ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ, ಉಡುಪಿ ಲಿಕೋ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ. ಕೃಷ್ಣ, ಉಡುಪಿ ಟೌನ್ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಜಯಪ್ರಕಾಶ ಕೆದ್ಲಾಯ, ಉಡುಪಿ ನಾರಾಯಣ ಗುರು ಸಹಕಾರ ಬ್ಯಾಂಕಿನ ಶ್ರೀ ಹರಿಶ್ಚಂದ್ರ ಅಮೀನ್, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್ ಮತ್ತಿತರರು ಉಪಸ್ಥಿತರಿದ್ದರು.

IS : 5244
CM/Licence - 6431259

IAF

IAS ACCREDITED
Management Systems Certification Body
MSCB-215

SAFE Breaker's Nightmare !!!





Manufacturers of :

- Steel Defender Safe
- Steel Safe Deposit Locker Cabinets
- Steel Safe with Safe Deposit Lockers
- Steel Strong Room Doors
- Steel Cash Boxes
- Steel Cabinets &
- Steel Furnitures

Kammar's HUBLI
THE MARK OF SECURITY, SAFETY, STRENGTH & DURABILITY

KAMMAR UDYOG

Siddheshwar Compound, Bankapur Chowk,
P.B. Road, HUBLI-580 024.
9980524275 | 9620777726
kuhubli@gmail.com
www.kammarudyog.in

"Since eight decades we are sincerely stepping forward to satisfy the needs of our customers in all the walks of life."